ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ನಗರಪ್ರಜ್ಞೆ

ಒಂದು ಅಧ್ಯಯನ

ಸಾಹಿತ್ಯ ಎಂ.ಫಿಲ್.ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಅರ್ಪಿಸಿದ

ನಿಬಂಧ

೨೦೧೬-೨೦೧೭

ನೊಂದಣಿ ಸಂಖ್ಯೆ : ೧೬೨೦೦೧೦೩೦೦೭೨

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾನಿಲಯ

ವಿದ್ಯಾರಣ್ಯ ಹಂಪಿ

ಪರಿವಿಡಿ

ಅಧ್ಯಾಯ –೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಆಧುನಿಕ ಕನ್ನಡ ಸಣ್ಣ ಕಥೆಗಳ ಲೋಕ ಬಹಳ ದೊಡ್ಡದು. ಸ್ವಾತಂತ್ರ್ಯ ಪೂರ್ವದ ನವೋದಯ ಕಥೆಗಳಿಂದ ಹಿಡಿದು ಆಧುನಿಕೋತ್ತರದ ಇಂದಿನ ಕಥೆಗಳವರೆಗೆ ಇದರ ವ್ಯಾಪ್ತಿ ಹರಡಿಕೊಂಡಿದೆ. ಪಂಜೆಮಂಗೇಶರಾಯ, ಬಾಗಲೋಡಿ, ದೇವರಾಯ, ಮಾಸ್ತಿ ಆನಂದ, ಅಶ್ವತ್ಥ ಕೆ ಸದಾಶಿವ, ಜಿ.ಎಸ್.ಸದಾಶಿವ, ಕುವೆಂಪು, ಅನಂತಮೂರ್ತಿ,ಲಂಕೇಶ್, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಆಲನಹಳ್ಳಿ ಕೃಷ್ಣ, ವೈದೇಹಿ, ಬೆಸಗರಹಳ್ಳಿ, ರಾಮಣ್ಣ, ದೇವನೂರು ಮಹಾದೇವ, ಕೇಶವರೆಡ್ಡಿಹಂದ್ರಾಳ, ಕುಂವಿ, ಮೊಗಳ್ಳಿ ಗಣೇಶ, ಅಮರೇಶ ನುಗಡೋಣಿ ಮೊದಲಾದ ಕಥೆಗಾರರು ಕಥಾ ಲೋಕವನ್ನು ತಮ್ಮ ವಿಶಿಷ್ಟ ಕಥೆ–ಕಾದಂಬರಿಗಳಿಂದ ಪರಿಪೂರ್ಣಗೊಳಿಸಿದ್ದಾರೆ. ಮನುಷ್ಯ ಜೀವನದ ಹಲವರು ಆಯಾಮಗಳು, ನೋಟ ಕ್ರಮಗಳು ಕನ್ನಡ ಕತೆಗಳಲ್ಲಿ ವ್ಯಕ್ತವಾಗಿವೆ. ಕನ್ನಡ ಸಮಾಜದ ಬಹುಮಟ್ಟಿಗಿನ ಎಲ್ಲ ವಲಯಗಳು ಕಥೆಗಳಲ್ಲಿ ಸ್ಥಾನವನ್ನು ಪಡೆದುಕೊಂಡಿವೆ.

ಕನ್ನಡದ ಎಲ್ಲಾ ಕಥೆಗಾರರು ತಮ್ಮ ಅರಿವಿಗೆ ಬಂದ ಸಮಾಜದ ವಿವಿಧ ಚಿತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ಗ್ರಾಮೀಣ ಜೀವನದ ಏರು–ಪೇರುಗಳು, ಸಮಸ್ಯೆ–ಸವಾಲುಗಳು, ಮಾನವ ಸಂಬಂಧಗಳಲ್ಲಿನ ಬಿರುಕುಗಳು ಹಾಗೆಯೇ ನಗರ ಜೀವನದ ಹೋರಾಟದ ಬದುಕಿನ ಬಗೆಗಳು ಇಲ್ಲಿನ ಸಮಸ್ಯೆ–ಸವಾಲುಗಳು – ಇವನ್ನೆಲ್ಲಾ ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಅದರಲ್ಲೂ ನವ್ಯ–ನವ್ಯೋತ್ತರ ಸಂದರ್ಭದ ಕನ್ನಡ ಕಥೆಗಾರರಾದ ಅನಂತಮೂರ್ತಿ, ಲಂಕೇಶ್, ಯಶವಂತ ಚಿತ್ತಾಲ, ದೇಸಾಯಿ, ವ್ಯಾಸರಾಯ ಬಲ್ಲಾಳ ಹಾಗೂ ಜಯಂತ ಕಾಯ್ಕಿಣಿಯವರು ತಮ್ಮ ಕಥೆಗಳನ್ನು ನಗರ ಬದುಕಿನ ಹಲವು ಎಳೆಗಳನ್ನು ತೆರೆದಿಟ್ಟಿದ್ದಾರೆ. ಮುಂಬೈ ಮಹಾನಗರವನ್ನು ಸಾಂಕೇತಿಕವಾಗಿ ಇಟ್ಟುಕೊಂಡು ಭಾರತದ ಯಾವುದೇ ನಗರದಲ್ಲಿ ನಡೆಯಬಹುದಾದ ನೈಜ ಕಥೆಗಳನ್ನು ಕಾಯ್ಕಿಣಿ ದೇಸಾಯಿ ಹಾಗೂ ವ್ಯಾಸರಾಯ ಬಲ್ಲಾಳರು ಬರೆದಿದ್ದಾರೆ. ಇವರೆಲ್ಲರ ಕಥೆಗಳ ಅಧ್ಯಯನ ಅವಲೋಕನದಿಂದ ಕನ್ನಡ ಸಂಸ್ಕೃತಿ ಹಾಗೂ ಸಮಾಜಗಳಲ್ಲಿ ಆಗುತ್ತಿರುವ ಪರಿವರ್ತನೆಗಳನ್ನು ಗುರುತಿಸಬಹುದು. ಇಲ್ಲಿ ಪ್ರಮುಖವಾಗಿ

ಜಯಂತ ಕಾಯ್ಕಣಿಯವರ ಕಥೆಗಳನ್ನು ಮಾತ್ರ ಮುಖ್ಯವಾಗಿಟ್ಟುಕೊಂಡು ಈ ಅಧ್ಯಯನವನ್ನು ನಡೆಸಲಾಗಿದೆ.

ಜಯಂತ ಕಾಯ್ಕಿಣಿ ಜನವರಿ-೨೪-೧೯೫೫ ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಜನಿಸಿದರು. ತಂದೆ ಗೌರೀಶ್ ಕಾಯ್ಕಿಣಿ, ತಾಯಿ ಶಾಂತಾ ಕಾಯ್ಕಿಣಿ, ನಂತರ ಮುಂಬೈಯಲ್ಲಿ ೨೩ ವರ್ಷಗಳ ಕಾಲ ಬಯೋಕೆಮಿಸ್ಟ್ ಆಗಿದ್ದರು. ಕವಿಯಾಗಿ ಕಥೆಗಾರರಾಗಿ, ನಾಟಕಕಾರರಾಗಿ, ಅಂಕಣಗಾರರಾಗಿ, ಸಂಪಾದಕರಾಗಿ ಟೆಲಿವಿಜನ್ ಸಂದರ್ಶಕರಾಗಿ, ಚಿತ್ರಕಥೆ, ಸಂಭಾಷಣೆಗಾರರಾಗಿ, ಗೀತರಚನಾಕಾರರಾಗಿ ಸಾಹಿತ್ಯದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರಿಗೆ ೨೦೧೦ ರಲ್ಲಿ ನಾಸಿಕ್ ಮುಕ್ತ ವಿದ್ಯಾಪೀಠವು ಅರಂಭಿಸಿದ ಪ್ರತಿಷ್ಠಿತ "ಕುಸುಮಾಗ್ರಜ" ರಾಷ್ಟ್ರೀಯ ಸಾಹಿತ್ಯ ಪುರಸ್ಕಾರ ಪಡೆದ ಮೊದಲ ಭಾರತೀಯ ಲೇಖಕರಾಗಿದ್ದಾರೆ. ೨೦೧೧ ರಲ್ಲಿ ತುಮಕೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಮನ್ನಣೆಯನ್ನು ನೀಡಿದೆ. ನಾಲ್ಕುಬಾರಿ ಕರ್ನಾಟಕ ಸಾಹಿತ್ಯ ಅಕಾಡಮಿ ಪುಸ್ತಕ ಪ್ರಶಸ್ತಿ, ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ, ಬಿ.ಹೆಚ್.ಶ್ರೀಧರ ಕಥಾ ಪ್ರಶಸ್ತಿ, ದೆಹಲಿಯ ಕಥಾ ಪುರಸ್ಕಾರ, ಕರ್ನಾಟಕ ಸರ್ಕಾರದ ಅತ್ಯುತ್ತಮ ಚಲನಚಿತ್ರ ಸಂಭಾಷಣೆಗಾರ, ಅತ್ಯುತ್ತಮ ಗೀತರಚನೆಕಾರ ಪ್ರಶಸ್ತಿ ಹಾಗೂ ಎರಡು ಬಾರಿ "ಫಿಲ್ಮ್‌ಫೇರ್" ಶ್ರೇಷ್ಠ ಗೀತರಚನೆಕಾರ ಪ್ರಶಸ್ತಿಗಳು ಲಭಿಸಿವೆ.

ಕವಿಯಾಗಿ ರಂಗದಿಂದೊಂದಿಷ್ಟು ದೂರ. ಕೋಟಿ ತೀರ್ಥ, ಶ್ರಾವಣ ಮಧ್ಯಾಹ್ನ, ನೀಲಿಮಳೆ, ಒಂದು ಜಿಲೇಬಿ ರಚಿಸಿದ್ದಾರೆ. ಕಥಾ ಸಂಕಲನಗಳು ತೆರೆದಷ್ಟೇ ಬಾಗಿಲು – ದಗಡೂ ಪರಬನ ಅಶ್ವಮೇಧ, ಅಮೃತಬಳ್ಳಿ ಕಷಾಯ, ಬಣ್ಣದ ಕಾಲು, ತೂಫಾನ್ ಮೇಲ್, ಚಾರ್‌ಮಿನಾರ್, ನಾಟಕಗಳು ಸೇವಂತಿ ಪ್ರಸಂಗ, ಜತೆಗಿರುವನು ಚಂದಿರ, ಇತಿ ನಿನ್ನ ಅಮೃತ. ಅಂಕಣಗಳು ಬೊಗಸೆಯಲ್ಲಿ ಮಳೆ, ಶಬ್ಧವೇದ ರಚಿಸಿದ್ದಾರೆ. ಚಿತ್ರಕಥೆ-ಸಂಭಾಷಣೆಯನ್ನು ದ್ವೀಪ, ಪೂರ್ವಾಪರ, ಚಿಗುರಿದ ಕನಸು, ರಮ್ಯ ಚೈತ್ರಕಾಲಗಳಿಗೆ ಬರೆದಿದ್ದಾರೆ. ಮುಂಗಾರು ಮಳೆ, ಮಿಲನ, ಗೆಳೆಯ, ಗಾಳಿಪಟ, ಹಾಗೆ ಸುಮ್ಮನೆ, ಮೊಗ್ಗಿನ ಮನಸು, ಮನಸಾರೆ, ಜಂಗ್ಲಿ, ಬಿರುಗಾಳಿ, ಪಂಚರಂಗಿ, ಪೃಥ್ವಿ, ಚಿಂಗಾರಿ, ಪರಮಾತ್ಮ ಮುಂತಾದ ಚಲನಚಿತ್ರಗಳಿಗೆ ಗೀತರಚನೆ ಮಾಡಿದ್ದಾರೆ.

ಕಥಾ ಸಾಹಿತ್ಯ ಎಂಬುದು ಇಂದಿನ ಬಹುಜನ ಪ್ರಿಯವಾದಂತಹ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಒಂದು ವಸ್ತುವಿನ ಹಿನ್ನಲೆಯಲ್ಲಿ ಅಥವಾ ಒಂದು ಸನ್ನಿವೇಶದ ನೆಲೆಯಲ್ಲಿ ಲೇಖಕನು ಹೇಗೆ ಬದುಕನ್ನು ಗ್ರಹಿಸುತ್ತಾನೆ ಎಂಬುದು ಮುಖ್ಯವಾಗುತ್ತದೆ. ಕಥಾ ಸಾಹಿತ್ಯದಲ್ಲಿ ಜೀವನದ ವಿವಿಧ ಮುಖಗಳನ್ನು ಬಿಂಬಿಸುವುದುದರಿಂದ ಜೀವನವನ್ನು ಅರ್ಥೈಸಿಕೊಳ್ಳಲು ತುಂಬ ಸಹಾಯಕಾರಿಯಾಗುವುದನ್ನು ಕಾಣುತ್ತೇವೆ. ಕಥೆಗಳ ವಸ್ತು ಯಾವುದೇ ಆಗಿದ್ದರು ಸಹ ಜೀವನದ ಒಂದು ತತ್ವವನ್ನು ಹೇಳಬಯಸುವುದನ್ನು ಕಾಣುತ್ತೇವೆ.

ಮುಂದುವರೆದಂತಹ ನಗರಗಳಾದ ಮುಂಬೈ, ದೆಹಲಿ, ಬೆಂಗಳೂರು ಮುಂತಾದ ನಗರಗಳಲ್ಲಿ ಅಲ್ಲಿನ ರಾಜಕೀಯ ವ್ಯವಸ್ಥೆ ಬಂಡವಾಳ ಶಾಹಿಯ ದರ್ಪ, ಶ್ರೀಮಂತರು ಮತ್ತು ಬಡವರ ನಡುವಿನ ಏರಿಳಿತಗಳು, ಮುಂತಾದ ಅಂಶಗಳನ್ನು ನಗರ ಜೀವನವು ಸ್ಪಷ್ಟವಾಗಿ ಬಿಂಬಿಸುವಂತಹುದನ್ನು ಕಾಣಬಹುದಾಗಿದೆ. ಗಂಡು, ಹೆಣ್ಣು ಇಬ್ಬರು ಸಮಾನರು, ಇಬ್ಬರು ದುಡಿದಾಗ ಸಂಸಾರ ಎಂಬ ಜೀವನ ಸುಗಮವಾಗಿ ನಗರಗಳಲ್ಲಿ ಸಾಗುವುದನ್ನು ಕಾಣುತ್ತೇವೆ. ಆದರೆ ಹಿಂದೆ ಹೆಣ್ಣು ಹೊರಗೆ ದುಡಿಯುವುದೇ ತಪ್ಪು. ನಾಲ್ಕು ಗೋಡೆಗಳ ಮಧ್ಯೆ ಇರಬೇಕು ಎಂದು ನಂಬಿದಂತಹ ಕಾಲ ಇತ್ತು. ಮನು "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಸ್ತ್ರೀಗೆ ಸ್ವಾತಂತ್ರ್ಯದ ಅವಶ್ಯಕತೆ ಇಲ್ಲ. ಅಂದರೆ ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿರುವುದರಿಂದ ಸ್ವಾತಂತ್ರ್ಯದ ಅಗತ್ಯವಿಲ್ಲ ಎಂದಿದ್ದಾರೆ. ಆದರೆ ಇಂದಿನ ನಗರಗಳ ವ್ಯವಸ್ಥೆ, ಪರಿಸ್ಥಿತಿಗಳಲ್ಲಿನ ಏರಿಳಿತಗಳನ್ನು ನೋಡಿದರೆ ಇಬ್ಬರು ದುಡಿಯುವಂತಹುದನ್ನು ಕಾಣುತ್ತೇವೆ. ನಗರ ಎಂಬ ಬಲೆಯಲ್ಲಿ ಬದುಕು ಎಂಬ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಗರಗಳಲ್ಲಿ ಇರುವ ಪರಿಸ್ಥಿತಿ ನಮಗೆ ಸ್ಪಷ್ಟ ಚಿತ್ರಣವನ್ನು ಕೊಡುತ್ತದೆ. ಎಷ್ಟೋ ಮನೆಗಳಲ್ಲಿ ದುಡಿಯುವ ತಂದೆಯ ಮುಖವನ್ನು ಮಕ್ಕಳು ನೋಡುವುದೇ ಅಪರೂಪ ಎನಿಸಿ ಬಿಡುತ್ತದೆ. ಬೆಳಿಗ್ಗೆ ಕೆಲಸಕ್ಕೆ ಹೋಗುವಾಗ ಮಕ್ಕಳು ಮಲಗಿರುತ್ತಾರೆ. ರಾತ್ರಿ ಮರಳಿ ಮನೆಗೆ ಬಂದಾಗ ಮತ್ತೆ ಮಕ್ಕಳು ಮಲಗಿರುತ್ತಾರೆ. ಇಲ್ಲಿ ತಂದೆ ಮಕ್ಕಳ ಸಂಬಂಧ, ಬಾಂಧವ್ಯ ಪ್ರೀತಿ, ನಲಿವು ಎಲ್ಲವುಗಳನ್ನು ಕಳೆದುಕೊಳ್ಳುವುದನ್ನು ಕಾಣುತ್ತೇವೆ.

ನಗರೀಕರಣ ಎಂಬುದು ಪ್ರತಿಯೊಂದು ದೊಡ್ಡ ನಗರಗಳನ್ನು ಉನ್ನತ ಮಟ್ಟದಲ್ಲಿರುವಂತೆ ನೋಡಿಕೊಳ್ಳುತ್ತದೆ. ನಗರ ಪ್ರದೇಶಗಳಲ್ಲಿ ದೊರೆಯುವಂತಹ ಸೌಲಭ್ಯಗಳಿಂದ ಹಾಗೂ ಜನರಿಗೆ ಅಗತ್ಯವಾಗಿ ಬೇಕಾದಂತ ವ್ಯವಸ್ಥೆಗಳಿಗಾಗಿ ನಗರಗಳ ಕಡೆ ಹೆಚ್ಚು-ಹೆಚ್ಚು ಆಕರ್ಷಿತರಾಗುತ್ತಾರೆ. ಉನ್ನತ ಶಿಕ್ಷಣ, ಉದ್ಯೋಗ, ವ್ಯಾಪಾರ, ವ್ಯವಹಾರ ಮುಂತಾದ ಸೌಲಭ್ಯಗಳನ್ನು ಹಾಗೂ ವ್ಯವಸ್ಥೆಯನ್ನು ನಾವು ಹೆಚ್ಚಿನದಾಗಿ ನಗರ ಪ್ರದೇಶಗಳಲ್ಲಿ ಕಾಣುತ್ತೇವೆ. ಉನ್ನತ ಬದುಕಿಗಾಗಿ ನಗರ ಪ್ರದೇಶಗಳಿಗೆ ಬರುತ್ತಾರೆ. ತಮ್ಮ ಬದುಕನ್ನು ಕಂಡುಕೊಳ್ಳುತ್ತಾರೆ.

ನಗರದೊಳಗಿನ ಯಾಂತ್ರಿಕ ಬದುಕು ತನ್ನದೇ ಆದ ಒತ್ತಡಗಳ ನಡುವೆ ಭಿನ್ನ ಸಂಸ್ಕೃತಿಯ ವಿಶಿಷ್ಟ ಮುಖಾ-ಮುಖಿಯನ್ನು ಕಾಣಬಹುದು. ವಸುದೇಂದ್ರ ರವರ "ಯುಗಾದಿ" ಕಥೆಯಲ್ಲಿ ಪ್ರಹ್ಲಾದ ತಂದೆ ಗೋಪಣ್ಣನನ್ನು ನಡೆಸಿಕೊಳ್ಳುವ ರೀತಿಯನ್ನು ನೋಡಿದಾಗ ಮಾನವೀಯ ಸಂಬಂಧಗಳ ಕೊಂಡಿ ಎಲ್ಲೋ ಒಂದು ಕಡೆ ಕಳಚಿಕೊಳ್ಳುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ನಗರ ಎಂದ ತಕ್ಷಣ ನಮ್ಮಲ್ಲಿರುವಂತಹ ಒಂದು ಗ್ರಹಿಕೆ ಎಂದರೆ ಎಲ್ಲಾ ಸೌಲಭ್ಯಗಳು ಸಿಗುತ್ತದೆ. ಸುಖವಾಗಿರಬಹುದೆಂದು. ಆದರೆ ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಬಂದ ಜನ ಅಲ್ಲಿನ ಸಮಾಜದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಅಲ್ಲಿನ ಕೆಲವು ರಾಜಕೀಯ ವ್ಯವಸ್ಥೆ, ಬಂಡವಾಳಶಾಯಿ, ಹಿಡಿತ ಮೊದಲಾದವುಗಳನ್ನು ಕಾಣಬಹುದಾಗಿದೆ. ನಗರೀಕರಣದಿಂದಾಗಿ ಮೆಟ್ರೋ ರೈಲುಗಳು, ಬ್ರಿಜ್‌ಗಳ ಆರಂಭ, ರೈಲ್ವೆ ಸ್ಟೇಷನ್‌ಗಳು, ರಸ್ತೆಗಳ ಅಗಲೀಕರಣ ಇವು ಮುಂದುವರೆಯುತ್ತಿರುವ ನಗರಗಳಲ್ಲಿ ಜನತೆಯನ್ನು ಆಕರ್ಷಿಸುತ್ತದೆ.

ಉದ್ಯೋಗ, ಶಿಕ್ಷಣ, ಜೀವನ, ಮನುಷ್ಯನಿಗೆ ದೊರಕುವಂತೆ ಮೂಲಭೂತ ಸೌಲಭ್ಯಗಳು ಸಿಗುವುದರಿಂದ ಯುವ ಜನತೆ ನಗರಗಳ ಕಡೆ ಹೆಚ್ಚಿನ ಚಿಂತನಾಮುಖಿ ಆಲೋಚನೆಗಳನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಪ್ರತಿಯೊಬ್ಬರು ತಮ್ಮ ಮಕ್ಕಳು ಒಳ್ಳೆಯ ಶಿಕ್ಷಣ ಪಡೆಯಬೇಕು. ಒಳ್ಳೆಯ ಉದ್ಯೋಗ ಪಡೆಯಬೇಕೆಂದು ಹಂಬಲಿಸುವವರೆ ಜಾಸ್ತಿ ಸಂಖ್ಯೆಯಲ್ಲಿರುವುದರಿಂದ ನಗರಗಳಲ್ಲಿನ ಜನಸಂಖ್ಯೆ ಹೆಚ್ಚಾಗುವಂತಹುದನ್ನು

ಕಾಣುತ್ತೇವೆ. ಚಪ್ಪಲಿ ಹೊಲಿಯುವವರಿಂದ ಹಿಡಿದು ಕಮ್ಮಾರ, ಬಡಗಿಗಳು, ವೈದ್ಯರು ಇಂಜಿನೀಯರ್ ಶಿಕ್ಷಕರು, ಉದ್ಯಮಿಗಳು ಮೊದಲಾದವರನ್ನು ಕಾಣುತ್ತೇವೆ. ಅವರವರ ಮಟ್ಟದಲ್ಲಿ ಬದುಕನ್ನು ಕಟ್ಟಿಕೊಂಡು ಜೀವನದ ವಿವಿಧ ಆಯಾಮಗಳೊಂದಿಗೆ ಮುಖಾ-ಮುಖಿಯಾಗಿ ಹೋರಾಡುವುದನ್ನು ಕಾಣುತ್ತೇವೆ. ನಗರಗಳಲ್ಲಿ ಸುದ್ಧಿ ಸಮಾಚಾರಗಳು ವರ್ತಮಾನ ವಿಚಾರಗಳು, ಪ್ರಚಲಿತ ವಿದ್ಯಾಮಾನಗಳು ಮುಂತಾದವು. ಗ್ರಾಮೀಣ ಪ್ರದೇಶಗಳಲ್ಲಿ ಆದರೆ ಸೌಲಭ್ಯಗಳ ಕೊರತೆಯಿಂದಾಗಿ ಸ್ವಲ್ಪ ನಿಧಾನವಾಗಿ ತಲುಪುವುದನ್ನು ಕಾಣುತ್ತೇವೆ. ಬಹುಬೇಗ ಸುದ್ಧಿಗಳು ಹರಡಲು ಸಹಾಯಕವಾಗಿರುವಂತಹ ಮಾಧ್ಯಮಗಳೆಂದರೆ ಟಿ.ವಿ. ಇಂಟರ್‌ನೆಟ್, ನ್ಯೂಸ್ ಪೇಪರ್ ಮುಂತಾದವುಗಳಿಂದ ತಿಳಿಯಬಹುದಾಗಿದೆ.

ಜಿ.ಎಸ್.ಶಿವರುದ್ರಪ್ಪನವ "ಮುಂಬೈಜಾತಕ" ಕವನದಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದ ವರೆವಿಗೂ ಮನುಷ್ಯನ ಯಾಂತ್ರಿಕೃತ ಬದುಕನ್ನು ಚಿತ್ರಿಸುವುದನ್ನು ಕಾಣುತ್ತೇವೆ. ಹುಟ್ಟಿದಂತ ಮಕ್ಕಳು ಯಾವ ರೀತಿಯಾಗಿ ವ್ಯವಸ್ಥೆಯೊಂದಿಗೆ ಹೋರಾಡಬೇಕಾಗುತ್ತದೆ. ಕೆಲವು ಪ್ರೀತಿಗಳು, ಸಂಬಂಧಗಳು ಮೌಲ್ಯಗಳು ಯಾಂತ್ರಿಕೃತ ಬದುಕಿನಿಂದಾಗಿ ದೂರವಾಗುವಂತಹುದನ್ನು ಕಾಣಬಹುದಾಗಿದೆ.

ಒಂದು ಕಡೆ ನಗರಗಳ ಕಡೆ ಹೆಚ್ಚು-ಹೆಚ್ಚು ಆಕರ್ಷಣೆಗೆ ಒಳಪಡುವ ಜನ, ಮತ್ತೊಂದು ಕಡೆ ಯಾಂತ್ರಿಕೃತ ಬದುಕಿನಲ್ಲಿ ಸಿಲುಕಿರುವಂತ ಜನ ಇವರ ಮಧ್ಯೆ ಇರುವಂತ ಅಂತರವನ್ನು ತೋರ್ಪಡಿಸುತ್ತದೆ. ಕಾಣದೆಮ್ಮೆಯ ಹಾಲು ಬಾಟಲ್‌ನ ಹಾಲು ಅಂದರೆ ಎಂತೆಂತಹ ಹಾಲು ಕಲಬೆರಕೆಯಾಗಿ ಹೊರಬಹುದು. ಮುಂಬೈನಂತಹ ನಗರಗಳ ಜನತೆಗೆ ಒದಗಿಸುತ್ತಾರೆ. ಎಂಬುದು ಸೂಕ್ಷ್ಮವಾಗಿ ಅರ್ಥವಾಗುವಂತಹುದನ್ನು ಕಾಣುತ್ತೇವೆ.

ನಗರ ಜೀವನದಲ್ಲಿ ಬೇರೆಯವರ ವಿಚಾರಗಳಲ್ಲಿ ಭಾವನೆಗಳಲ್ಲಿ, ಅಭಿಪ್ರಾಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಸೇರಿಸುವುದು ಕಡಿಮೆ. ತಮ್ಮ ಜೀವನ ಶೈಲಿ, ಉಡುಗೆ, ತೊಡುಗೆ, ಆಚಾರ-ವಿಚಾರಗಳು ಸಹ ತುಂಬಾ ವಿಭಿನ್ನವಾಗಿರುವಂತಹುಗಳನ್ನು ಕಾಣುತ್ತೇವೆ. ಗ್ರಾಮೀಣ ಪ್ರದೇಶಗಳಲ್ಲಿ ಆದರೆ ಒಂದೇ ದೇವರು, ಒಂದೇ ಧರ್ಮ, ಒಂದೇ

ಜಾತಿ ಮತಗಳನ್ನು ಕಾಣುತ್ತೇವೆ. ನಗರಗಳ್ಲಲಿ ವಿಭಿನ್ನ ಜನತೆಯ ವಿವಿಧ ಆಚರಣೆಯ ವಿವಿಧ ಮುಖಗಳನ್ನು ಕಾಣಬಹುದಾಗಿದೆ.

ನಗರ ಜೀವನದಲ್ಲಿ ಎದುರಾಗುವಂತ ಸವಾಲುಗಳು, ಬಂಡವಾಳ ಶಾಹಿಯ ಹಿಡಿತ, ರಾಜಕೀಯ ವ್ಯವಸ್ಥೆ, ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋಗಿ ನಗರಗಳಲ್ಲಿ ಬದುಕನ್ನು ಕಟ್ಟಿಕೊಂಡಂತ ಜನಗಳು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಅಂಶಗಳ ಹಿನ್ನಲೆಯಲ್ಲಿ ನಾನು ನನ್ನ ಈ ಪ್ರಬಂಧವನ್ನು ಐದು ಅಂಶಗಳ ಮೂಲಕ ವಿಶ್ಲೇಷಿಸುತ್ತೇನೆ.

೧. ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ವಸ್ತು ವಿಶಿಷ್ಟತೆಯ ನೆಲೆಗಳು

೨. ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ನಗರ ಜೀವನದ ಹಲವು ಆಯಾಮಗಳು

೩. ಮುಖ್ಯ ಪಾತ್ರಗಳ ಅಧ್ಯಯನ

೪. ನಗರ ಬದುಕಿನ ಸಮಸ್ಯೆ ಮತ್ತು ಸವಾಲುಗಳನ್ನು ಕಥೆಗಾರರು ನೋಡುವ ಬಗೆ

೫. ಕಥೆಗಳಲ್ಲಿ ನಿರೂಪಣೆ ಮತ್ತು ಭಾಷೆಯ ಬಳಕೆ

ಈ ಮೇಲಿನ ಅಂಶಗಳಿಂದ ನಗರಪ್ರಜ್ಞೆಯನ್ನು ಅಧ್ಯಯನ ಮಾಡಬಹುದಾಗಿದೆ. ಹಾಗೂ ನಗರ ಜೀವನದ ಆಯಾಮಗಳನ್ನು ಭಿನ್ನತೆಯ ಅಂಶಗಳನ್ನು ಕಾಣುತ್ತೇವೆ. ಈ ಅಂಶಗಳನ್ನು ಕಥೆಗಳ ಮೂಲಕ ಶೋಧಿಸಲಾಗಿದೆ. ಈ ನನ್ನ ಪ್ರಯತ್ನ ಒಂದು ನೋಟವಾಗಿದೆ.

*****

ಅಧ್ಯಾಯ–೧

ಅಡಿ ಟಿಪ್ಪಣಿ

೧. ಸುವರ್ಣ ಸಂಪದ ಬಿ.ಕಾ., ಮೂರು ಮತ್ತು ನಾಲ್ಕನೇ ಸೆಮಿಸ್ಟಾರ್	– ನಿರ್ದೇಶಕರು, ಬೆಂಗಳೂರು ವಿಶ್ವವಿದ್ಯಾಲಯ ಪ್ರಸರಾಂಗ ಮತ್ತು ಮುದ್ರಾಣಾಲಯ ಪುಟ ಸಂಖ್ಯೆ–೫೪ ಪ್ರಕಟಣಾ ವರ್ಷ – ೨೦೧೫
೨. ಸಾಹಿತ್ಯ ಸಂಪದ ಕನ್ನಡ ಪುಸ್ತಕ, ದ್ವಿತೀಯ ಪಿ.ಯು.ಸಿ.	– ಜಿ.ಎಸ್.ಎಸ್.ಮುಂಬೈಜಾತಕ ಪುಟ ಸಂಖ್ಯೆ–೫೩

*****

ಅಧ್ಯಾಯ-೨

ಜಯಂತ ಕಾಯ್ಕಿಣಿಯವ ಕಥೆಗಳಲ್ಲಿ ವಸ್ತು ವಿಶಿಷ್ಟತೆಯ ನೆಲೆಗಳು

ಕನ್ನಡ ಸಾಹಿತ್ಯದ ವಿವಿಧ ಪಂಥಗಳಲ್ಲಿ ನವ್ಯ ಪಂಥವು ಒಂದು. ಹೊಸದನ್ನು ಹುಡುಕುವ ಹಾಗೂ ಅದನ್ನು ಅಳವಡಿಸಿಕೊಳ್ಳುವಂತ ಕಾರ್ಯಕ್ಕೆ ಕೈ ಹಾಕಿದವರು ನವ್ಯ ಪಂಥದವರು. ಅನಂತಮೂರ್ತಿ, ಲಂಕೇಶ್, ಯಶವಂತ ಚಿತ್ತಾಲ, ಜಯಂತ ಕಾಯ್ಕಿಣಿ ಮೊದಲಾದವರು ಬದುಕಿನ ವಿವಿಧ ಮುಖಗಳನ್ನು ಗ್ರಹಿಸುವಲ್ಲಿ ಹಾಗೂ ಆ ಸಾರವನ್ನು ಕಥೆಗಳ ಮೂಲಕ ತರುವಲ್ಲಿ ಯಶಸ್ವಿಯಾದವರು. ನವ್ಯವೆಂದರೆ ಹೊಸದು ಇಂಗ್ಲಿಷಿನ modernismಗೆ ಸಂವಾದಿಯಾದ ಪದವಾಗಿದೆ. ಪಾಶ್ಚಾತ್ಯರೇ ಆದಸ ಆಲ್ಬರ್ಟ್‌ಕಮು, ಪ್ರಾನ್ಜ ಕಾಫ್ಕ್ ಜಿನ್‌ಪಾಲ್ ಸಾರ್ತ್ರೆಯವರ ಕಥಾ ಸಾಹಿತ್ಯದಿಂದ ಪ್ರಭಾವಿತರಾದವರು ಅನಂತಮೂರ್ತಿ, ಲಂಕೇಶ್, ಶಾಂತಿನಾಥ ದೇಸಾಯಿ, ಶ್ರೀಕೃಷ್ಣ ಆಲನಹಳ್ಳಿ ಮುಂತಾದವರಿಗೆ ಮಾದರಿಯಾಯಿತು.

ಸಣ್ಣ ಕಥೆಗಳ ಮೂಲಕವೇ ವ್ಯಕ್ತಿ ವಿಶಿಷ್ಟತೆಗಳನ್ನು ಹಾಗೂ ವಿಭಿನ್ನ ಚಿತ್ರಗಳನ್ನು ಕೊಡಲು ಸಹಕಾರಿಯಾಯಿತು. ನಮ್ಮ ಕಥೆಗಳು ಜೀವನದ ಸಾರದ ಜೊತೆಗೆ, ಅವುಗಳಲ್ಲಿ ಇರುವಂತಹ ವಸ್ತು ವಿಶೇಷತೆ, ಭಾಷೆಯ ತಂತ್ರ. ಪ್ರಾರಂಭ ಮುಕ್ತಾಯ ಮೊದಲಾದವುಗಳು ನವ್ಯ ಕಥೆಗಳಲ್ಲಿ ವಿಶಿಷ್ಟವಾಗಿ ಮೂಡಿಬಂದಿರುವುದನ್ನು ಕಾಣುತ್ತೇವೆ. ವಿಭಿನ್ನ ನೆಲೆಗಟ್ಟಿನ ಜೀವನವನ್ನು ನೋಡಲು ಸಾಧ್ಯವಾಯಿತು. ವಸ್ತು ವಿಷಯ ಸನ್ನಿವೇಶವನ್ನು ನೊಡುವ ಹೊಸ ಆಲೋಚನಾದಿಕ್ಕು ಬೆಳೆಯಿತು. ಪ್ರಾಮಾಣಿಕ ಅಭಿವ್ಯಕ್ತಿ ಹಾಗೂ ಅಜ್ಞಾನ ಚಿತ್ತದ ಬಗೆಗಿನ ನವೀನ ಪ್ರಜ್ಞೆ ಮೊದಲಾದವು. ನವ್ಯ ಕಥೆಗಳ ಪ್ರಮುಖ ಲಕ್ಷಣಗಳು. ವ್ಯಕ್ತಿಯು ಇಡಿ ಸಮಾಜದಲ್ಲಿರುವ ಅನೇಕ ಅಂಧಕಾರದ ಅಂಶಗಳನ್ನು ತೊಡೆದು ಹಾಕಲು ನವ್ಯ ಕಥೆಗಳಿಂದ ಸಾಧ್ಯವಾಯಿತು. ಮನುಷ್ಯನ ಮೂಲಭೂತ ಹಾಗೂ ಸಹಜ ಪ್ರವೃತ್ತಿಗಳಾದ ಹಸಿವು, ಬಾಯಾರಿಕೆ, ಲೈಂಗಿಕ ಆಪೇಕ್ಷೆ ಮೊದಲಾದವುಗಳ ಹಿಡಿತದಲ್ಲಿ ಸಿಕ್ಕ ಮನುಷ್ಯ ಯಾವ ರೀತಿಯಾಗಿ ಸಮಾಜದ ಚೌಕಟ್ಟಿನಲ್ಲಿ ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾನೆ ಎಂಬುದನ್ನು ಕಥೆಗಳಲ್ಲಿ ಕಾಣುತ್ತೇವೆ. ಲಂಕೇಶರವರ "ದಾಹ" ಕಥೆಯಲ್ಲಿ ಮನುಷ್ಯನ ಗುಣಗಳನ್ನು ಬಿಂಬಿಸುವಲ್ಲಿ ಹಾಗೂ ಆ ಪಾತ್ರಕ್ಕೆ

ಹೊಂದಿಕೆಯಾಗುವಂತೆ "ಮನುಷ್ಯ ಮೂಲಭೂತ ನೀಚ" ಎಂದು ಕೊಡುವ ಹೇಳಿಕೆ ತನ್ನ ಸ್ವಾರ್ಥ ಹಾಗೂ ಬಯಕೆಗಳ ಈಡೇರಿಕೆಗಾಗಿ ಏನೆಲ್ಲಾ ಕೆಲಸಗಳನ್ನು ಕೈಗೊಳ್ಳುತ್ತಾನೆ. ಹಾಗೂ ಸಮಾಜವನ್ನು ನೋಡುತ್ತಾನೆ ಎಂಬುದು ವ್ಯಕ್ತಗೊಳ್ಳುತ್ತವೆ.

ಲೈಂಗಿಕ ಆಪೇಕ್ಷೆಯನ್ನು ಹೊಂದಿದ ಸಮಾಜದ ಸುತ್ತ-ಮುತ್ತ ಇರುವ ಅಂಕು-ಡೊಂಕು, ಒರೆ, ಕೊರೆಗಳನ್ನು ಬಿಂಬಿಸುವ ಚಿತ್ರ ನಮಗೆ ಲಂಕೇಶ ಕೃತಜ್ಞತೆ ಕಥೆಯಲ್ಲಿ ಕಾಣಬಹುದು. ಸಮಾಜದಲ್ಲಿ ಗಂಡನನ್ನು ಬಿಟ್ಟ ಹೆಣ್ಣು ಮತ್ತೊಬ್ಬನನ್ನು ಇಷ್ಟಪಡುತ್ತಾಳೆಯೇ ನಿಂಗಮ್ಮ ಎಂಬ ಹೆಸರನ್ನು ಬದಲಾಯಿಸಿ ನಿರ್ಮಲ ಎಂಬ ಹೆಸರಿಟ್ಟುಕೊಂಡು ಪುಸ್ತಕದ ಅಂಗಡಿಯಲ್ಲಿ ಕೆಲಸ ಮಾಡುವ ಪ್ರಕಾಶ ಎಂಬ ಹುಡುಗ ನಿರ್ಮಲಳ ಬಗ್ಗೆ ಲೈಂಗಿಕ ಆಪೇಕ್ಷೆಯ ಕಾಮಸೂತ್ರಗಳನ್ನು ಕಲ್ಪಿಸಿಕೊಂಡು, ಹಲವಾರು ಭಾವನೆಗಳನ್ನು ತನ್ನಲ್ಲಿಯೇ ಚಿತ್ರಿಸಿಕೊಂಡು ಆಕೆಯು ತನ್ನ ರೀತಿಯೇ ಭಾವನೆಗಳಿಗೆ ಒಳಗಾಗಿದ್ದಾಳೆ ಎಂಬ ಭ್ರಮೆಯನ್ನಿರಿಸಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ವಾಸ್ತವ ಸಂಗತಿಯೇ ಬೇರೆ ಮದುವೆಯಾಗಿ ಸಂಸಾರದಿಂದ ದೂರವಿರುವ ನಿರ್ಮಲಳ ಬದುಕು ಆ ಅಂಶಗಳನ್ನು ಮೀರಿರುವಂತಹುದೆಂದು ವ್ಯಕ್ತಗೊಳ್ಳುತ್ತದೆ.

'ನಲ್ಲಿಯಲ್ಲಿ ನೀರು ಬಂತು' ಎಂಬ ಕೆ.ಸದಾಶಿವರ ಕಥೆಯಲ್ಲಿ ಮನುಷ್ಯನಿಗೆ ಮನುಷ್ಯತ್ವವೇ ಅತಿ ಮುಖ್ಯವಾದುದು ಎಂಬುದನ್ನು ಸೀತಮ್ಮ ಮತ್ತು ರಂಗಮ್ಮ ಎಂಬ ಇಬ್ಬರು ಹೆಂಗಸರು ನೀರಿಗಾಗಿ ನಡೆಸಿದ ಶೀತಲ ಹೋರಾಟವನ್ನು ಕಾಣುತ್ತೇವೆ. ಮನುಷ್ಯನ ಬದುಕಿನ ಆಂತರ್ಯದಲ್ಲಿಯೂ ಒಂದು ಮಾನವೀಯತೆಯ ಕುಡಿ ಇದೆ ಎಂಬುದು ವ್ಯಕ್ತಗೊಳ್ಳುತ್ತವೆ.

ಬದುಕಿನಲ್ಲಿ ನೆಮ್ಮದಿಯುತವಾಗಿ ಜೀವನ ಸಾಗಿಸಬೇಕಾದರೆ ಸಮಾಜದಲ್ಲಿ ಹೊಂದಾಣಿಕೆ ಎಂಬುದು ಅತ್ಯಗತ್ಯ ಎಂಬುದು ತಿಳಿದುಬರುತ್ತದೆ.

ಶ್ರೀಕಾಂತರ 'ಭೂಮಿ ಕಂಪಿಸಲಿಲ್ಲ' ಕಥೆಯಲ್ಲಿ ಸಮಾಜ ಹೆಣ್ಣನ್ನು ಮದುವೆಯ ಸಂದರ್ಭದಲ್ಲಿ ನೋಡುವ ರೀತಿ ಹಾಗೂ ವಯಸ್ಸಿಗೆ ಬಂದ ಹುಡುಗಿಯನ್ನು ವರನ ಕಡೆಯವರು ನೋಡಲು ಬರುವಾಗ ಇಡುವ ಬೇಡಿಕೆಗಳು ಯಾವ ರೀತಿಯಲ್ಲಿ ಇರುತ್ತವೆ ಎಂಬುದು ಕಂಡು ಬರುತ್ತದೆ. ತನ್ನ ಮನಸ್ಸಿಗೆ ಇಷ್ಟಬಂದಂತೆ ಇರುವ ಹುಡುಗಿಯನ್ನು

ಹಾಗೂ ಆ ಹುಡುಗಿ ಆಕೆಯ ಭಾವನೆಗಳಿಗೆ ಹೆಚ್ಚು ಬೆಲೆ ಕೊಟ್ಟಾಗ ಸಮಾಜ ಕೊಡುವ ಬಿರುದುಗಳೆಂದರೆ ಗಂಡು ಬೀರಿ, ಬಜಾರಿ, ಬಾಯಾಳಿ ಮುಂತಾದವುಗಳು. ಬೇರೆಯವರ ಹಿತಕ್ಕಿಂತ ತನ್ನ ಹಿತಕ್ಕಾಗಿ ಬಾಳನ್ನು ನಡೆಸುವ ಹೆಣ್ಣು ಸಮಾಜದಲ್ಲಿ ಎಂತೆಂಥ ಸಮಸ್ಯೆಗಳನ್ನು ಎದುರಿಸಬೇಕೆಂಬುದನ್ನು ಕಾಣುತ್ತೇವೆ. ಉನ್ನತ ಶಿಕ್ಷಣ ಪಡೆದ ಯುವತಿಯೊಬ್ಬಳು ಸಮಾಜದಲ್ಲಿ ನಡೆಯುವಂತ ವಿಷಯಗಳನ್ನು ವಿಮರ್ಶಾತ್ಮಕವಾಗಿ ಟೀಕಿಸುತ್ತಾಳೆ ಎಂಬ ಸ್ಪಷ್ಟ ಚಿತ್ರಣವನ್ನು ಕಾಣುತ್ತೇವೆ.

ಸಮಾಜದಲ್ಲಿ ಪ್ರಮುಖವಾಗಿ ಕಂಡು ಬರುವ ಹಸಿವು, ಬಡತನ, ಅನಕ್ಷರತೆ, ಅಜ್ಞಾನ ಮೊದಲಾದವುಗಳು ವ್ಯಕ್ತಿಯನ್ನು ಗಾಢಾ ಅಂಧಕಾರದ ಕೂಪದಲ್ಲಿ ಸಮಾಜವನ್ನು ನೋಡುವಂತೆ ಮಾಡುತ್ತವೆ. ಸಮಸ್ಯೆಗಳನ್ನು ಸಮಸ್ಯೆಗಳಾಗಿ ಕಾಣದೇ ಪರಿಹಾರತ್ಮಕ ಮಾರ್ಗದಲ್ಲಿ ಕಾಣಬಹುದಾಗಿದೆ. ಜನಸಂಖ್ಯೆಗನುಗುಣವಾಗಿ ಮೂಲಭೂತತ್ಮಾಕ ಸೌಕರ್ಯಗಳನ್ನು ಒದಗಿಸಲು ಹಾಗೂ ಅಲ್ಲಿನ ಪರಿಸ್ಥಿತಿಗನುಗುಣವಾಗಿ ನಡೆದುಕೊಳ್ಳಲು ತುಂಬಾ ಸಹಕಾರಿಯಾದುದಾಗಿದೆ.

ಮದುವೆಯಾಗದ ಹೆಣ್ಣೊಬ್ಬಳು ಮಗುವನ್ನು ಪಡೆದುಕೊಳ್ಳಬೇಕೆಂಬ ಹುಚ್ಚು ಹಂಬಲ. ಹೆಣ್ಣನ್ನು ಯಾವ ರೀತಿ ಬೇಕಾದರೂ ಬಳಸಿಕೊಳ್ಳಬಹುದು, ಆದರೆ ಮದುವೆಯಾಗದ ಹೆಣ್ಣು ಮಗುವನ್ನು ಪಡೆಯಬಾರದು ಅದಕ್ಕೆ ಸಮಾಜದ ಪುರಸ್ಕಾರವಿಲ್ಲ ಎಂದು ಹೇಳುವ ಪುರುಷರು. ಮದುವೆಯಾಗದೆ ಮಗುವನ್ನು ಏಕೆ ಪಡೆಯಬಾರದು, ಎಂದು ಹಟ ಬೀಳುವ ಲೀಲಾಳಿಗೆ ಪ್ರತಿಯೊಬ್ಬರು ಒಂದೊಂದು ಕಾರಣವನ್ನು ನೀಡಿ ಜಾರಿಕೊಳ್ಳುವ ವ್ಯವಸ್ಥೆ ಅಂದರೆ ಸಮಾಜ ಹೆಣ್ಣನ್ನು ನೋಡುವ ರೀತಿ, ಅಥವಾ ಹೆಣ್ಣು ಸಮಾಜದನ್ನು ಗ್ರಹಿಸಿಕೊಳ್ಳುವಂತ ವ್ಯವಸ್ಥೆ ಇವುಗಳ ಬಂದದಲ್ಲಿ ಸಿಲುಕಿ ಅರ್ಥೈಸಿಕೊಳ್ಳಲು ಒದ್ದಾಡುತ್ತಿರುವ ಸಮಾಜದ ಪ್ರತಿಬಿಂಬಗಳಂತಿರುವ ವ್ಯಕ್ತಿಗಳನ್ನು ಕಾಣಬಹುದಾಗಿದೆ.

ಸಮಾಜದಲ್ಲಿ ಮನೆ ಮಾಡಿರುವ ಅನಿಷ್ಟ ಪದ್ಧತಿಗಳಲ್ಲಿ ಜಾತಿಯತೆಯು ಒಂದಾಗಿದ್ದು, ಈ ಜಾತಿಯತೆ ಎಂಬುದು ಇಂದು ನಿನ್ನೆಯದಲ್ಲ. ತುಂಬಾ ಶತಮಾನಗಳಿಂದ ನಡೆದು ಬಂದಿರುವುದನ್ನು ಕಾಣುತ್ತೇವೆ. ವ್ಯಕ್ತಿಯನ್ನು ಮಾನಸಿಕವಾಗಿ ಮೂಲೆಗುಂಪು ಮಾಡುತ್ತದೆ. ಆ ಜಾತಿಯತೆಗಿಂತ ನಮ್ಮ ಜನ ಹೊಂದಿರುವ

ಅಭಿಪ್ರಾಯಗಳು ಸಮಾಜವನ್ನು ಅಂಧಕೂಪಕ್ಕೆ ತಳ್ಳುತ್ತವೆ. ಪ್ರತಿಯೊಂದು ರಂಗದಲ್ಲಿಯೂ ಪ್ರಮುಖ ವಿಶ್ಲೇಷಣೆ ಮಾದರಿಯಾಗಿರುವುದನ್ನು ಕಾಣಬಹುದಾಗಿದೆ. ಮನುಷ್ಯತನ ಹೃದಯವನ್ನು ಕಲಕುವಂತ ಸ್ಥಿತಿಯನ್ನು "ಮುಟ್ಟಿಸಿಕೊಂಡವನು" ಕಥೆಯಲ್ಲಿ ಕಾಣಬಹುದು.

ಜೀವ ಹೋದರು ಜಾತಿಗೆಡುವುದಿಲ್ಲ ಎಂಬ ಚಿತ್ರಣ ವೈದ್ಯನಾದವನು ಕೆಳಜಾತಿಯವನಾದರೆ ಅವನಿಂದ ಚಿಕಿತ್ಸೆಪಡೆಯಬಾರದು ಎಂಬ ನಂಬಿಕೆಯನ್ನು ಕಾಣಬಹುದು. ಅಂಧಕಾರ, ಮೂಡನಂಬಿಕೆಗಳಿಗೆ ತನ್ನನ್ನು ತಾನು ಬಲಿಕೊಟ್ಟು ಕೊಳ್ಳುವಂತ ಕೆಲಸಕ್ಕೆ ಕೈ ಹಾಕುತ್ತಾನೆ. ಸಮಾಜ ಎಷ್ಟು ಮುಂದುವರೆಯುತ್ತಿದ್ದರೂ ಕೆಲವೊಂದು ಅಸ್ಪಷ್ಟ ಅಂಶಗಳಿಂದ ಸ್ಪಷ್ಟ ಉದ್ದೇಶಗಳಿಲ್ಲದೆ ಅಸ್ವಸ್ಥ ಸಮಾಜವಾಗುತ್ತದೆ.

ಸಾಮಾಜಿಕವಾಗಿ ಸಮಾಜ ಅಸ್ವಸ್ಥಗೊಂಡಾಗ ವ್ಯಕ್ತಿಯೇ ವೈಧ್ಯನಾಗಬೇಕಾಗುತ್ತದೆ. ಯಾವುದೇ ರೀತಿಯಲ್ಲಾದರೂ ಸಮಾಜವನ್ನು ಅರ್ಥೈಸಿಕೊಂಡು ಚಿಕಿತ್ಸಕನಾಗಬೇಕು. ಗಂಡು, ಹೆಣ್ಣುಗಳ ಸಮಾನತೆ, ಕಾಳಜಿ, ಅಶಕ್ತತೆ ಮುಂತಾದ ಅಂಶಗಳನ್ನು ನೆಲೆಗೊಳಿಸಿಕೊಳ್ಳಬೇಕು. ವಸ್ತು ಸಂಗತಿ ಯಾವುದೇ ಆದರೂ ಹೊಸ ಪ್ರಜ್ಞೆ ಮೂಡುವಂತೆ ಮಾಡಬೇಕಾಗುತ್ತದೆ.

ಹೀಗಿರುವುದೇ ಸಮಾಜವಲ್ಲ. ಹೀಗೆ ಇರಬೇಕು ಎಂದು ಪ್ರಶಂಸತ್ಮಕವಾಗಿ ಬದಲಾವಣೆಯನ್ನು ತರುವಂತಹುದಾಗಬೇಕು. ವಿವಿಧ ಚಿತ್ರಣಗಳ ನೆಲೆಯಲ್ಲಿಯೂ ಮಿತಿ ಮೀರಿದ ಆಸ್ಥೆಗಳನ್ನು ಕಾಣಬಹುದಾಗಿದೆ. ಸಮಾಜ ಸ್ವಚ್ಛತೆ ನೇರ ಭಾವನೆಗಳಿಗೆ ಪ್ರತಿಕ್ರಿಯಿಸುವಂತಾಗಬೇಕು. ಭಾವನೆಗಳನ್ನು ಅರ್ಥೈಸಿಕೊಂಡು ನೆಲೆಗೊಳಿಸುವಂತಾಗಬೇಕು. ಬದುಕಿನ ಅರ್ಥೈಕೆ, ಮನಸ್ಸಿನ ಅರ್ಥೈಕೆ ಯಾವುದರಲ್ಲೂ ಇರಬಹುದು. ಉತ್ತಮ ನೆಲೆಗಟ್ಟಿನಿಂದ ಅರ್ಥೈಸಿಕೊಳ್ಳುವಂತಹುದಾಗಿದೆ. ಜಯಂತ ಕಾಯ್ಕಿಣಿ ಯವರ ಕಥೆಗಳಲ್ಲಿ ವ್ಯಕ್ತಿಗಿಂತ ವಸ್ತುವಿಗೆ ಬೆಲೆಯನ್ನು ಕೊಟ್ಟು ಅರ್ಥೈಸಿಕೊಳ್ಳಬೇಕು.

ಮುಂಬೈನಂತಹ ಮಹಾನಗರದಲ್ಲಿ ೨೩ ವರ್ಷಗಳ ಕಾಲ ಜೀವನವನ್ನು ನಡೆಸಿದಂತ ಕಾಯ್ಕಿಣಿಯವರು... ಮುಂಬೈನ ಜನ ಜೀವನದ ಚಿತ್ರಣವನ್ನು ಸಮಸ್ಯೆಯಿಂದ ಪರಿಹಾರದತ್ತ ಕೊಂಡ್ಯೊಯ್ದಿದ್ದಾರೆ. ಯಾರಿಂದ ಫಲವನ್ನು ಬಯಸದೆ ಜನ ಪ್ರೀತಿಯಲ್ಲಿ

ಸಹೋದರ ಭಾವನೆಯನ್ನು ಮಿಡಿಕಿಸುವಂತ ಸಂಬಂಧವನ್ನು ಬೆಸದಿದ್ದಾರೆ. ಕೆಲವು ಕಡೆ ಹಣವೇ ಮುಖ್ಯ ಎಂದರೆ ಮತ್ತೊಂದು ಕಡೆ ಹಣಕ್ಕಿಂತ ಸ್ನೇಹ ಮಾನವೀಯ ಮೌಲ್ಯಗಳು ಅತ್ಯಂತ ಮಹತ್ವದವುಗಳಾಗಿವೆ.

ಸಂಸಾರಕ್ಕಿಂತಲೂ ಸಮಾಜವೇ ಮುಖ್ಯ. ಮೊದಲು ಸಮಾಜವನ್ನು ಸುಧಾರಿಸಬೇಕು ಎಂದು ಮುಂದೆ ಬರುವಂತ ಧೀಮಂತ ಹೆಣ್ಣು ಮಕ್ಕಳನ್ನು ಕಥೆಗಳಲ್ಲಿ ಚಿತ್ರಿಸಿದ್ದಾರೆ. “No present please” ಎಂಬ ಕಥೆಯಲ್ಲಿ ಕಾಣಬಹುದು. ಮದುವೆಗೆ ಬಂದವರಿಂದ ಯಾವ ಫಲವನ್ನು ಬಯಸದೇ ತಮ್ಮದೆ ಆದ ಜೀವನವನ್ನು ಕಟ್ಟಿಕೊಳ್ಳಬೇಕು ಎಂದು ಬಯಸುವ ಜೀವಿಗಳು ತಾವು ದುಡಿದು ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕೆಂದು ಬಯಸುವುದು ಎಂಬುದು ಇಡೀ ಸಮಾಜಕ್ಕೆ ಮಾದರಿಯಾದಂತ ಚಿತ್ರಣವಾಗಿದೆ. ಏಕೆಂದರೆ ಸಮಾಜದ ಬಹುಪಾಲು ಜನರು ಬೇರೆಯವರ ಸಂಸಾರ, ಸಂಬಂಧ, ಹಣದಲ್ಲಿಯೇ ಜೀವನವನ್ನು ಕಳೆಯುವಂತಿರುವವರು ಯಾರ ಬಂಧವು ಇಲ್ಲದೆ ಸ್ವತಃ ಬದುಕನ್ನು ಕಟ್ಟಿಕೊಳ್ಳುವಂತಹುದನ್ನು ಕಾಣುತ್ತೇವೆ.

ರಕ್ತ ಸಂಬಂಧದ ನೆಲೆಯಲ್ಲಿಯೂ ಬದುಕನ್ನು ಕಟ್ಟಿಕೊಳ್ಳುವಂತ ತಮ್ಮನನ್ನು ಹುಡುಕಿ ಮತ್ತೆ ಸಂಸಾರಕ್ಕೆ ಸೇರಿಸಬೇಕು. ಅವನದೊಂದು ಪರಿಪೂರ್ಣವಾದ ಜೀವನವಾಗಬೇಕು ಎಂದು ಹುಡುಕುವಂತ ಕುಸುಮ ಪೂರ್ವಿಯನ್ನು ಕಾಣಬಹುದಾಗಿದೆ. ಹಣಕ್ಕಿಂತಲೂ ಮಾನವೀಯ ಮೌಲ್ಯಗಳಾದ ದಯೆ, ಪ್ರೀತಿ, ವಿಶ್ವಾಸ, ನಂಬಿಕೆ, ಕರುಣೆಗಳು ಅತಿ ಮಹತ್ವವು. ಸಮಾಜದಲ್ಲಿ ನೆಲೆಸಿದಾಗ ಸಮಾಜ ಸುಧಾರಣೆಯಾಗುತ್ತದೆ. ಮನುಷ್ಯ ಮೂಲತಃ ಸಮಾಜಜೀವಿ, ಸಂಘಜೀವಿ, ಸಮಾಜದೊಂದಿಗೆ ಹೊಂದಿಕೊಂಡು ಜೀವಿಸುವಾಗ ಪರಸ್ಪರ ಸಹಕಾರ ಎಂಬುದು ಅತ್ಯಂತ ಮಹತ್ವವಾದುದು. ಸ್ನೇಹಿತನನ್ನು ಆಸ್ಪತ್ರೆಗೆ ಸೇರಿಸುವ ಮೂಲಕ ಹೃದಯಕ್ಕೆ ಹತ್ತಿರವಾದ ಘಟನೆ ಮಹತ್ವವಾದುದಾಗಿದೆ.

“ನ ಸ್ತ್ರೀ ಸ್ವತಂತ್ರ್ಯಂ ಅರ್ಹತಿ” ಮನು ಹೇಳಿದಂತೆ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. ಏಕೆಂದರೆ ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿರುವುದರಿಂದ ಆಕೆಗೆ ಸ್ವಾತಂತ್ರ್ಯದ ಅಗತ್ಯವಿಲ್ಲ ಎಂದಿದ್ದಾನೆ. ಆದರೆ ಸ್ವಾತಂತ್ರ್ಯವಾಗಿಯೂ ಗಂಡಿನ ಆಸರೆಯಲ್ಲದೆ ಹೆಣ್ಣೊಬ್ಬಳು ಬದುಕಬಹುದು ಎಂಬುದನ್ನು

ಕಾಯ್ಕಿಣಿಯವರು ಭಾಮಿನಿ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ತಂದೆ ತಾಯಿಯನ್ನು ಕಳೆದುಕೊಂಡು ಗುಜರಾತಿ ಮೂಲದ ಯುವಕನನ್ನು ಮದುವೆಯಾಗಿ ಸಮಾಜ ಸೇವೆಗಳಲ್ಲಿ ತೊಡಗಿಸಿಕೊಂಡು ಸ್ವಚ್ಛತೆ, ನೈರ್ಮಲ್ಯಕ್ಕೆ ಮಹತ್ವವನ್ನು ನೀಡಿ ಅನಾಥ ಮಕ್ಕಳನ್ನು ತಂದು ಸಾಕಿ, ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ ಎಲ್ಲಾದರಲ್ಲೂ ಸಾಧನೆ ಮಾಡಿ, ಕೊನೆಗೆ ಗಂಡನನ್ನು ಬಿಟ್ಟು ತವರು ಮನೆಗೆ ತಾನು ಸಾಕಿದ ಅನಾಥ ಮಗುವಿನೊಂದಿಗೆ ಬಂದು ಆ ಮಗು ಅನಾಥೆಯಲ್ಲ ಎಂದು ಸಾಧಿಸಿ ತೋರಿಸುವುದನ್ನು ಕಾಣಬಹುದು.

ಮದುವೆಯಾದ ಹೆಣ್ಣೊಬ್ಬಳು ಗಂಡ, ಮನೆ, ಸಂಸಾರ, ಮಕ್ಕಳು ಎಂದು ಕೇವಲ ನಾಲ್ಕು ಗೋಡೆಗಳ ಮಧ್ಯೆ ಜೀವನವನ್ನು ಸಾಗಿಸದೆ ಇಡೀ ಸಮಾಜಕ್ಕೆ ತನ್ನ ಅಗತ್ಯ ಅವಶ್ಯಕವೆಂದು ತೋರಿಸಿದ್ದಾರೆ.

ಸಮಾಜದಲ್ಲಿ ಪ್ರತಿಯೊಬ್ಬ ತಂದೆ–ತಾಯಿಗಳು ವಯಸ್ಸಿಗೆ ಬಂದ ಮಕ್ಕಳನ್ನು ಮದುವೆ ಮಾಡಬೇಕೆಂಬ ಹಂಬಲ ಹೊಂದಿರುವುದು ಸಹಜ. ಅದೇ ರೀತಿ ಶಾಲಿನಿಯ ಮದುವೆಯಾಗಿ ಎರಡೇ ದಿನದಲ್ಲಿ ಆ ಮದುವೆ ಮುರಿದುಬಿದ್ದು ಸಂಸಾರ ಜೀವನ ನಿಲುಗಡೆ ಹೊಂದಿದ್ದಾಗ ತಂದೆಯಾದವನು ಮಗಳ ಜೀವನಕ್ಕೆ ಆಧಾರವಾಗಿ ನಿಲ್ಲುವಂತ ಸ್ಥಿತಿಯಲ್ಲಿ ಗಂಡನ್ನು ಹುಡುಕಿ ತನ್ನ ಭಾರವನ್ನು ಕಳೆದುಕೊಳ್ಳಬೇಕು ಎಂಬ ತಂದೆ ಗಂಡಿಗೆ ಮದುವೆ ವಯಸ್ಸು ಮೀರಿದರೂ ಚಿಂತೆಯಿಲ್ಲ ಮದುವೆ ಮಾಡಬೇಕು ಎನ್ನುವ ತಂದೆ. ಏಕೆಂದರೆ ತನ್ನ ಮಗಳಿಗೂ ಮದುವೆಯಾಗಿ ಎರಡೇ ದಿನದಲ್ಲಿ ಮದುವೆ ಮುರಿದು ಬಿದ್ದಿದೆ. ವಿಷಯ ಹೇಳದೆ ಮದುವೆ ಮಾಡಲು ತಂದೆ ಮುಂದಾಗುವಾಗ ಸತ್ಯಾಜಿತ್‌ಗೆ ಎಲ್ಲಾ ವಿಷಯವನ್ನು ಹೇಳಲೇಬೇಕು. ಏಕೆಂದರೆ ತಾನು ಮದುವೆಯಾಗುವ ಹುಡುಗನಿಗೆ ಎಲ್ಲಾ ವಿಷಯಗಳ ಬಗ್ಗೆ ತಿಳಿದಿರಬೇಕು ಎನ್ನುವ ಹಂಬಲ ಇದೆ.

ಪಾರದರ್ಶಕತೆ ಎಂಬುದು ಅತ್ಯಂತ ಮಹತ್ವವಾದುದಾಗಿದೆ. ಹೆಣ್ಣಿನ ಮನಸ್ಸು ತುಂಬಾ ಸೂಕ್ಷ್ಮ. ನಾಳೆ ಮದುವೆಯಾದ ಗಂಡನಿಗೆ ವಿಚಾರ ತಿಳಿದರೆ ನನ್ನನ್ನು ಅವಮಾನಿಸುವುದಕ್ಕಿಂತ ಮೊದಲೇ ತಿಳಿಸಬೇಕು ಎಂಬ ನಿಷ್ಠೆ ಹೊಂದಿದ ಸಾಮಾಜಿಕ ಜೀವನದ ವೈಯಕ್ತಿಕ ವಸ್ತು ಸ್ಥಿತಿಯನ್ನು ಚಿತ್ರಿಸುತ್ತವೆ.

ಬಂಡವಾಳ ಶಾಹಿಗಳು ಆರ್ಥಿಕವಾಗಿ ಹಿಂದುಳಿದವರನ್ನು ತಮ್ಮ ಶೋಷಣೆಗೆ ಒಳಪಡಿಸುತ್ತಲೇ ಇರುತ್ತಾರೆ. ಕಾರ್ಲ್‌ಮಾರ್ಕ್ಸ್ ಹೇಳುವಂತೆ ಉಳ್ಳವರು ಮತ್ತು ಇಲ್ಲದವರ ಸಮಗ್ರ ಹೋರಾಟದಿಂದ ಕೂಡಿದ ಬದುಕು ಬಹಳ ವಿಶಾಲತೆಯಿಂದ ಕೂಡಿರುವುದನ್ನು ಕಾಣುತ್ತೇವೆ. ಸಂಜೀವ್ ಸೇನ್ ರೈಲ್ವೆಯಿಂದ ನಿವೃತ್ತನಾಗಿ ಹತ್ತು ವರ್ಷಗಳೆ ಆದರೂ, ಸತ್ಯಜಿತ್‌ನಿಗಾಗಿ ಮಗಳ ಮದುವೆ ಪೋಟೋ ತಂದು ತೋರಿಸುವುದನ್ನು ಕಾಣಬಹುದು.

ಸತ್ಯಜಿತ್...... "ಯುದ್ಧಕ್ಕೆ ಹೋಗದವನಿಗೆ ಯಾರೂ ಪರಮವೀರಚಕ್ರ ತಂದುಕೊಟ್ಟಂತಾಯಿತು". ಅಂದರೆ ಮದುವೆಯ ವಯಸ್ಸು ಮೀರಿದರೂ ತನ್ನ ಬಳಿಗೆ ಬಂದು ಹೆಣ್ಣುಕೊಡಲು ಮುಂದಾಗಿರುವ ಸಂಜೀವ್ ಸೇನ್ ಕುರಿತು ಹೇಳಿರುವುದನ್ನು ಕಾಣಬಹುದು. ಸ್ಪಷ್ಟತೆ ನೇರದಿಟ್ಟ ಮಾತಿನೊಂದಿಗೆ ಸಂಜೀವ್‌ಸೇನ್ ತನ್ನ ಮಗಳನ್ನು ಮದುವೆ ಮಾಡಲು ಸತ್ಯಜಿತ್‌ನೊಂದಿಗೆ ಮಾತನಾಡುವುದು ಕನ್ನಡಿ ಇಲ್ಲದ ಊರಲ್ಲಿ ಕಥೆಯಲ್ಲಿ ಕಾಣಬಹುದಾಗಿದೆ.

ಮುನ್ನಾ, ತೂಫಾನ್ ಎಂದು ಹೆಸರನ್ನು ಬದಲಾಯಿಸಿಕೊಂಡರು ಸಮಾಜ ನೋಡುವ ಸ್ವಚ್ಛತೆಯನ್ನು ಕಾಣುತ್ತೇವೆ. ತನ್ನ ಬದುಕು, ಗಂಡ, ಮನೆ ಸಂಸಾರವನ್ನು ತೂಗಿಸಲು ಮದುವಂತಿ ಬಲದೇವನನ್ನು ಪ್ರೀತಿಸಿ ಮದುವೆಯಾದರೂ ಯಾವುದೇ ಕೆಲಸವಾದರೂ ಕರ್ತವ್ಯ ನಿಷ್ಠೆಯಿಂದ ಮಾಡಬೇಕು. ಗಂಡಾಗಲಿ, ಹೆಣ್ಣಾಗಲಿ ಬದುಕನ್ನು ಅರ್ಥೈಸಿಕೊಂಡು ದುಡಿಯಬೇಕು. ಪ್ರೀತಿ, ವಿಶ್ವಾಸಗಳ ನಡುವೆ ದುಡಿಮೆ ಸಾಗಿಸಲು ಹಣವು ಅಷ್ಟೆ ಮುಖ್ಯ ಎಂದು ಮುಂಬೈನಂತ ಮಹಾನಗರಗಳಲ್ಲಿ ಕಾಣಬಹುದು.

ಚಿಕ್ಕ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಬಹುಮಾನ ನೀಡುವಂತ ಕಾರ್ಯಕ್ರಮಗಳಲ್ಲಿ ಮಾನಸಿಕ ಭಾವನೆಗಳಿಗೆ ಒಳಗಾದ ಮಧು ಬನಿ ತನಗೆ ಕೇಳಿದ ಪ್ರಶ್ನೆಗೆ ಉತ್ತರ ಹೇಳುವುದನ್ನು ಮರೆತು ಭೂಪಾಲ್ ಅನಿಲ ದುರಂತದಲ್ಲಿ ತೀರಿಕೊಂಡ ಜ್ಯೋತ್ಸ್ನಾಬಾಟಿ, ಮಗಳು ಸೇಜಲ್, ಕಣ್ಣಿಗೆ ಕಟ್ಟುವಂತೆ ಮುಂದೆ ಬಂದು ನಿಲ್ಲುತ್ತಾರೆ.

ದುಃಖ, ನೋವು ಎಂಬುದು ಮನುಷ್ಯನಿಗೆ ಸಹಜ. ಚಿಕ್ಕಮಕ್ಕಳಿಗೂ ಮನಸ್ಸು, ಹೃದಯವಂತಿಕೆ, ಹೃದಯ ವಿದ್ರಾವಕ ಘಟನೆಗಳು ಮಕ್ಕಳ ಮನಸ್ಸನ್ನು ಕಲುಕುತ್ತವೆ. ಹಾಗೂ ಬುದ್ಧಿವಂತೆ, ದೊಡ್ಡವರಿಗೆ ಮಾತ್ರ ಅಲ್ಲ, ಚಿಕ್ಕಮಕ್ಕಳಿಗೂ ಸಮಯಪ್ರಜ್ಞೆಯ

ಅರಿವಿದೆ ಎಂದು ಭಾಸವಾಗುತ್ತದೆ. ಮುಂಬೈನಂತರ ಮಹಾನಗರದಲ್ಲಿ ಕಾಮಗಾರಿ ಕೆಲಸಗಳು ಸರಾಗವಾಗಿ ನಡೆಯುತ್ತಿದ್ದು, ನಗರೀಕರಣ ಪ್ರಕ್ರಿಯೆಯು ಕಾರ್ಯರಂಭಗೊಂಡಿರುವುದು ವ್ಯಕ್ತವಾಗುತ್ತದೆ.

ಅಲ್ಲಿನ ರೈಲ್ವೆ ಸ್ಟೇಷನ್‌ಗಳು, ಚಿತ್ರಮಂದಿರಗಳು, ರಸ್ತೆಗಳು, ಅಂಗಡಿಗಳು ಎಲ್ಲವು ನಗರೀಕರಣ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಜನಗಳನ್ನು ತನ್ನ ತಕ್ಕೆಯಲ್ಲಿ ಆಕರ್ಷಣೆಗೆ ಒಳಪಡಿಸುತ್ತದೆ. ಆಧುನಿಕ ಮುಂದುವರೆಯುತ್ತಿರುವ ಜನ ಜೀವನ ವ್ಯವಸ್ಥೆಯಲ್ಲಿ ಪ್ರತಿಯೊಂದರಲೂ ಹೊಸತನ, ಗಟ್ಟಿತನವನ್ನು ಹುಡುಕುವಾಗ ತನಗೆ ಅನುಕೂಲಕರವಾದ ನಗರಗಳನ್ನು ಹುಡುಕುತ್ತಾನೆ. ಕಷ್ಟಪಟ್ಟು ದುಡಿದು ಸಮಯಕ್ಕೆ ಬೆಲೆಕೊಟ್ಟು ಬದುಕನ್ನು ಕಟ್ಟಿಕೊಳ್ಳುವಂತ ವ್ಯವಸ್ಥೆ ಮಹತ್ವವನ್ನು ಪಡೆದುಕೊಳ್ಳುತ್ತವೆ.

ಸಿಕ್ಕಿದಂತ ವಸ್ತು ಬೇರೆಯವರ ವಸ್ತು ತಮ್ಮದಾಗುವುದಿಲ್ಲ ಎಂದು ವಾಪಸ್ಸು ಕೊಡಲು ಪರದಾಡಿ, ಹುಡುಕಾಡುವ ಪ್ರಾಮಾಣಿಕ ಪ್ರಯತ್ನ ಮಾಡುವ ಜನರನ್ನು ಇಂತಹ ಆಧುನಿಕ ಯುಗದಲ್ಲಿ ಕಾಣಿಸಿಕೊಂಡು ಸತ್ಯವನ್ನು ಮೆರೆಯುತ್ತಾರೆ. ಇಂತಹ ಮಹತ್ವದ ವಿಚಾರಗಳನ್ನು ತಿಳಿಯಬಹುದಾಗಿದೆ. ಥರ್ಮಾಸ್ ಪ್ಲಾಸ್ಕ್‌ನ್ನು ವಾಪಸ್ಸು ಮಾಡುವ ಪ್ರಾಮಾಣಿಕ ಪ್ರಯತ್ನ ಮರೆಯುವುದನ್ನು ಸಮಾಜ ಮುಖಿ ಜೀವನದೊಂದಿಗೆ ದೃಢಪಡಿಸಬಹುದು.

ಸ್ನೇಹ ಎಂಬುದು ಪ್ರತಿಯೊಬ್ಬ ಜೀವನದಲ್ಲಿ ಅತಿ ಮಹತ್ವವಾದುದು. ಸ್ನೇಹದ ನೆನಪು ಅಳಿಸದೆ ಕೊನೆಯವರೆಗೂ ಸದಾ ಅಚ್ಚ ಹಸುರಾಗಿಯೇ ಇರುತ್ತದೆ ಎಂತಹ ಸಮಯದಲ್ಲೂ ಸ್ನೇಹವೇ ಗೆಲ್ಲುತ್ತದೆ. ಗೋವಾದ ರಾಜಧಾನಿ ಪಣಜಿ ಅಭಂಗನಿಗೆ ಪ್ರಾಣ. "ಸತ್ತರೆ ಇಲ್ಲೆ ಸಾಯಬೇಕು ನೋಡು" ಎನ್ನುತ್ತಿದ್ದ. ಅಂದರೆ ಬಿಟ್ಟು ಹೋಗಲಾರದ ಪರಿಸರದ ಬಾಂಧವ್ಯ ಮಾನವನನ್ನು ಮೂಕನಾಗಿಸುತ್ತಿದೆ. ಸಿಂಧುದುರ್ಗದ ಶಾಲೆಯಲ್ಲಿ ೨ ವರ್ಷ ಒಟ್ಟಿಗೆ ಓದಿದ ಅಭಂಗ ಅಭಿಸಾರರು ಒಳ್ಳೆಯ ಸ್ನೇಹಿತರು, ಅಭಿಸಾರನ ತಂದೆಗೆ ಸಾವಂತ ನಾಡಿಗೆ ವರ್ಗವಾದಾಗ ತನ್ನ ಸ್ನೇಹಿತನನ್ನು ಕಳೆದುಕೊಳ್ಳುವ ಪರಿ ವಿಚಿತ್ರ ಅನುಭವವನ್ನು ತಂದುಕೊಡುತ್ತದೆ. "ಫೇನಿಯ ನಶೆಯಲ್ಲಲ್ಲ ಬದುಕಿನ ನಶೆಯಲ್ಲ" ಎಂಬುದು ಮಹತ್ತರವಾದುದು.

ಹೆಣ್ಣೊಬ್ಬಳು ಮನೆಬಿಟ್ಟು ನಡೆದರೆ ಅವಳ ಮೇಲೆ (ಮದುವೆಗೂ ಮೊದಲೆ) ಅನುಮಾನ ಪಡುವ ಸುತ್ತಲ ಸಮಾಜದಲ್ಲಿ ಪ್ರತಿಭಾ ಸ್ಪರ್ಧೆಯನ್ನು ಭಾಷಣ ಮಾಡಲು ಹೋದ ಬೇಬಿ ಟಿವಿಯಲ್ಲಿ ವೈಖರಿ ಎಂದು ಪ್ರತ್ಯಕ್ಷವಾಗಿದ್ದಾಳೆ. ಸ್ವಾತಂತ್ರವಾಗಿ ಕಟ್ಟಿಕೊಳ್ಳಬಹುದು ಎಂಬುದು ಕಾಯ್ಕಿಣಿ ಕಥೆಗಳು ಸ್ಪಷ್ಟಪಡಿಸುತ್ತವೆ.

ನವ್ಯದ ಕಾಲಘಟ್ಟದಲ್ಲಿ ಮನುಷ್ಯನ ಸ್ವಾರ್ಥ, ಪೊಳ್ಳುತನ ಬದುಕಿನ ಅಸ್ಥಿರತೆ, ಅಶಾಂತಿ, ಅತೃಪ್ತಿ, ನಿರ್ವಿಯತೆ, ಜಿಗುಪ್ಸೆಯ ಭಾವಗಳ ವಸ್ತುಗಳಾದವು. ಲೈಂಗಿಕತೆ, ಅನೈತಿಕತೆ ಅತಿಯಾದ ವಿಜೃಂಭಣೆ ವಾಸ್ತವವನ್ನು ನೇರ ದೃಷ್ಟಿಯಿಂದ ನೋಡುವಂತಹುದು ಪ್ರಮುಖವಾಯಿತು. ಲಂಕೇಶರ 'ರೊಟ್ಟಿ' ಕಥೆಯಲ್ಲಿ ಹಸಿವು ಎಂಬುದು ಮನುಷ್ಯನಿಂದ ಏನೆಲ್ಲಕೆಲಸ ಮೂಡಿಸುತ್ತದೆ ಎಂಬುದು ವ್ಯಕ್ತಗೊಳ್ಳುತ್ತದೆ. ರೈಲ್ವೆ ಸ್ಟೇಷನ್ನಿನಲ್ಲಿ ಹೆಂಗಸೊಬ್ಬಳಿಂದ ರೊಟ್ಟಿಯನ್ನು ಅಪಹರಿಸಿ ತಿಂದ ಹುಡುಗನಿಗೆ ಎಲ್ಲರೂ ಹೊಡೆಯುತ್ತಾರೆ. ಹೊಟ್ಟೆ ಹಸಿವಾದುದರಿಂದ ರೊಟ್ಟಿಯನ್ನು ಅಪಹರಿಸಿದ ಎಂಬ ಮೂಲ ತತ್ವವನ್ನು ಮರೆಯುತ್ತಾರೆ. ಎಷ್ಟೋ ಕಡೆಗಳಲ್ಲಿ ಅನ್ನ ಇರುವ ತಟ್ಟೆಯಲ್ಲಿಯೇ ಕೈ ತೊಳೆಯುತ್ತಾರೆ. ಹಸಿವಿಗಾಗಿ ಆ ಹುಡುಗ ಮಾಡಿದ ತಪ್ಪಿಗೆ ಪೋಲಿಸಿನವರು ಬರುವುದನ್ನು ಕಥೆಯಲ್ಲಿ ಕಾಣುತ್ತೇವೆ.

ಪೂರ್ಣಚಂದ್ರ ತೇಜಸ್ವಿಯವರ "ಅಬಚೂರಿನ ಪೋಸ್ಟಾಪಿಸು" ಕಥೆಯಲ್ಲಿ ಆಧುನಿಕತೆಯ ಸಂಕೇತವಾದ ಪೋಸ್ಟಾಫಿಸನ್ನು ಜನರು ನೋಡುವ ರೀತಿ. ತಮ್ಮೆಲ್ಲ ಗೊಂದಲಗಳಿಗೂ ಪೋಷ್ಟಾಪಿಸು ಕಾರಣ ಎಂದು ಗ್ರಹಿಸುವಂತ ಜನ ಹಳ್ಳಿಗೆ ಅಧುನಿಕತೆಯು ಅಂಚೆ ಕಛೇರಿ. ಪೋಸ್ಟಾಪಿಸು ಬಂದಾಗ ಆಗುವ ಗೊಂದಲಗಳಿಗೆ ಬೇರೊಂದು ಅರ್ಥವನ್ನು ಹುಡುಕುವುದನ್ನು ಕಾಣುತ್ತೇವೆ. ನಮ್ಮ ಎಂದರೆ ಹೊಸದು ಎಂದು ಪರಿಗಣಿಸಿಕೊಂಡಿದ್ದೇವೆ. ಒದಗಿದಂತಹ ಸಮಸ್ಯೆಗಳಿಗೆ ಹೊಸ ಸಲಹೆಯನ್ನು ಕೊಡುವುದಾಗಿದೆ.

ಜಯಂತ ಕಾಯ್ಕಿಣಿಯವರ ಬಣ್ಣದ ಕಾಲು ಕಥೆಯಲ್ಲಿ ತುಂಟ ಹುಡುಗನೊಬ್ಬ ಯಾವೆಲ್ಲ ತುಂಟಾಟಗಳನ್ನು ಮಾಡುತ್ತಾನೆ. (ಚಂದು) ಅವನ ತಂದೆ ಆತನನ್ನು ಮುಂಬೈನ ರಿಮ್ಯಾಂಡ್ ಹೋಂ ಗೆ ಹಾಕಲು ಮುಂದಾದಾಗ ತಾಯಿ ಮೀರಾಳಿಗೆ

ಕಳಕಳಿಯಾಗುತ್ತದೆ. ಪ್ರತಿಯೊಬ್ಬ ತಂದೆ-ತಾಯಿಯ ಮನಸ್ಸಿನ ವೇದನೆ ಅರ್ಥವಾಗುವುದನ್ನು ಕಾಣುತ್ತೇವೆ.

ನವ್ಯದ ಲಕ್ಷಣಗಳನ್ನು ಒಂದಾದ ಆಲೋಚನಾ ದಿಕ್ಕು ಪ್ರಮುಖವಾದುದಾಗಿದೆ. ಚೌತಿ ಚಂದ್ರ ಕತೆಯಲ್ಲಿ ಡ್ರೈವರ್ ಪಾಂಡುರಂಗ ತನ್ನ ಮೇಲಾಧಿಕಾರಿ ಸಾವಂತ ರಜೆ ನೀಡದಿದ್ದರೂ ಸಹ ಬಸ್ಸು ಓಡಿಸಿಕೊಂಡು ಗಣೇಶನ ಹಬ್ಬಕ್ಕೆ ಊರಿಗೆ ಹೋಗಿ ನರ್ತಕಿ ಜುಯಿೀಬಾಯಿಯ ಆಕರ್ಷಣೆ ಒಳಗಾಗುವುದನ್ನು ಕಾಣಬಹುದಾಗಿದೆ.

ವಯಸ್ಸಾದವರನ್ನು ತಂದೆ-ತಾಯಿಗಳನ್ನು ಮಕ್ಕಳು ನೋಡುವ ರೀತಿ ೬೦ ವರ್ಷ ವಯಸ್ಸಿನ ದುರ್ಗಿ ಶಕ್ತಿಯುತವಾಗಿದ್ದಾಗ ಎಲ್ಲಾ ಕೆಲಸ ಮಾಡಿಸಿಕೊಂಡು ಆಕೆ ಹಾಸಿಗೆ ಹಿಡಿದಾಗ ಮನೆಯ ಯಜಮಾನ ಸುಧೀರ ಮಹಾಜನನ ಮನಸ್ಸು ಬದಲಾವಣೆ ಹೊಂದಿ ಆಕೆಯನ್ನು ಮನೆಯಿಂದ ಹೊರಹಾಕಲು ಯೋಚಿಸುವುದನ್ನು ಮನುಷ್ಯ ಎಷ್ಟೋ ಸ್ವಾರ್ಥಿ ಎಂದೆನಿಸುತ್ತದೆ. ತನ್ನ ಮನೆ ಕೆಲಸ ಮಾಡುವಾಗ ಆಕೆ ಬೇಕು. "ನೀನು ಆರಾಮ ತಗೋ ದುಗ್ಗಿ, ನೀರಿನಲ್ಲಿ ಕೈಕಾಲು ಹಾಕಲು ಹೋಗಬೇಡ. ಆಮೇಲೆ ಜಾಸ್ತಿ ಆದರೆ ಆರೋಗ್ಯ ಸರಿಯಿಲ್ಲದೇ ಹೋದಾಗ ಆಕೆಯನ್ನು ಬಿಟ್ಟು ಬಿಡುವ ಮನುಷ್ಯನ ವ್ಯಕ್ತಿತ್ವ ಕರೆಯುವ ಹಸುವಾದರೆ ಮಾತ್ರ ಇಟ್ಟುಕೊಳ್ಳಬೇಕು. ಇಲ್ಲದೆ ಹೋದರೆ ಕಟುಕನಿಗೆ ಕೊಡಬೇಕು ಎಂಬ ವ್ಯಕ್ತಿತ್ವವನ್ನು ಒಳಗೊಂಡಿರುವುದನ್ನು ಕಾಣುತ್ತೇವೆ.

ಸುಧೀರ ಮಹಾಜನ ಹೆಂಡತಿ ಮಹಾಜನ ಹೆಂಡತಿ ಜ್ಯೋತಿ "ಎಷ್ಟೆಂದರೂ ನಮ್ಮ ಮಕ್ಕಳನ್ನು ತಾತ್ಸಾರ ಮಾಡದೇ ನೋಡಿಕೊಂಡವಳು. ನಿಮ್ಮ ಮುಷ್ಕರದ ವೇಳೆಯಲ್ಲಿ ತಿಂಗಳುಗಟ್ಟಲೆ ಹೊಟ್ಟೆ ಸರಿ ಇಲ್ಲ ಅಂತ ಸುಳ್ಳು ಹೇಳಿ ಒಪ್ಪತ್ತು ಅರೆ ಹೊಟ್ಟೆ ಉಂಡವಳು. ಇದನ್ನೆಲ್ಲ ಮರೆಯಬಾರದು" ತಮ್ಮ ಉಪಯೋಗಕ್ಕೆ ಬೇಕಾದಾಗ ಉಪಯೋಗಿಸಿಕೊಂಡು ಆಕೆಯಿಂದ ಕೆಲಸ ಮಾಡಲು ಸಾಧ್ಯವಿಲ್ಲ ಎಂದಾಗ ಮನುಷ್ಯ ಆಕೆಯನ್ನು ಯಾವ ರೀತಿ ನಡೆಸಿಕೊಳ್ಳುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ. ಜೀವನದ ಏರಿಳಿತಗಳು ಬದುಕನ್ನು ದುರಾವಸ್ಥೆಗೆ ಒಳಪಡಿಸುತ್ತವೆ. ವ್ಯಕ್ತಿಯ ವ್ಯಕ್ತಿತ್ವದ ನೆಲೆಯಲ್ಲಿ ಮಾನವೀಯ ಕಾಳಜಿಯನ್ನು ಕಥೆಗಳಲ್ಲಿ ಕಂಡವರಾಗಿದ್ದರು. ಸೇವಂತಿ ಹೂವಿನ ಟ್ರಕ್ಕಿನಲ್ಲಿ ಬಂದ ಆ ದುರ್ಗಿ ಹಿಂದಿನದೆಲ್ಲಾ ಮನಸ್ಸಿಗೆ ಬರುತ್ತದೆ.

ಅಂಕವಿಕಲ ಹುಡುಗಿಯೊಬ್ಬಳ ಮೀಸಲಾತಿಯನ್ನು ಪಡೆಯಲು ಯತ್ನಿಸಿದಂತೆ ಕುಟುಂಬದ ಜನ ಸಿಗುವ ಸವಲತ್ತುಗಳನ್ನು ಪಡೆಯುವಲ್ಲಿ ಆ ಹುಡುಗಿಯನ್ನು (ವರ್ಷಾ) ಮುಂದಿಟ್ಟುಕೊಂಡು S.T.D., ಸೌಲಭ್ಯ ಪಡೆಯಲು ಮುಂದಿಟ್ಟುಕೊಂಡರೆ ಆ ಹುಡುಗಿ ತನಗೆ "ಮದುವೆ ಮಾಡಲು ಪೋಟೋ ತೆಗೆಸಲು ಮುಂದಾಗುತ್ತಾರೆ. ರೂಪಂ ಸ್ಟುಡಿಯೋಗೆ ಹೋಗಿ ಪೋಟೋ ತೆಗೆಸಲು ಮುಂದಾದಾಗ "ತಾಯಿ ನಿನ್ನ ಮದುವೆಗಾಗಿ ಅಲ್ಲ, ಪಾಪ ಅದೇನೋ S.T.D., ಬೂಥ್ ಅವನ ತಲೆ ಹೊಕ್ಕಿದೆ. ಅಂಕವಿಕಲರಿಗೆ ಅದೇನೋ ತುಂಬಾ ರಿಯಾಯಿತಿ ದರದಲ್ಲಿ ಬಲುಬೇಗ ಬೂಥ್ ಕೊಡುತ್ತಾರೆ" ಎಂದು ಸ್ಪಷ್ಟವಾಗುತ್ತದೆ. ತಂದೆ ಹೇಳಿದಂತ ಮಾತು ನೆನಪಾಗುತ್ತಿದೆ. "ವರ್ಷಾ ನನ್ನ ನಿಜವಾದ ಗಂಡು ಮಗ, ನನ್ನ ಇಳಿಗಾಲದ ಇಂಬು" ನನ್ನ ಕೊನೆಯಲ್ಲಿ ಆಧಾರ ಆಗುವಳು ಅವಳೆ ಆಗಿದ್ದಳು. ಹೆಣ್ಣಾದರು ಸಹ ತನ್ನ ಮಗನಂತೆ ಎಂಬುದು ಸ್ಪಷ್ಟವಾಗಿ ವಿದಿತವಾಗುತ್ತದೆ.

ಹೆಣ್ಣಿನ ಆಸೆಗಳು ತುಂಬಾ ಮುಖ್ಯವಾದವುಗಳಾಗಿವೆ. ತನ್ನ ಕೈಗೆ ಈ ಸಾರಿ ಬಳೆ ಮಾಡಿಸಲೇಬೇಕು ಎಂದು ಹಣವನ್ನು ಕೂಡಿಡುತ್ತಾಳೆ ಭವಾನಿ. ಗಂಡ Health Centre ಕೆಲಸದಲ್ಲಿದ್ದವನು. ಕೊನೆಗೆ ಭಾವನೆಗಳನ್ನು ಬಲಿಕೊಡಬೇಕಾಗುತ್ತದೆ.

ಪಾತ್ರಗಳು ಕೇವಲ ಒಂದು ವ್ಯವಸ್ಥೆಯಾಗಿ ಕಂಡರು ಕೇವಲ ಅದು ಒಂದು ಪಾತ್ರ ಅನಿಸಿದರು ಅದು ಇಡೀ ಸಮಾಜವನ್ನು ಪ್ರತಿನಿಧಿಸುತ್ತದೆ. ಅಂತರಂಗದ ಒಲವು, ಬಯಕೆ, ಆಸೆ, ದುಃಖ ದುಮ್ಮಾನಗಳನ್ನು ವ್ಯಕ್ತಿಯ ಪಾತ್ರದ ಮೂಲಕ ಜೀವ ತುಂಬುತ್ತವೆ. ನವ್ಯದ ಕಥೆಗಳಲ್ಲಿ ಪ್ರಜ್ಞಾ ಪ್ರವಾಹ ತಂತ್ರ ಎಂಬುದು ಬಹು ಪ್ರಮುಖವಾದುದು. ಗಂಡಿನ ಸಂಬಂಧಗಳಲ್ಲಿ ಸ್ವಾರ್ಥತೆ, ಲೈಂಗಿಕತೆ, ಕಾಮುಕತೆ ಪ್ರೇಮದ ವಿನ್ಯಾಸಗಳು ಮೊದಲಾದವು ಬೆಳೆಯುವುದನ್ನು ಸ್ಟೆಲ್ಲಾ ಎಂಬ ಹುಡುಗಿ ಕಥೆಯಲ್ಲಿ ಕಾಣಬಹುದಾಗಿದೆ. ನವ್ಯದವರಲ್ಲಿ ಹೊಸ ಅನುಭವಗಳ ದರ್ಶನ, ಭೂತ & ವರ್ತಮಾನದ ನಂಟನ್ನು ಕಾಣುತ್ತೇವೆ.

ಪ್ರೀತಿ, ಸಂಬಂಧಗಳು, ಸಮಯ, ನಿಗೂಢತೆ ಮೊದಲಾದ ಅಂಶಗಳನ್ನು ನಾವು ಯು.ಆರ್.ಅನಂತಮೂರ್ತಿಯವರ "ನವಿಲುಗಳು" ಕಥೆಯಲ್ಲಿ ಕಾಣಬಹುದು. ಮನುಷ್ಯ ಸಂಬಂಧದ ಅಸಂಗತತೆಯನ್ನು ಪ್ರಮುಖ ಕಾಳಜಿಯೂ ಕಾಣಬಹುದಾಗಿದೆ. ಸಂಬಂಧಗಳಲ್ಲಿ ಪ್ರೀತಿಯನ್ನು ಹುಡುಕುವಾಗ "ಗಾಳಿ ಮರದ ನೆಳಲು" ಕಥೆ

ಪ್ರಮುಖವಾದುದಾಗಿದೆ. ಕಾರವಾರ ಕೋರ್ಟಿನಲ್ಲಿ ವಿಚಾರಣೆಗೆ ಬರ್ತ್ತಾರಂತಲ್ಲ ಬೇಗ ನಿಕಾಲು ಬರಬಹುದು ಎಂದು ಗುಣಿ ಮಾಸ್ತರರು ಹೇಳಿದಾಗ ಹತ್ತು ವರ್ಷದ ತುಳಸಿ & ಅತ್ತಿಗೆ ನಾಗಮ್ಮ ಗಂಡ ವೆಂಟೇಶನನ್ನು ನೋಡಲು ಬಸುರಿ ಹೆಂಗಸು ಹೋಗುವಾಗ ಅಲ್ಲಿ ವೆಂಕಟೇಶನನ್ನು ನೋಡಲು ಇನ್ನೊಂದು ಹೆಣ್ಣು ಬಂದಿರುತ್ತಾಳೆ. ಬದುಕಿನ ಪ್ರೀತಿ ಎಲ್ಲಾ ನೆಲೆಗಳಲ್ಲಿಯೂ ತಮ್ಮನ್ನು ಸೆಳೆಯುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಕಾಯ್ಕಿಣಿಯವರ ಕಥೆಗಳಲ್ಲಿ ದೈನೈತೆ ಬದುಕಿನ ಸಾರ್ಥಕತೆ ಪಡೆಯುವುದನ್ನು ವ್ಯವಸ್ಥಿತವಾಗಿ ಕಾಣುತ್ತೇವೆ.

"ದಗಡು ಪರಬನ ಅಶ್ವಮೇಧ" ಕಥೆಯಲ್ಲಿ ಕಾಣಬಹುದಾಗಿದೆ. ಈ ಕಥೆಯಲ್ಲಿ ಕುದುರೆ ಒಂದು ಸಂಕೇತವಾಗಿದೆ ಅಷ್ಟೆ. ಮದುವೆಯ ಹುಡುಗ ದಗಡು ಮೆರವಣಿಗೆಯೆ ಕುದುರೆ ಅವನನ್ನು ಹೊತ್ತುಯ್ಯುತ್ತದೆ. ಆ ಅಶ್ವ ಭಾನಮತಿಯ ಅಪ್ಪನದು. ಕೊನೆಗೆ ಬಾನಮತಿ ಕೊಟ್ಟು ವಿವಾಹ ಮಾಡುವುದನ್ನು ಕಾಣುತ್ತೇವೆ.

ಪ್ರಕಾಶವರ್ಷ ಕಥೆಯಲ್ಲಿ ಶಿಕ್ಷಣಕ್ಕೆ ಮಹತ್ವ ಕೊಟ್ಟಿರುವುದನ್ನು ಕಾಣುತ್ತೇವೆ. ಪ್ರಕಾಶನ ತಾತ ನಾನಾ "ಶಿಕ್ಷಣಕ್ಕಿಂತ ಮಿಗಿಲಾದ ಐಶ್ವರ್ಯ ಇಲ್ಲ" ಎಂದಿದ್ದಾನೆ.

ಒಟ್ಟಾರೆಯಾಗಿ ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ವ್ಯಕ್ತಿಗಿಂತ ವಸ್ತು ವಿಶಿಷ್ಠತೆಯನ್ನ ಕಾಣುತ್ತೇವೆ. ಬೇರೆ ಕಥೆಗಾರರಿಗಿಂತ ಕಾಯ್ಕಿಣಿಯವರು ವಿವಿಧ ಆಯಾಮಗಳಿಂದ ಜೀವನವನ್ನ ಗ್ರಹಿಸಿರುವುದು ಕಂಡುಬರುತ್ತದೆ.

*****

ಅಡಿ ಟಿಪ್ಪಣಿ

೧. ಅತ್ಯುತ್ತಮ ಸಣ್ಣ ಕಥೆಗಳು	–	ಸಂಪಾದಕರು – ಕೆ.ನರಸಿಂಹಮೂರ್ತಿ ಪ್ರಕಟಣೆ– ಕನ್ನಡ ಸಾಹಿತ್ಯ ಪರಿಷತ್ತು –೨೦೧೪ ಪ್ರಕಟಣಾ ವರ್ಷ – ೨೦೧೪
೨. ಕಲ್ಲು ಕರಗುವ ಸಮಯ	–	ಸಂಪಾದಕರು–ಪಿ.ಲಂಕೇಶ್ ಪ್ರಕಟಣಾ–೨೦೧೨ ಪ್ರಕಾಶನ –ಲಂಕೇಶ್ ಪ್ರಕಾಶನ, ಬೆಂಗಳೂರು ಬಸವನಗುಡಿ, ಬೆಂಗಳೂರು ಪುಟ ಸಂಖ್ಯೆ– ೬
೩ ಅದೇ ಪುಸ್ತಕ		ಪುಟ ಸಂಖ್ಯೆ– ೪೬
೪ ಚಾರ್‌ಮಿನಾರ್	–	ಸಂಪಾದಕರು–ಜಯಂತ ಕಾಯ್ಕಿಣಿ ಪ್ರಟಕಣಾ ವರ್ಷ – ೨೦೧೪ ಪ್ರಕಾಶಕರು – ಅಂಕಿತ ಪ್ರಕಾಶನ, ಬೆಂಗಳೂರು ಪುಟ ಸಂಖ್ಯೆ – ೩೧–೩೨
೫ ತೂಫಾನ್ ಮೇಲ್	–	ಸಂಪಾದಕರು – ಜಯಂತ ಕಾಯ್ಕಿಣಿ ಪ್ರಕಾಶಕರು – ಅಂಕಿತ ಪ್ರಕಾಶನ, ಬೆಂಗಳೂರು ಪುಟ ಸಂಖ್ಯೆ: ೬೯, ಪ್ರಕಟಣಾ ವರ್ಷ – ೨೦೧೬
೬ ಬಣ್ಣದ ಕಾಲು	–	ಸಂಪಾದಕರು – ಜಯಂತ ಕಾಯ್ಕಿಣಿ ಪ್ರಕಾಶಕರು – ಅಂಕಿತ ಪ್ರಕಾಶನ, ಬೆಂಗಳೂರು ಪ್ರಕಟಣಾ ವರ್ಷ –೨೦೧೪ ಪುಟ ಸಂಖ್ಯೆ: ೩೭

*****

ಅಧ್ಯಾಯ –೩

ಜಯಂತ ಕಾಯ್ಕಿಣಿ ಯವರ ಕಥೆಗಳಲ್ಲಿ ನಗರ ಜೀವನದ ಹಲವು ಆಯಾಮಗಳು

ಆಧುನಿಕ ಜಗತ್ತು ಮನುಷ್ಯನನ್ನು ಹೆಚ್ಚು–ಹೆಚ್ಚು ಆಕರ್ಷಣೆಗೆ ಒಳಪಡಿಸುತ್ತದೆ. ಅವುಗಳಲ್ಲಿ ನಗರ ಜೀವನವು ಒಂದು. ದೊಡ್ಡ–ದೊಡ್ಡ ದೊಡ್ಡ ಕಟ್ಟಡಗಳು. ಕೈಗಾರಿಕೆಗಳು ಕಂಪನಿಗಳು, ಶಿಕ್ಷಣ ಸಂಸ್ಥೆಗಳು. ಸಾರಿಗೆ ಸಂಪರ್ಕಗಳ ವ್ಯವಸ್ಥೆ. ಮೊದಲಾದವುಗಳ ಸೌಕರ್ಯ ಹಾಗೂ ಸೌಲಭ್ಯಗಳಿಂದಾಗಿ ಜನರು ನಗರಗಳ ಕಡೆ ಹೆಚ್ಚು ಆಕರ್ಷಿತರಾಗುತ್ತಾರೆ. ಗ್ರಾಮೀಣ ಬದುಕಿಗಿಂತ ನಗರ ಜೀವನ ಹೇಗೆ ಭಿನ್ನವಾಗಿರುತ್ತದೆ. ಸುಧಾರಿಸಿದಂತ ಆರ್ಥಿಕ ಸ್ಥಿತಿ–ಗತಿಗಳು ಜನರ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರುತ್ತವೆ ಎಂಬುದನ್ನು ಕಾಣುತ್ತೇವೆ.

ನಗರ ಜೀವನದಲ್ಲಿ ಕೆಲವು ನಾವು ನಕರಾತ್ಮಕ ಅಂಶಗಳನ್ನು ಕಾಣಬಹುದು. ಅಲ್ಲಿಯೂ ಸಹ ತಮ್ಮ ಜೀವನಕ್ಕಾಗಿ ಚಿಕ್ಕ ಚಿಕ್ಕ ಕೆಲಸವನ್ನು ಮಾಡಿಕೊಂಡು ಜೀವನವನ್ನು ಸಾಗಿಸುವಂತಹವರು ಇದ್ದಾರೆ. ಚಪ್ಪಲಿ ಹೊಲಿಯುವುದರಿಂದ ಹಿಡಿದು ಪುಟ್‌ಬಾತ್‌ನಲ್ಲಿ ತಿಂಡಿ ಮಾಡುವವರು ಜೀವನ ನಡೆಸಲು ಏನೆಲ್ಲಾ ಕಷ್ಟಗಳನ್ನು ಅನುಭವಿಸಬೇಕೆಂದು ತಿಳಿಯುತ್ತದೆ. ಕೆಲವರು ಶ್ರೀಮಂತರಾಗಿದ್ದು, ಅವರದೊಂದು ರೀತಿಯ ಜೀವನ ಕ್ರಮ ಹಾಗೂ ಜೀವನ ಶೈಲಿ ಬೇರೆ ಬೇರೆಯಾಗಿರುತ್ತದೆ. ಬಡಜನರ ಜೀವನ ಕ್ರಮ ಹಾಗೂ ಜೀವನ ಶೈಲಿಗಳು ನಗರ ಪ್ರದೇಶಗಳಲ್ಲಿ ಭಿನ್ನತೆಯಿಂದ ಕೂಡಿರುವಂತಹುದ್ದನ್ನು ಕಾಣುತ್ತೇವೆ. ನಗರ ಪ್ರದೇಶಗಳಲ್ಲಿ ಸಮಯ ಎಂಬುದು ಅತ್ಯಂತ ಮಹತ್ವದಾದುದಾಗಿದೆ. ಏಕೆಂದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ.

ನಗರ ಜೀವನವನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಬಹುಮುಖಗಳಿಂದ ವಿಶ್ಲೇಷಿಸಬಹುದಾಗಿದೆ. ಮುಂಬೈನಂತಹ ನಗರ ಪ್ರದೇಶದಲ್ಲಿ ವಿವಿಧ ರೀತಿಯ ಸಮಾಜ, ನಡೆ, ನುಡಿ, ಆಚರಣೆಗಳು ಸಂಸ್ಕೃತಿಗಳು ಕಂಡು ಬರುತ್ತವೆ. ರಾಜಕೀಯವಾಗಿ ವಿವಿಧ ಪಕ್ಷಗಳು ಮಾನವನ ಸಹಿತ ಸಾಧನೆಗಿಂತ ತಮ್ಮ ಹಿತ ಮುಖ್ಯವೆಂದು ಭಾವಿಸುತ್ತಾರೆ. (ಸಮಾಜದ ಹಿತಕ್ಕಿಂತ) ಆರ್ಥಿಕವಾಗಿ ಅಲ್ಲಿನ ಹಣಕಾಸಿನ

ಪರಿಸ್ಥಿತಿ ಶ್ರೀಮಂತರು, ಮಧ್ಯಮವರ್ಗ, ಬಡವರ್ಗಗಳಿಂದ ಕೂಡಿದ ಸಮಾಜದಲ್ಲಿ ೩ ಸ್ತರಗಳನ್ನು ಕಾಣುತ್ತೇವೆ.

ವಸುದೇಂದ್ರರವರ ಕಥೆಗಳಲ್ಲಿ (ಯುಗಾದಿ) ಮಾನವೀಯ ಮೌಲ್ಯಕ್ಕಿಂತ, ಸ್ಥಾನಮಾನಕ್ಕೆ ಬೆಲೆ ಕೊಡುವಂತ ಪ್ರಹ್ಲಾದ. ತಂದೆ ಗೋಪಣ್ಣ ಶಾಲಾ ಮಾಸ್ತರರಾಗಿದ್ದು, ಓದಿಸಿದರು. ತಂದೆಗಿಂತ ಹತ್ತುಪಟ್ಟು ಹಣ ತರುವ ಮಗ, ಸ್ವಾತಂತ್ರ್ಯವಿಲ್ಲದೆ, ಬೇರೆಯವರ ಹಿಡಿತದಲ್ಲಿಟ್ಟುಕೊಂಡು ಜೀವನ ಸಾಗಿಸುವ ಪ್ರಹ್ಲಾದ ಅಮೇರಿಕಾದಂತ ಕಂಪನಿಗಳು ಯಾವಾಗ ವಾಪಸ್ ಕಳುಹಿಸಬಹುದು ಎಂದು ತಂದೆ ಬಳಿಯೇ ತನ್ನ ವೇದನೆಯನ್ನು ತೋಡಿಕೊಳ್ಳುವುದನ್ನು ಗಮನಿಸಿದರೆ ವ್ಯವಸ್ಥೆಯ ಸ್ಪಷ್ಟ ಅರಿವಾಗುತ್ತದೆ.

ಸಮಾಜ ಮುಖಿ ಚಿಂತನೆಗಳು ಬಹು ಮುಖ್ಯವಾಗಿದ್ದು, ಸ್ಪಷ್ಟ, ನೇರ ದೃಷ್ಟಿಕೋನವನ್ನು ಒಳಗೊಂಡಿರುತ್ತವೆ. ಸಮಾಜವನ್ನು ಬಿಂಬಿಸುವಂತ ಅಲ್ಲಿನ ಸಂಸ್ಕೃತಿಯನ್ನು ಬಿಂಬಿಸುವಂತೆ ಕಾಣಿಸುತ್ತವೆ. ನಗರ ಜೀವನದಲ್ಲಿಯೂ ಸಮಸ್ಯೆಗಳಿವೆ. ಅವುಗಳಿಗೆ ಪರಿಹಾರವನ್ನು ಒದಗಿಸಿಕೊಡುವುದು, ಮೌಲ್ಯಗಳನ್ನು ಮರೆಯುವುದು ಮೊದಲಾದ ಅಂಶಗಳನ್ನು ಕಾಣಬಹುದಾಗಿದೆ.

ಕೆಲವು ಬೇರೆ-ಬೇರೆ ಕಥೆಗಳಲ್ಲಿ ಗ್ರಾಮೀಣ ಬದುಕಿನ ಚಿತ್ರಣವಿರುವುದನ್ನು ಕಾಣುತ್ತೇವೆ. ಮುಂಬೈನಂತಹ ಮಹಾನಗರಗಳಲ್ಲಿ ೨೩ ವರ್ಷ ಕಾಲ ಕಳೆದಂತ ಕಾಯ್ಕಿಣಿಯವರು ಬದುಕನ್ನು ಅನುಭಿವಿಸಿ ಅರ್ಥೈಸಿಕೊಂಡಿದ್ದಾರೆ. ಸುತ್ತ -ಮುತ್ತಲ ಸಮಾಜವನ್ನು ಆರ್ಥಿಕತೆಯ ವ್ಯವಸ್ಥೆ, ರಾಜಕೀಯ ಅಂತರಗಳು ಸಾಮಾಜಿಕ ಪರಿಸ್ಥಿತಿ ಮೊದಲಾದ ಅಂಶಗಳನ್ನು ಕಣ್ಣಾರೆ ಅನುಭವಿಸಿ ಒಂದು ನೆಲೆಗಟ್ಟಿನಲ್ಲಿ ಒಂದು ಚೌಕಟ್ಟಿನಲ್ಲಿ ಕಥೆಗಳ ಮೂಲಕ ಹಿಡಿದಿಟ್ಟಿದ್ದಾರೆ.

ಕಾಯ್ಕಿಣಿಯವರ ಕಥೆಗಳಲ್ಲಿ ಭಾವನಪ್ರಿಯವಾದ ಆಯಾಮದಿಂದ ಕಾಣಬಹುದು. “ಕಣ್ಮರೆಯ ಕಾಡು” ಕಥೆಯಲ್ಲಿ ಕುಸುಮ ಮತ್ತು ಪೂರ್ವಿ ಅಕ್ಕ-ತಂಗಿಯರು ತನ್ನ ತಮ್ಮ ಮಕರಂದ (ಚೋಟು) ಚಿಕ್ಕ ವಯಸ್ಸಿನಲ್ಲಿ ಮನೆ ಬಿಟ್ಟು ಹೋಗಿದ್ದ. ಆತನನ್ನು ಹುಡುಕಲು ಮನೆಯಲ್ಲಿಯೇ ತಿಳಿಸದೆ ಬರುವುದು. ಹೃದಯದ ಭಾವನೆಗಳಿಗೆ ಬೆಲೆಕೊಟ್ಟಿರುವುದು ಮಹತ್ವದ ವಿಷಯವಾಗಿದೆ. ಬದುಕಿನ ಬವಣೆಗಳಿಗೆ ಹೆಣೆಯಿಲ್ಲದಂತೆ ಸಾಕಷ್ಟು ಕಷ್ಟ-ಸುಖ

ಅನುಭವಿಸಿಕೊಂಡು ಬಂದ ತಂದೆ–ತಾಯಿಗಳಿಗೆ ಮತ್ತೆ ನೋವನ್ನು ಕೊಡಬಾರದು. ತಮ್ಮ ಮಕರಂದ ಅವರಿಗೆ ತಂದೆ ಸುಹಾಸ್ ಬುಲೇಕರ್ ತೀರಿಕೊಂಡ ಮೇಲೆ ತಾಯಿ ಪೂರ್ವಿ ಮನೆಯಲ್ಲಿದ್ದಳು. ಆಕೆಗೊಂದು ಆಸರೆಯಾಗಿ ಮಗಬೇಕು ಎಂಬ ಚಿಂತನ ಶೀಲಭಾವದಿಂದ ಮಕರಂದನನ್ನು ಹುಡುಕುವುದನ್ನು ಕಾಣಬಹುದು. ತಾವು ತಮ್ಮ ಮನೆ, ಸಂಸಾರ ಎಂದು ಜೀವನ ಸಾಗಿಸಬಹುದಾಗಿದ್ದರೂ ಸಹ ಒಡಹುಟ್ಟಿದ ಬಾಂಧವ್ಯ ತನ್ನ ತಮ್ಮ ಎತ್ತರಕ್ಕೆ ಏರಿರುವ ಸ್ಥಾನ ಎಲ್ಲವನ್ನು ಕಲಿಸುವುದು.

ಕೇವಲ ಕಥೆಯಲ್ಲ ಮಾತ್ರವಲ್ಲದೆ ನಿಜ ಜೀವನದಲ್ಲಿಯೂ ಇಂತಹ ಬಾಂಧವ್ಯಗಳಿದ್ದು, ಹೃದಯದ ಭಾವನೆಯನ್ನು ಬೆಸೆಯುತ್ತವೆ. ನಾನು, ನನ್ನದು ಎಂಬ ಸ್ವಾರ್ಥ ತುಂಬಿ ತುಳುಕುತ್ತಿರುವಾಗ ಬೇರೆಯವರ ಹಿತ ಚಿಂತಿಸುವಂತಹ ಬಾಂಧವ್ಯವನ್ನು ಕಾಣಬಹುದು. ತಾನು ಬದುಕಬೇಕು ತನ್ನ ಜೊತೆಯಲ್ಲಿರುವವರನ್ನು ಬದುಕಿಸಬೇಕು ಎಂಬ ದೃಢ ಮನೋ ನಿರ್ಧಾರವನ್ನು ಹೊಂದಿರುವರ ಪಾರ್ಟನರ್ ಕಥೆಯಲ್ಲಿ ಕಾಣಬಹುದು.

ಸಿಕ್ಕಿರುವ ಕೆಲಸ ಯಾವುದೆಂದು ತಿಳಿಸದೆ ಸ್ವಚ್ಛಂದ ಬದುಕನ್ನು ಕಟ್ಟಿಕೊಳ್ಳಲು ಹೊರಟ ಪಾರ್ಟನರ್ ತನ್ನ ದಿನನಿತ್ಯದ ಬದುಕನ್ನು ಬದಲಾಯಿಸುತ್ತಾನೆ. ಭಾಟಿಯಾ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ. ವೈಧ್ಯರು –"– ತೀವ್ರವಾದ ಅಪೆಂಡಿಸೈಟಿಸ್ ಆಗಿದೆ. ತಕ್ಷಣ ಅಪರೇಷನ್ ಆಗಬೇಕು" ಎಂದಾಗ ರೂಪಕ್ ರಾಥೋಡ್‌ಗೆ ಹೃದಯವೇ ಬಾಯ್ಗೆ ಬಂದಂತೆ ಆಗುತ್ತದೆ. ತನ್ನ ಸ್ನೇಹಿತ (ಪಾರ್ಟನರ್) ತನಗೆ ಏನೆಲ್ಲಾ ವಿಷಯಗಳನ್ನು ಹೇಳದೆ ಮುಚ್ಚಿಟರು ಸಹ ಅವನಿಗೆ ಹುಷಾರಿಲ್ಲದ ಕಾರಣ ಅವನ ಒಳಮನಸ್ಸು ತುಡಿಯುವುದನ್ನು ಕಾಣುತ್ತೇವೆ.

ರಾಜಕೀಯ ಜೀವನವು ಸಹ ಮನುಷ್ಯನ ಜೀವನದಲ್ಲಿ ಬಹುಮುಖ್ಯವಾದಂತ ಘಟ್ಟವಾಗಿದೆ. 'ಭಾಮಿನಿ ಸಪ್ತಪದಿ' ಕಥೆಯಲ್ಲಿ ಬರುವ ಭಾಮಿನಿ ಎಂಬ ಮಹಿಳೆಯು ಅವಿಭಕ್ತ ಕುಟುಂಬದಲ್ಲಿದ್ದುಕೊಂಡು ಜೀವನ ಸಾಗಿಸಿ ತಾನು ರಾಜಕೀಯಕ್ಕೆ ಬರುವಾಗ ಇಡೀ ಸಮಾಜದಲ್ಲಿ ಆಕೆ ಮಹಿಳೆಯರ ಪ್ರತಿನಿಧಿಯಾಗಿ ಕಂಡು ಬರುತ್ತಾಳೆ. ಮನು ಹೇಳಿದಂತೆ ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ ಅಂದರೆ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. ಏಕೆಂದರೆ ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಕ್ಕಳ

ಆಶ್ರಯಲ್ಲಿರುವುದರಿಂದ ಸ್ವಾತಂತ್ರ್ಯದ ಅಗತ್ಯವಿಲ್ಲ ಎಂದು ಹೇಳಿದ್ದಾನೆ. ಆದರೆ ಈ ಕಾಲದ ಮಹಿಳೆಯು ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನನ್ನು ತಾನು ತೊಡಗಿಸಿಕೊಂಡಿದ್ದಾಳೆ. ಸಮಾಜದ ಸುತ್ತ–ಮುತ್ತಲ ದೃಷ್ಟಿಕೋನದಲ್ಲಿ ತಾನು ಏನು ಎಂದು ಸಾಧಿಸುತ್ತಾಳೆ. ಪುರುಷನಿಗೆ ಸರಿ ಸಮಾನವಾಗಿ ಡ್ರೈವರ್, ಡಾಕ್ಟರ್ ಆಡಳಿತಾಧಿಕಾರಿಗಳು ಮೊದಲಾದ ಎಲ್ಲಾ ಉದ್ಯೋಗಗಳಲ್ಲಿ ಇಂದು ಮುಂದಿದ್ದಾಳೆ.

ಭಾಮಿನಿ ಗೋಕರ್ಣದಲ್ಲೆ ಹುಟ್ಟಿ ಬೆಳೆದು, ಅಹಮದಬಾದಿನ ಸ್ಟೇಷನರಿ ಅಂಗಡಿಯವನನ್ನು ಮದುವೆಯಾಗಿ ತಂದೆ–ತಾಯಿಯನ್ನು ಕಳೆದುಕೊಂಡ ಭಾಮಿನಿಗೆ ತಂದೆ ಹೇಳಿದ ಮಾತೊಂದು ತುಂಬಾ ನೆನಪಿನಲ್ಲಿತ್ತು. "ಏನೇ ಆಪತ್ತು ಬಂದರೆ, ಗೋಕರ್ಣಕ್ಕೆ ಹೋಗಿಬಿಡು ಒಂದು ಪೈಸೆ ಆ ಮನೆಯಿಂದ ತಕ್ಕೊಂಡು ಬಂದವನಲ್ಲಾ ನಾನು. ಆ ಮನೆಯಲ್ಲಿ ನಿನಗೆ ಹಕ್ಕಿದೆ."

ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು, ತಾನು ಸಮಾಜಕ್ಕೆ ಮಾಡಬೇಕಾದ ಕೆಲಸವನ್ನು ಅರಿತು ಸೇವೆ ಸಲ್ಲಿಸಿ ಕೊಳಚೆ ಪ್ರದೇಶದಲ್ಲಿದ್ದುಕೊಂಡು ಸೇವೆ ಮಾಡಿ ಅನಾಥ ಮಕ್ಕಳುಗಳನ್ನು ಸಾಕಿ ಬೆಳೆಸುತ್ತಾಳೆ. ಇದು ಸಮಾಜ ಪ್ರಜ್ಞೆಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಹುಟ್ಟಿದ ಬಳಿಕ ತನ್ನ ಕರ್ತವ್ಯವನ್ನು ಅರಿತು ಬಾಳಬೇಕು. ಅದನ್ನು ಭಾಮಿನಿ ಮಾಡಿದ್ದಾಳೆ. ಸಮಾಜ ತಂತಾನೆ ಸುಧಾರಣೆಯಾಗುತ್ತದೆ. ಮನಸ್ಸಿಗೆ ಬೇಸರವಾಗಿ ಗೋಕರ್ಣಕ್ಕೆ ಬಂದಾಗ ದೊಡ್ಡಮ್ಮ ಗಂಡನನ್ನು ಬಿಟ್ಟು ಬಂದಿದ್ದೀಯಾ ಎಂದು ಕೇಳುವಾಗ ಒಂದು ಹೆಣ್ಣನ್ನು ಸಮಾಜ ನೋಡುವ ದೃಷ್ಠಿಕೋನದ ಅರಿವಾಗುತ್ತದೆ. ಒಂದು ಚೌಕಟ್ಟಿನಲ್ಲಿ ಬಾಳಿ, ಜೀವನ ಸಾಗಿಸಬೇಕು ಎಂದು ಸಮಾಜ ನೋಡುವ ಚಿಂತನೆಯನ್ನು ಕಾಣಬಹುದಾಗಿದೆ.

ಮುಂಬೈ, ದೆಹಲಿ, ಬೆಂಗಳೂರು ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿಯೂ ಇಂತಹುದೇ ಅಂಶಗಳನ್ನು ಕಾಣುತ್ತೇವೆ. ಜೀವನವನ್ನು ನೆಮ್ಮದಿಯುತವಾಗಿ ಸಾಗಿಸಲು ಹಣಕಾಸು ಅತ್ಯಂತ ಮಹತ್ವದ್ದು. ಎಲ್ಲದಕ್ಕೂ ಹಣ ಬೇಕೆ ಬೇಕು. ಸಂಪಾದಿಸಲು ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ದುಡಿದು, ಬಂದು ಜೀವನ ನಡೆಸಿ ಸಂತೋಷ, ನಲಿವುಗಳನ್ನು ಇಂದು ಕಾಣಲು ಆಗುತ್ತಿಲ್ಲ. ಆ ಮಟ್ಟಿಗೆ ಮನುಷ್ಯ ಇದ್ದಾನೆ.

ಅಭಿವೃದ್ಧಿಯ ಕಡೆ ದಾಪುಗಾಲು ಹಾಕುತ್ತಿರುವ ಭಾರತದಂತ ಮಹಾನ್ ರಾಷ್ಟ್ರದಲ್ಲಿ ಜನಸಂಖ್ಯೆ ಅತಿಯಾಗಿ, ವೇಗವಾಗಿ ಬೆಳೆಯುತ್ತಿದೆ. ಹಳ್ಳಿ ಗ್ರಾಮೀಣ ಪ್ರದೇಶಗಳಿಂದ ವಲಸೆ ಬರುತ್ತಿರುವವರ ಸಂಖ್ಯೆ ದಿನೇ-ದಿನೇ ಹೆಚ್ಚುತ್ತಿದೆ. ನಗರ ಪ್ರದೇಶಗಳಲ್ಲಿ ತಮ್ಮ ವಸತಿ ಹೂಡುತ್ತಾರೆ. ಕೈಗಾರಿಕೆಗಳಲ್ಲಿ ಕಂಪನಿಗಳಲ್ಲಿ ದಣಿದು, ದುಡಿದು ಬಂದು ತಮ್ಮದೆ ಸೂರಿನಡಿ ವಾಸಿಸುವ ಜನ ವ್ಯವಸ್ಥೆಯನ್ನು ಕಾಣಬಹುದು. ಕೆಲವೊಮ್ಮೆ ಮಕ್ಕಳನ್ನು ತಂತಮ್ಮ ಊರುಗಳಲ್ಲಿ ಬಿಟ್ಟು ಬಂದು ದುಡಿಯುವಂತಹ ಜನರನ್ನು ಕಾಣುತ್ತೇವೆ. ಕೆಲವರು ನಗರ ಎಂದ ತಕ್ಷಣ ನಮಗೆ ನೆನಪಿಗೆ ಬರುವುದು ಬಹುಮಹಡಿಗಳ ಕಟ್ಟಡಗಳು. ಸಾರಿಗೆ, ಕಂಪನಿಗಳು, ಕೈಗಾರಿಕೆಗಳು, ಸಾಫ್ಟವೇರ್ ಕಂಪನಿಗಳು ಮಾತ್ರ ಕಲ್ಪಿಸಿಕೊಳ್ಳುತ್ತೇವೆ. ಅಲ್ಲಿಯೂ ನೋವಿದೆ ಎಂಬುದನ್ನು ಕತೆಗಳ ಮೂಲಕ ದೃಢಪಡಿಸುತ್ತದೆ.

ನಗರಗಳಲ್ಲಿ ಸತ್ಯ ಮೌಲ್ಯಗಳು ಕಡಿಮೆಯಾಗುತ್ತಿವೆಯೇ ಎಂಬುದನ್ನು ವಿಶ್ಲೇಷಿಸಿದಾಗ ಸ್ವಲ್ಪ ಪ್ರಮಾಣದಲ್ಲಿ ದಿನೇ - ದಿನೇ ಕಡಿಮೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ಸಮಯಪ್ರಜ್ಞೆ, ವಿಶ್ವಾಸ, ನಂಬಿಕೆ, ತಾಳ್ಮೆ, ಮೊದಲಾದ ಅಂಶಗಳು ಮಾನವನ ವೈಯಕ್ತಿಕ ಜೀವನದಲ್ಲಿ ಅತ್ಯಂತ ಮಹತ್ವದವುಗಳಾಗಿರುವುದನ್ನು ಕಾಣುತ್ತೇವೆ. ಹೊಸ-ಹೊಸ ಆಸೆ, ಆಕಾಂಕ್ಷೆಗಳೊಂದಿಗೆ ಪೂರ್ಣ ಪ್ರಮಾಣದ ಬದುಕನ್ನು ಕಂಡುಕೊಳ್ಳುವುದು ಮಹತ್ವ ಪಡೆದುಕೊಂಡಿದೆ.

ಕೇವಲ ಗ್ರಾಮಗಳಲ್ಲಿ ಮಾತ್ರ ಪ್ರಾಮಾಣಿಕತೆಯನ್ನು ಕಾಣುತ್ತೇವೆ ಎಂಬ ಪ್ರಜ್ಞೆ ಕೆಲವರಲ್ಲಿ ಮನೆ ಮಾಡಿದೆ. ಆದರೆ ನಗರ ಪ್ರದೇಶದಲ್ಲಿಯೂ ಕೂಡ ಪ್ರಾಮಾಣಿಕತೆ ಮನೆ ಮಾಡಿದೆ ಎಂದು "ಒಪೆರಾಹೌಸ್" ಕಥೆಯಲ್ಲಿ ಕಾಣಬಹುದು. ಸಿಕ್ಕಿದಂತ ಥರ್ಮೋಸ್ ಪ್ಲಾಸ್ಕ್‌ನ್ನು ಸಿಕ್ಕಿದಂತ ವಿಳಾಸಕ್ಕೆ ತಲುಪಿಸಬೇಕೆಂಬ ಮಹತ್ವದ ಉದ್ದೇಶ ಹೊಂದಿರುವುದನ್ನು ಕಾಣುತ್ತೇವೆ. ಅಪ್ಪರ್ ಸ್ಟಾಲ್ ಡಿ-೫೭ ಸೀಟಿನಡಿಗೆ ಥರ್ಮಾಸ್ ಪ್ಲಾಸ್ಕ್ ಸಿಗುತ್ತದೆ. ದೇವನಾಗರಿಯಲ್ಲಿ ನಂದಾಬಾಯಿ, ಸೋನಾವಾಲಾ ಬಿಲ್ಡಿಂಗ್ ತಾಡದೇವ ಎಂದು ಬರೆದಿತ್ತು.

ಒಪೆರಾಹೌಸ್ ಚಿತ್ರಮಂದಿರ ಕಸಗುಡಿಸುತ್ತಿದ್ದವನು ಇಂದ್ರ ನೀಲ ಎಂಬರ್ ಆಸ್ಕರ್, ಮೈನರ್ ತ್ರಿವಳಿ ಚಿತ್ರಮಂದಿರಗಳು ಮುಂಜಾನೆ ಭಗ್ನಗೊಂಡು ದೊಡ್ಡ-ದೊಡ್ಡ ಶಾಪಿಂಗ್

ಮಳಿಗೆಗಳು ಆದವು. ಸ್ನೇಹಿತರಲ್ಲಿ ಬೇರೆ-ಬೇರೆ ಕೆಲಸಗಳನ್ನು ಹುಡುಕಿಕೊಂಡು ಕಣ್ಮರೆಯಾದರು. ಸಿಕ್ಕಿದಂತ ಪ್ಲಾಸ್ಕನ್ನು ಹಿಂದಿರುಗಿಸಲು ಮುಂದಾದ ಆ ಹುಡುಗನ ಪ್ರಾಮಾಣಿಕ ಪ್ರಯತ್ನ ಇಡಿಯ ಸಮಾಜಕ್ಕೆ ಮಾದರಿಯಾಗಿರುವುದನ್ನು ಕಾಣುತ್ತೇವೆ.

ಮನುಷ್ಯ ಮೂಲತಃ ಸಮಾಜ ಜೀವಿ. ಸಂಘ ಜೀವಿ ಸಮಾಜದಲ್ಲಿ ವಾಸಿಸಬೇಕು. ಹೊಂದಾಣಿಕೆಯಿಂದ ಜೀವನ ಸಾಗಿಸಬೇಕು ಎಂಬುದು ಅತ್ಯಂತ ಮಹತ್ವವಾದುದಾಗಿದೆ. ಸಹಕಾರಿಯುತವಾದ ಜೀವನವನ್ನು ಸಹಬಾಳ್ವೆ ಎಂಬ ಆಯಾಮದೊಂದಿಗೂ ಸಹ ಕಾಯ್ಕಿಣಿಯವರ ಕಥೆಗಳನ್ನು ಕಾಣಬಹುದಾಗಿದೆ. ವಿಚಾರಶೀಲತೆ ಪ್ರಜ್ಞಾವಂತ ಜನಗಳನ್ನು ಬೆಳೆಯುವುದನ್ನು ಸಹ ಕಾಣುತ್ತೇವೆ. ತಮ್ಮ ವಸ್ತುವನ್ನು ಬೇರೆಯವರಿಗೆ ಕೊಟ್ಟು ಅದರಲ್ಲಿಯೂ ತೃಪ್ತಿಕಾಣುವಂತ ಜನರನ್ನು ಕಾಣುತ್ತೇವೆ. ಮತ್ತೆ ಆ ವಸ್ತುವಿನ ಅವಶ್ಯಕತೆ ಅತ್ಯಂತ ಮಹತ್ವದ್ದು ಎನಿಸಿದಾಗ ತಮಗೆ ಬೇಕಾದಾಗ ಪಡೆಯಲು ಇಚ್ಛೆ ಬಂದರು ಆ ವಸ್ತು ಅವರಿಗೆ ಸೇರಬೇಕೆಂಬ ದೃಢ ವಿಶ್ವಾಸದ ನಿಲುವನ್ನು ಹೊಂದಿರುವುದನ್ನು ಕಾಣುತ್ತೇವೆ. ಈ ವಿಶ್ಲೇಷಣೆಯನ್ನು ಒಳಗೊಂಡಿರುವಂತಹುದು "ಟ್ರೈಸಿಕಲ್" ಎಂಬ ಕಥೆ. ನಾಯಕ ಮಾಸ್ತರರು ಘಟ್ಟದ ಮೇಲೆ ವರ್ಗವಾಗಿ ಹೋಗಿದ್ದರು ಒಂದು ದಿನ ಗೋಕರ್ಣದ ರಥ ಬೀದಿಯಲ್ಲಿ ಕಾಣಿಸಿಕೊಂಡರು. ಗೋಕರ್ಣವು ತಾವು ಇದ್ದಾಗ ಇದ್ದ ಗೋಕರ್ಣಕ್ಕಿಂತ ಈಗ ತುಂಬಾ ಬದಲಾಗಿದೆ. ಹಾಗೆ ಭಿನ್ನವಾಗಿರುವುದನ್ನು ನಾಯಕ ಮಾಸ್ತರರು ಗಮನಿಸುತ್ತಾರೆ. ಪಕ್ಕದ ಮನೆಯ ಪ್ರಭಾಕರ ಮತ್ತು ಪ್ರಿಯಾಗಿಗೆ "ಆನಂತ ಎಂಬ ಮಗು ಹುಟ್ಟಿದಾಗ, ಮೂರು ಚಕ್ರದ ಟ್ರೈಸಿಕಲ್‌ನ್ನು ನೀಡುತ್ತಾರೆ. ಹೆಂಡತಿ ತಿಮ್ಮಕ್ಕನು ಮನಸಾರೆ ಒಪ್ಪುತ್ತಾಳೆ. ಆದರೆ ತಮ್ಮ ಮಗಳು ಗರ್ಭವತಿಯಾಗಿ ತಮ್ಮ ಮನೆಗೊಂದು ಕೂಸು ಬರಬಹುದೆಂಬ ನಿರೀಕ್ಷೆಯಲ್ಲಿದ್ದಾಗ ಟ್ರೈಸಿಕಲ್ ಪಡೆಯಲು ಹೋದಾಗ ಆ ಮಗು ಅದನ್ನು ತುಂಬಾ ಇಷ್ಟುಪಡುತ್ತಿರುತ್ತದೆ.

ನಾಯಕ ಮಾಸ್ತರರು ಅದನ್ನು ಗಮನಿಸಿ "ಆನು (ಅನಂತ) ಚಂದ ಆಗಿದ್ದಾನೆ. ಆದರೆ ಸ್ವಲ್ಪ ಬಡಕಲಾಗಿ ಕಂಡ ಆರು ತಿಂಗಳಿಗೊಮ್ಮೆಯಾದರೂ ಜಂತುವಿನ ಔಷಧಿ ಕೊಡಿಸಿ" ಎಂದು ಹೇಳಿ ವಾಪಸ್ಸು ಬರುವಲ್ಲಿ ತಾವು ಕೊಟ್ಟ ವಸ್ತುವನ್ನು ಪಡೆಯಲು ಮನಸ್ಸೆ ಬರುವುದಿಲ್ಲ. ವಾಪಸ್ಸು ಪಡೆಯುವುದಿಲ್ಲ. ಹಾಗೆ ವಾಪಸ್ಸು ಹೋಗುತ್ತಾರೆ.

ಮನುಷ್ಯನ ವ್ಯಕ್ತಿತ್ವ ಎಂಬುದು ಅತ್ಯಂತ ಮಹತ್ತರವಾದುದಾಗಿದೆ. ವಸ್ತುವಿಗೆ ಮಹತ್ವ ನೀಡದೆ, ವ್ಯಕ್ತಿಯ ಹೃದಯದ ಅಂತಃಕರಣಕ್ಕೆ ಮಹತ್ವಕೊಡುವುದನ್ನು ಕಾಣುತ್ತೇವೆ. ಮಗುವಿನ ಮನಸ್ಸನ್ನು ನೋಯಿಸಬಾರದು. ಆ ಮಗು ಬೇರೆ ಅಲ್ಲಾ, ತಮ್ಮ ಮಗು ಬೇರೆಯಲ್ಲಾ ಎಂಬ ಸಕರಾತ್ಮಕ ಭಾವನೆ ಹೊಂದಿರುವುದನ್ನು ಕಾಣಬಹುದಾಗಿದೆ. ಜೀವನದಲ್ಲಿ ಅತ್ಯಂತ ಭಾವನಶೀಲವಾದ ಮಾನವನ ವ್ಯಕ್ತಿತ್ವವು ಘನತೆಯಿಂದ ಕೂಡಿರುವುದನ್ನು ಕಾಣುತ್ತೇವೆ

ಮುಂಬೈನಂತಹ ಮಹಾನ್ ನಗರವನ್ನು ಕಾಣುತ್ತೇನೆ ಎಂದು ಬಣ್ಣದ ಕಾಲು ಕಥೆಯಲ್ಲಿ ಬರುವ ಚಂದುವಿನ ಪಾತ್ರ ಮಹತ್ತರವಾದುದಾಗಿದೆ. ಅತಿ ತುಂಟನಾಗಿದ್ದ ಚಂದುವನ್ನು ಹತೋಟಿಗೆ ತರಲು ಸಾಧ್ಯವೇ ಇಲ್ಲ ಎನಿಸಿದ್ದ ನರಸಿಂಹ ಮತ್ತು ಮೀರಾಳಿಗೆ ಮುಂಬಯಿಯ ರಿಮಾಂಡ್ ಹೋಂಗೆ ಹಾಕಬೇಕೆಂದು ಗಟ್ಟಿಯಾದ ತೀರ್ಮಾನ ಮಾಡುತ್ತಾರೆ. ಅಷ್ಟೊಂದು ತುಂಟನಾಗಿದ್ದವನು ಚಂದು. ಆತನನ್ನು ನಿಭಾಯಿಸುವುದು ಕಷ್ಟಕರವಾದ ಕೆಲಸ.

ಮೀರಾ "ಯಾಕೋ ಪೋರ ಈ ದುರ್ಬುದ್ದಿ, ಯಾಕೆ ರಾಕ್ಷಸರಂತೆ ಮಾಡ್ತಿ. ಮುದ್ದುಮರಿ ಚಿನ್ನೂ" ಎಂದು ಮುದ್ದಿಸುತ್ತಿದ್ದಳು. ಈ ಕಥೆಯಲ್ಲಿ ಚಂದುವಿಗೆ ಮನ ಮುಟ್ಟುವಂತೆ ಕುಂಟ ಮಂಗೇಶ ಮುಂಬೈನ ವರ್ಣನೆ ಮಾಡುತ್ತಿದ್ದು, "ಯೇ ಹೈ ಬೊಂಬೇ ಮೇರಿ ಜಾನ್". ನನ್ನ ಸಾವಿರಾರು ಹೆಂಡತಿಯರು ಇದ್ದಾರೆ" ವಿವರಣೆಗಿಂತ ಅನುಭವವು ಜೀವನವನ್ನು ಕಲಿಸುತ್ತದೆ. ಮುಂಬೈನ ಹಲವಾರು ಚಿತ್ರಗಳನ್ನು ಕುಂಟ ಮಂಗೇಶ ಕೊಡುವುದು.

ತಾನು ಕಂಡಿರದ ಮುಂಬೈ ಚಿತ್ರದ ಕಲ್ಪನೆ ಚಂದು ಮಾಡಿಕೊಳ್ಳುವುದು ಮಕ್ಕಳ ಮಾನಸಿಕವಾದ ಮನಸ್ಥಿತಿಯನ್ನು ವಿವರಿಸುತ್ತದೆ. ಶೀರ್ಷಿಕೆಯಲ್ಲಿ ಕಂಡು ಬರುವಂತೆ ಬಣ್ಣದ ಕಾಲು ಕಥೆ ವಿಚಿತ್ರ ಮನಸ್ಥಿತಿಯನ್ನು ಮನದಟ್ಟು ಮಾಡಿಕೊಡುತ್ತದೆ. ವ್ಯಕ್ತಿಯು ವ್ಯಕ್ತಿಗತವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ರಾಜಕೀಯವಾಗಿ ಶೈಕ್ಷಣಿಕವಾಗಿ ಜೀವನ ಚೈತನ್ಯವನ್ನು ರೂಪಿಸಿಕೊಳ್ಳುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಸಮಾಜದಲ್ಲಿ ಜೀವಿಸುವ ಪ್ರತಿಯೊಂದು ಜೀವಿಗೂ ಜೀವಿಸುವ ಬದುಕುವಂತ ಹಕ್ಕಿದೆ. ಅದನ್ನು ಕಸಿದುಕೊಳ್ಳಬಾರದು. ಮೌಲ್ಯಗಳನ್ನು ವ್ಯಕ್ತಿಯು ವ್ಯಕ್ತಿಗತವಾಗಿ ರೂಪಿಸಿಕೊಂಡಾಗ ಆಚರಣೆಗೆ ತಂದಾಗ ಸಾಧ್ಯವಾಗುತ್ತದೆ. ಜೀವಿಗಳನ್ನು ಹಿಂಸಿಸಬಾರದೆಂದು ತಿಳಿದಿದ್ದರು. ವಿದ್ಯಾವಂತ ಯುವಕರೆ ಮುಂದಾದಾಗ ಮೌಲ್ಯಗಳ ಆಯಾಮ ದೃಷ್ಟಿಯಿಂದ ಮೌಲ್ಯಗಳು ಮೂಲೆಗುಂಪು ಮಾಡುತ್ತಿರುವುದನ್ನು ಕಾಣುತ್ತೇವೆ.

ನವಿಲುಗಳ ಬಗ್ಗೆ ಕಾಳಜಿ ಹೊಂದಿದಂತ ಮಾಸ್ತರರು, ನವಿಲುಗಳನ್ನು ಕೊಲ್ಲಬಾರದೆಂದು ಘನಶ್ಯಾಮ ನಾಯಕನಿಗೆ ಎಷ್ಟೇ ಹೇಳಿದರು ಕೇಳದೆ ತಾನು ಶಿಕ್ಷಕ ಎಂಬುದನ್ನು ಮರೆತು, "ಊರಿನ ಉದ್ಧಾರ ಮಾಡ್ತಿರೋ ಹೊಟ್ಟೆಗಿಲ್ಲದವರು ಅನ್ನ ತಿನ್ನಬೇಕೊ ಅಥವಾ ನವಿಲು ನೋಡ್ತ ಪೂಜೆ ಮಾಡಬೇಕೊ" ಎಂದು ಹೇಳಿದಾಗ, ಮನುಷ್ಯನ ಸ್ವಾರ್ಥ ತುಂಬಿ ತುಳುಕುವುದನ್ನು ಕಾಣುತ್ತೇವೆ. ತನ್ನ ಹಿತ ತನ್ನ ಭಾವನೆ, ತನ್ನ ಸ್ವಾರ್ಥಕ್ಕಾಗಿ ಮಾತುಬಾರದ ಪಕ್ಷಿ, ಪ್ರಾಣಿಗಳನ್ನು ಕೊಂದು ತಿನ್ನುವ ಮಾನವನ ಅಸೂಯಾ ಪರವ್ಯಕ್ತಿತ್ವವನ್ನು ಎತ್ತಿ ಹಿಡಿಯುವುದನ್ನು ಕಾಣುತ್ತೇವೆ. ಮಾಸ್ತರ ಕೈತೋಟಕ್ಕೆ ಬಾವಿಯ ನೀರು ಹಾಕುತ್ತಿದ್ದ ಅಜ್ಜಿಗೆ ಘನಶ್ಯಾಮ ತಾಕಿತ್ತು ಮಾಡಿ ನೀರು ಬಿಡದಂತೆ ಮಾಡುವ ಸಮಯ, ಸನ್ನಿವೇಶ ಮನುಷ್ಯ ಸಂಕುಚಿತ ಮನೋಭಾವನೆ ಒಳಗೊಂಡಿರುವುದನ್ನು ಸಹ ಕಾಣುತ್ತೇವೆ. ಸುಂದರ ಬದುಕಿನ ಕ್ಷಣಗಳನ್ನು ಮನುಷ್ಯ ಯಾವ ರೀತಿ ಕಳೆದುಕೊಳ್ಳುತ್ತಾನೆ ಮಹತ್ವ ಕೊಡಬೇಕಾದ ವಿಷಯಕ್ಕೆ ಕೊಡದೆ ಬೇರೆ ವಿಷಯಗಳಿಗೆ ಕೊಡುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ. ಮಕ್ಕಳನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕು. ದೊಡ್ಡವರಾದ ಮಕ್ಕಳು ತಮಗೆ ಸರಿ-ಸಮಾನರಾಗಿ ಇರುತ್ತಾರೆ. "ಅವರ ಭಾವನೆಗಳಿಗೂ ಬೆಲೆ ಕೊಡಬೇಕು. ಮನುಷ್ಯ-ಮನುಷ್ಯನ ಸಂಬಂಧಗಳನ್ನು ಗುರ್ತಿಸಬೇಕು ಎಂಬುದನ್ನು ಹಾಗೂ ಮುಂಬೈನಂತಹ ಮಹಾನಗರದಲ್ಲಿ ಯಾವ ರೀತಿಯ ಬದುಕು ಇದೆ ಎಂಬುದನ್ನು ನಾಡಿ ಹಿಡಿದು ಕಾಯ್ಕಿಣಿಯವರು ಕೊಂಡಿ ಕಥೆಯ ಮೂಲಕ ತೋರಿಸಿದ್ದಾರೆ. ನೀಲಕಂಠನಿಗೆ ಅಣ್ಣ (ಮಧುಕರ) ಮಿಲಿಟರಿಯಿಂದ "ಮುಂಬೈ, ಹುಷಾರು, ಯಾರನ್ನು ನಂಬಬೇಡ" ಎಂದು ಬರೆಯುತ್ತಾನೆ. ತಾನು ಇದ್ದ ಮನೆಯಿಂದ ಹೊರ ನಡೆಯುವುದು ಇಂತಿಷ್ಟು ಹಣ ಕೊಟ್ಟಾಗ ಅವರು ಮತ್ತೆ ಮೊದಲಿನಂತೆ ಇರುವುದು. ಹಣದ ಮಹತ್ವವನ್ನು ತಿಳಿಸುತ್ತವೆ.

ಮುಂಬೈಯ ಬದುಕು ಅತಿ ವೇಗವಾದಲ್ಲಿ ಹಾಗೂ ಸಮಯ ಪ್ರಜ್ಞೆ ಎಂಬುದು ಅತ್ಯಂತ ಮಹತ್ವವಾದುದಾಗಿದೆ. ಮುಂಜಾನೆಯ ಅಲಾರಂ, ಮೂರು ನಿಮಿಷದ ಸ್ನಾನ, ಹತ್ತು ನಿಮಿಷದ ಬಸ್ಸು, ಒಂದು ಗಂಟೆಯ ರೈಲು, ಎಂಟು ಗಂಟೆಯ ಡ್ಯೂಟಿ ಮತ್ತೆ ಒಂದು ಗಂಟೆಯ ರೈಲು, ಹತ್ತು ನಿಮಿಷದ ಬಸ್ಸು- ಮನೆಯಲ್ಲಿ ಪರಸ್ಪರ ಮಾತನ್ನೆ ಕೊಂದು ಹಾಕಿರುವ ಟಿವಿಯೆಂಬ ಬ್ರಹ್ಮರಾಕ್ಷಸ ಹೀಗೆ ಮುಂಬೈನಲ್ಲಿ ದಿನಚರಿ ಮುಗಿಯುತ್ತಿತ್ತು. ಬದುಕು, ಬದುಕಿನ ಕ್ಷಣಗಳು ಪ್ರೀತಿ, ವಿಶ್ವಾಸಕ್ಕೆ ಭಾವನೆಗಳಿಗಿಂತ ವ್ಯಕ್ತಿಯು ಸಮಯ ಪ್ರಜ್ಞೆಯಲ್ಲಿ ಅದನ್ನು ಪಾಲಿಸಬೇಕಾದುದು. ಅತ್ಯಂತ ಮಹತ್ವದ ವಿಚಾರ ಸಂಗತಿಯಾಗಿತ್ತು. ಆದರೂ ಪ್ರೀತಿಯನ್ನು ಬೆಳೆಸಿದ ತಂದೆ, ಅವರ ಮೌಲ್ಯಗಳು, ಆದರ್ಶಗಳು ವ್ಯಕ್ತಿಗತವಾಗಿ ದಾರಿದೀಪಗಳಾದವು.

ನಗರಗಳಲ್ಲಿ ಅನುಕರಣೆ ಒಂದು ಪ್ರಮುಖ ವಿಷಯವಾಗಿವೆ. ಚಂದೂವಿನ ತಲೆ ಬಾಗಿಲು ಬಡಿದು ಆದ ಗಾಯಕ್ಕೆ ಪಟ್ಟಿ ಹಚ್ಚಿಕೊಂಡು ನೆರೆಮನೆಯವರೆಲ್ಲಾ "ಮಿಥುನ್ ಚಕ್ರವರ್ತಿ" ಎಂದು ಕರೆದದ್ದೇ ಇದಕ್ಕೆ ನಾಂದಿ. ಹೌದು ನಾನು ಹಾಗೆ ಇದ್ದೇನೆ ಎಂಬ ಕಲ್ಪನೆ ಬಂದು ನಾನು ಹಾಗೆಯೆ ಹಾಗಬೇಕು ಎಂಬುದು ಮಕ್ಕಳ ಮನಸ್ಸಿನ ಮೇಲೆ ತೀವ್ರತರವಾದ ಪರಿಣಾಮ ಬೀರುತ್ತದೆ. ಕೇವಲ ಯಾರೋ ಹೇಳಿದಕ್ಕೆ ತಾನು ತಂಬಾಕಿನಂಗಡಿಯ ಫಂಡರಿ ಮಗ ಚಂದು ಎಂಬುದನ್ನು ಮರೆತು ಮಿಥುನ್ ಚಕ್ರವರ್ತಿ ಎಂದೇ ಕಾಣುತ್ತೇನೆ ಎಂದು ಭಾವಿಸಿದ.

ಸಿನಿಮಾಗಳಿಗೆ ಮೀಸಲಿದ್ದ ಪತ್ರಿಕೆಗಳೆಂದರೆ ರುಪೇರಿ, ಮಾಯಾಪುರಿ ಇವು ಮಕ್ಕಳಲ್ಲಿ ಸಿನಿಮಾದ ಬಗ್ಗೆ ವಿಶೇಷ ಆಸಕ್ತಿ ಮೂಡಿಸುತ್ತಿದ್ದವು. ಆಧುನಿಕ ಯುಗದಲ್ಲಿ ಮಾಡಲಿಂಗ್, ಸಿನಿಮಾ ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿ ಇರುವವರೇ ಹೆಚ್ಚು ಅವರ ತಳಮಳ, ವೇದನೆಗಳು ಗುರಿಮುಟ್ಟುವ ತನಕ ಒಂದೆಡೆ ನಿಲ್ಲಲಾಗುವುದಿಲ್ಲ. ಆ ವಯಸ್ಸಿನ ತಾವು ಏನು ಮಾಡಬೇಕು. ಯಾವ ಗುರಿ ಮುಟ್ಟಬೇಕು ಎಂಬುದಕ್ಕಿಂತ ಹೆಚ್ಚಾಗಿ ಅನುಕರಣೆಗೆ ಮಹತ್ವ ನೀಡುವಂತಹುದನ್ನು ಕಾಣಬಹುದಾಗಿದೆ.

ಮುಂಬೈನಂತಹ ಮಹಾನಗರಗಳಲ್ಲಿ ಸಮಯ ಎಂಬುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ತಲೆಗೆ ಎಣ್ಣೆ ಹಾಕಿಕೊಳ್ಳುತ್ತಿದ್ದ ಒಬ್ಬ ಕೇಳಿದ "ಏನು ಕಸುಬು"?

ಸಿನಿಮಾ ಸೇರಲು ಬಂದಿದ್ದೇನೆ ಎಂಬ ಆತ ಹೌದೆ ಮುಂದಿನ ಪುಟ್‌ಪಾತಿನಲ್ಲಿ ಪೋಸ್ಟ್ ಡಬ್ಬಿಯ ಹತ್ತಿರ ಮಲಗುವ ಪಕ್ಕಾ ಎಷ್ಟೋ ಸಿನಿಮಾಗಳಲ್ಲಿ ಪಾರ್ಟು ಮಾಡಿದ್ದಾನೆ. ಎಷ್ಟೋ ಸ್ಟುಡಿಯೋ ಮೇಸ್ತ್ರಿಗಳು ಅವನಿಗೆ ಪರಿಚಯದವರು ಎಂದು ಹೇಳಿ ನಿದ್ದೆಗೆ ಜಾರಿದರು. ಅಂದರೆ ಪ್ರಸ್ತುತ ಯುವ ಸಮಾಜ ಸಿನಿಮಾ ಕ್ಷೇತ್ರದಲ್ಲಿ ಇರಿಸಿಕೊಂಡಿರುವ ಆಸಕ್ತಿ ಎದುರಿಸುತ್ತಿರುವಂತಹ ಕಷ್ಟಗಳು, ಸವಾಲು, ಸಮಸ್ಯೆಗಳನ್ನು ಸೂಕ್ಷ್ಮವಾಗಿ ಬಿಚ್ಚಿಡುತ್ತದೆ. ಆಯ್ಕೆ ಮಾಡಿಕೊಂಡಂತ ಕ್ಷೇತ್ರ ಮಹತ್ವದ್ದೇ ಆಗಿದ್ದರೂ ಸವಾಲುಗಳು ನೊಡುವ ನೋಟಗಳು ಪ್ರಗತಿಯನ್ನು ಬಯಸುತ್ತದೆ. ಕೇವಲ ಮುಂಬೈನಂತಹ ಮಹಾನಗರಗಳು ಅಷ್ಟೇ ಅಲ್ಲ, ಬೆಂಗಳೂರು, ದೆಹಲಿಗಳಲ್ಲಿಯೂ ಉದ್ಯೋಗಕ್ಕಾಗಿ, ವ್ಯವಸ್ಥೆಗಾಗಿ, ತಮ್ಮ ಸ್ಥಾನಕ್ಕಾಗಿ ಅಲೆಯುವಂತಹ ಜನ ಏನೆಲ್ಲ ಸಮಸ್ಯೆಗಳ ಮಧ್ಯೆ ಜೀವನವನ್ನು ಸಾಧಿಸಬೇಕು ಎಂಬುದು ವಿಧಿತವಾಗುತ್ತದೆ.

ಕಣ್ತೆರೆದರೆ ನಕ್ಷತ್ರಗಳು ಮುಚ್ಚಿದರೆ ರೈಲಿನ ಖಡ ಖಡ ಸದ್ದು, ತನ್ನ ಕೊಂಡಿಗಳೆಲ್ಲ ಕಳಚಿದಂಥ ವಿಚಿತ್ರ ತೇಲುವ ಅನುಭವ ಉಂಟಾಗುವುದು. ಕೆಲಸಕ್ಕೆ ಹೋಗಿದ್ದ ಕಾರ್ಮಿಕರು ತಮ್ಮ ತಮ್ಮ ಪಾಳಿ ಮುಗಿಸಿಕೊಂಡು ವಾಪಸ್ಸಾಗುವುದು. ರಾತ್ರಿ ತಿಂಡಿ ಗಾಡಿಗಳು ಕಿಚ ಕಿಚ ಸದ್ದುಮಾಡುವುದು, ಕಾರ್ಯಕಾರಣ ಸಂಬಂಧವಿರದ ಎಷ್ಟೊಂದು ಜೀವಗಳ ನಡುವೆ ಹೊಸತೊಂದು ಜೀವ ಬಲಿಯತೊಡಗಿತು. ನಾಯಕನಾಗಲು ಪಡಬೇಕಾದಂತಹ ಕಷ್ಟಗಳು ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಅನುಭವಿಸಬೇಕು. ನಂತರದ ಬದುಕು ಯಾವ ರೀತಿಯಿಂದ ಕೂಡಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಹಣ, ಅಧಿಕಾರ, ಅಂತಸ್ತಿನವರು ಮೇಲ್ಮಟ್ಟದ ಜೀವನ ನಡೆಸುತ್ತಾರೆ. ಪ್ರತಿಭೆ ಇದ್ದರೂ ಬಡ ಮಕ್ಕಳನ್ನು ಹಾಗೆ ಇರುತ್ತದೆ.

ಬದುಕಿನ ವಿವಿಧ ಮಜಲುಗಳನ್ನು ಸ್ವಚ್ಛಂಧ ಬದುಕನ್ನು ನಡೆಸಲು ಪಡಬೇಕಾದ ಕಷ್ಟಗಳು ವ್ಯಕಿ ಗುರಿಮುಟ್ಟುವ ತನಕ ಅಥವಾ ಸಮಾಜದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಮಾಡಬೇಕಾದಂತಹ ಹರಸಾಹಸಗಳು ಜೀವನದ ದಿಕ್ಕನ್ನು ಬದಲಿಸುತ್ತವೆ. ಮನುಷ್ಯ ಬೆಳೆಯುತ್ತ ಸಹಜವಾಗಿ ಆಸೆಗಳು ಹೆಚ್ಚಾಗುತ್ತ ಹೋಗುತ್ತದೆ. ಸ್ಕೂಟರ್ ಇದ್ದರೆ ಕಾರು ಬೇಕು ಎನಿಸುತ್ತದೆ. ಹಾಗೆ ಮನೆ, ವಸ್ತು, ಒಡವೆಗಳು ಅಕರ್ಷಣೆಗೆ

ಗುರಿಪಡಿಸುತ್ತವೆ. ಆದರೆ ತಾವು ಏನನ್ನು ಕಳೆದುಕೊಂಡಿದ್ದೇವೆ ಎಂಬುದನ್ನು ಹುಡುಕುವುದರಲ್ಲಿ ವಿಫಲನಾಗುತ್ತಾನೆ. ಬುದ್ಧಿ ಬಂದಾಗಿನಿಂದಲೂ ಸಹ ನಾಶವಾಗುವಂತ ವಸ್ತುಗಳಿಗೆ ಆಸೆ ಪಟ್ಟು ಶಾಶ್ವತ ಅಸ್ತಿತ್ವವನ್ನು ಮರೆಯುತ್ತಾನೆ.

ಚಿಕ್ಕಂದಿನಲ್ಲಿ ಬಾಲ್ಯದಲ್ಲಿ ಹಾಗೂ ಬೆಳೆಯುತ್ತ ಯಾವ ಸಮಯದಲ್ಲಿ ಏನು ಮಾಡಬೇಕು ಎಂಬುದನ್ನು ಮರೆಯುತ್ತಾನೆ. ಸಮಯವನ್ನು ಕಳೆದುಕೊಳ್ಳುತ್ತಾನೆ. ಹಣ ಹೋದರೆ ಸಂಪಾದಿಸಬಹುದು. ಆದರೆ ಸಮಯ ಹೋದರೆ ಸಂಪಾದಿಸಲು ಸಾಧ್ಯವಿಲ್ಲ ಆ ಸಮಯದಲ್ಲಿ ತಾನು ಏನು ಮಾಡಬೇಕಿತ್ತು ಎಂಬ ಸಮಯ ಪ್ರಜ್ಞೆಯನ್ನು ಮರೆಯುತ್ತಾನೆ. ಉದಾ: ಬಣ್ಣದ ಕಾಲು ಕಥೆಯ ಚಂದು. ಆ ಚಿಕ್ಕ ಹುಡುಗ ತುಂಟ ಹುಡುಗನಾಗಿ ಎಲ್ಲರನ್ನು ಕೀಟಳೆ, ತರಲೆ ಮಾಡಿ ಮುಂಬೈನ ರಿಮ್ಯಾಂಡ್ ಹೋಂಗೆ ಹಾಕಲು ಇಚ್ಛಿಸುತ್ತಾರೆ. ಆದರೆ ಕಳೆದುಕೊಂಡ ಬಾಲ್ಯದ ದಿನಗಳನ್ನು ಮತ್ತೆ ತರಲು ಸಾಧ್ಯವೇ? ಹಾಗೆ ಜೀವನದ ಪ್ರತಿಯೊಂದು ಹಂತದಲ್ಲಿಯೂ ವ್ಯಕ್ತಿಯು ಒಂದಲ್ಲ ಒಂದು ಗುರಿ ಹೊಂದುತ್ತಾನೆ. ಸಮಯ ಪ್ರಜ್ಞೆಯನ್ನು ಮರೆಯುತ್ತಾನೆ. ಗುರಿ ಸಾಧಿಸುವಲ್ಲಿ ವಿಫಲನಾಗುತ್ತಾನೆ. ಗುರಿಯೊಂದಿಗೆ ಹೋಗಿ ಪ್ರಯತ್ನ ಪಟ್ಟು ಗುರಿಸಾಧನೆ ಮಾಡಿ ಜೀವನದ ಸಫಲತೆಯ ಸಾರವಿದೆ ಎಂಬುದನ್ನು ಸಹ ಅರಿಯದೆ ವಿಫಲನಾಗುತ್ತಾನೆ. ಬದುಕಿನ ಏರಳಿತಗಳು ಸಹಜ ಆ ಏರಿಳಿತಗಳೊಂದಿಗೆ ತನ್ನ ಜೀವನದ ದಾಪುಗಾಲನ್ನು ಹಾಕಬೇಕೆಂಬುದನ್ನು ಮರೆತು ಬಿಡುತ್ತಾನೆ.

ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ದುಡಿದು ಬಂದು ಗಂಡ, ಹೆಂಡತಿ, ಮಕ್ಕಳು ದುಡಿದರು ಕೆಲಸ ಮಾಡಿದರು ಮಧ್ಯಮ ವರ್ಗದ ಜೀವನವನ್ನು ನಡೆಸಬಹುದಷ್ಟೆ. ಉನ್ನತ ಆಸೆ, ಭೋಗ ಜೀವನವನ್ನು ಹೊಂದಿರುವ ಯುವಕ, ಯುವತಿಯರು, ಸಿನಿಮಾ, ಮಾಡಲಿಂಗ್ ಮೊದಲಾದ ಆಸೆ ಆಕಾಂಕ್ಷೆಗಳನ್ನು ಹೊಂದಿದ್ದವರಾಗಿರುತ್ತಾರೆ. ಆದರೆ ಕೆಲವರಲ್ಲಿ ಅದನ್ನು ಈಡೇರಿಸಿಕೊಳ್ಳಲು ಹಣದ ಕೊರತೆ ಇರುತ್ತದೆ. ದುಡಿಯುತ್ತಾರೆ, ಗಳಿಸುತ್ತಾರೆ. ಆ ಕ್ಷೇತ್ರಕ್ಕೆ ಬಂದರು ಕೆಲವರಿಗೆ ಬೆಂಬಲವಿರುತ್ತದೆ. ಮತ್ತೆ ಕೆಲವರಿಗೆ ಹಣದ ವ್ಯವಸ್ಥೆ ಇರುವುದಿಲ್ಲ. ಪ್ರತಿಭೆಯಿದ್ದರೂ ಕೆಲವೊಮ್ಮೆ ಅದೃಷ್ಟ ಎಂಬುದು ವ್ಯಕ್ತಿಗತವಾಗಿ ಇರಬೇಕಾಗುತ್ತದೆ. ಜೀವನದಲ್ಲಿ ಅಷ್ಟೇನು ಪ್ರಭಾವ ಬೀರುವುದಿಲ್ಲ. ಜೀವನದ

ನಶ್ವರತೆಯಿಲ್ಲಿಯೂ ಶಾಶ್ವತ ಸ್ಥಾನವನ್ನು ಉಳಿಸಿಕೊಳ್ಳಲು ಯತ್ನಿಸುತ್ತಿರುವಂತಹ ಧೀಮಂತ ವ್ಯಕ್ತಿತ್ವವನ್ನು ಕಾಣುತ್ತೇವೆ.

ನಗರಗಳ ಬದುಕು ತುಂಬಾ ಮಹತ್ವ ಹಾಗೂ ಪ್ರಗತಿ ಪರವಾಗಿರುತ್ತದೆ. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕಡಿಮೆ ಸಂಬಳಕ್ಕೆ ದುಡಿಸಿಕೊಳ್ಳುತ್ತಾರೆ. ಕೈಗಾರಿಕೆಗಳಲ್ಲಿ, ಗಾರ್ಮೆಂಟ್ಸ್‌ಗಳಲ್ಲಿ ಮಕ್ಕಳು ಎಂಬುದನ್ನು ನೊಡದೇ ದುಡಿಸಿಕೊಳ್ಳುತ್ತಾರೆ. ಅದೇ ರೀತಿ ದೊಡ್ಡ ದೊಡ್ಡ ಕಂಪನಿಗಳಲ್ಲಿ ಕಂಪ್ಯೂಟರ್ ಮೂಲಕ ಹಗಲು ರಾತ್ರಿ ದುಡಿಸಿಕೊಳ್ಳುತ್ತಾರೆ. ಉದಾ: ವಸುದೇಂದ್ರ ರವರ ಯುಗಾದಿ ಕಥೆಯ ಪ್ರಹ್ಲಾದನನ್ನು ಕಾಣುತ್ತೇವೆ. ಹಣ ಮುಖ್ಯ ನಗರಗಳಲ್ಲಿ ಜೀವನ ನಡೆಸಲು ಹಣಬೇಕು. ಆ ಹಣ ಗಳಿಸುವ ಮಾರ್ಗ ಅತ್ಯಂತ ಮಹತ್ತರವಾದುದು.

ಹಿಂದೆ ಒಂದು ಕಾಲದಲ್ಲಿ ಗಂಡ ಮಾತ್ರ ದುಡಿಯಬೇಕು. ಹೆಣ್ಣು ನಾಲ್ಕು ಗೋಡೆಗಳ ಮಧ್ಯೆ ಇದ್ದು, ಜೀವನ ಸಾಗಿಸಬೇಕು. ಅವನು ತಂದಿದ್ದನ್ನು ಬೇಯಿಸಿ ಹಾಕಬೇಕು ಎಂಬ ಮೂಢ ಸಂಪ್ರದಾಯವನ್ನು ಹೊಂದಿದವರು ಇದ್ದರು. ಆದರೆ ಗಂಡ, ಹೆಂಡತಿ ದುಡಿದರೆ ಜೀವನ ಎಂಬುದು ಇಂದಿನ ನಗರಗಳ ವ್ಯವಸ್ಥೆಯನ್ನು ನೋಡಿದರೆ ಅರ್ಥವಾಗುತ್ತಿದೆ. ರಜೆಯಿಲ್ಲದ ವಿಶ್ರಾಂತಿ ಇಲ್ಲದ ಬದುಕನ್ನು ಸಾಗಿಸಲು ತಮ್ಮ ಜೀವನವನ್ನು ಮುಡುಪಾಗಿಡುತ್ತಾರೆ. ಬದುಕು ಅರ್ಥ, ಸತ್ಯ, ನಂಬಿಕೆ, ಆತ್ಮವಿಶ್ವಾಸಗಳು ಒಂದರ ನೆಲೆಯಿಂದ ಒಂದು ಕೂಡಿರುವುದನ್ನು ಕಾಣುತ್ತೇವೆ. ಗಂಡ ಹೆಂಡತಿ ಇಬ್ಬರು ಕೆಲಸಕ್ಕೆ ಹೋದರೆ ಮಕ್ಕಳನ್ನು Play Home ಬಿಟ್ಟು ಹೋಗುತ್ತಾರೆ. ಆ ಮಗು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ತಂದೆ ತಾಯಿಯ ಪ್ರೀತಿಯನ್ನು ಕಳೆದುಕೊಳ್ಳುತ್ತದೆ. ಸಾಯಂಕಾಲ ಬಂದಂತ ತಂದೆ ತಾಯಿ ಸಾಕಾಗಿ ಸುಸ್ತಾಗಿರುತ್ತಾರೆ. ಮಗುವಿನ ಬಗ್ಗೆ ಗಮನಹರಿಸುವುದು ಕಡಿಮೆ. ಸಹಜವಾಗಿ ಮಗು ಬಾಲ್ಯದಲ್ಲಿ ಪಡೆಯಬೇಕಿದ್ದ ಪ್ರೀತಿಯನ್ನು ಕಳೆದುಕೊಳುತ್ತದೆ.

ಇಂತಹ ಪರಿಸರದಲ್ಲಿ ಬೆಳೆದಂತಹ ಮಕ್ಕಳು ಸಹಜವಾಗಿ ಭಾವನೆ, ಪ್ರೀತಿಗಳಿಗೆ ಬೆಲೆ ಕೊಡುವುದು ಕಡಿಮೆ. ನಗರಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಇರುವಂತೆ ವಿಚಾರ ವಿನಿಮಯಕ್ಕೆ ಅವಕಾಶ ಕಡಿಮೆ. ಏಕೆಂದರೆ ನಗರಗಳಲ್ಲಿ ಒಂದೆಡೆ ಜನ ಸೇರಿ ಕುಳಿತು

ಮಾತಾನಾಡುವುದು ಕಡಿಮೆ. ಹಳ್ಳಿಗಳಲ್ಲಿ ಎಲ್ಲರೂ ಕುಳಿತು ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ನಗರಗಳಲ್ಲಿ ಪರಿಸರ ಪ್ರಜ್ಞೆ ಪರಿಸರ ಉಳಿಸಿದರೆ ನಮಗೆ ಮೂಲಭೂತ ಸೌಕರ್ಯಗಳು ದೊರೆಯಲು ಸಾಧ್ಯ ಎಂದು ತಿಳಿದಿದ್ದರೂ ಸಹ, ಅಥವಾ ತಿಳಿದಂತಹ ಶಿಕ್ಷಣವಂತರು ಇದ್ದರು, ಪರಿಸರವನ್ನು ನಗರೀಕರಣಗೊಳಿಸಲು ರಸ್ತೆ ಅಗಲಿಕರಣ, ಬಹುಮಹಡಿ ಕಟ್ಟಡಗಳು, ಬಹು ಅಂತಸ್ತಿನ ಮನೆಗಳು ಮುಂತಾದವುಗಳಿಂದ ಪರಿಸರವನ್ನು ಹಾಳುಗೆಡುತ್ತಿರುವುದು ಒಂದೆಡೆಯಾದರೆ ಮನುಷ್ಯ ಮೂಲಭೂತವಾಗಿ ನಗರೀಕರಣದೊಂದಿಗೆ ಪರಿಸರವನ್ನು ಉಳಿಸಿಕೊಂಡು ಹೋಗಬೇಕಾಗುತ್ತದೆ.

ಬದುಕಿನ ಏಳು ಬೀಳಿನ ವ್ಯವಸ್ಥೆಯಲ್ಲಿ ತಂದೆ–ತಾಯಿ ಅಜ್ಜಿ, ತಾತ, ಅತ್ತೆ–ಮಾವ, ಅಣ್ಣ–ತಂಗಿ, ಸಹೋದರ ಪ್ರೀತಿ ಭಾವನೆಗಳು ದಿನೇ–ದಿನೇ ಕಡಿಮೆಯಾಗುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಒಂದೊಕ್ಕೊಂದು ಅರ್ಥ, ಭಾವನೆಗಳು ಇರುತ್ತವೆ. ಆದರೆ ನಗರ ಪ್ರದೇಶಗಳಲ್ಲಿ ದಿನೇ–ದಿನೇ ಈ ಮೌಲ್ಯಗಳು ಕಡಿಮೆಯಾಗುತ್ತಿರುವುದನ್ನು ಕಾಣುತ್ತೇವೆ. ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟೇ ಜನ ಬಂದರೂ ಅಡಿಗೆ ಮಾಡಿ ಊಟ ಬಡಿಸುತ್ತಾರೆ. ಅದೇ ನಗರ ಪ್ರದೇಶಗಳಲ್ಲಿ ಆದರೆ ಹೋಟೇಲ್ ಗಳಿಂದ ಮನೆಗೆ ತರಿಸುತ್ತಾರೆ. ಅಂದರೆ ಅವರಿಗೆ ಸಮಯದ ಅಭಾವವಿರಬಹುದು. ಏಕೆಂದರೆ ಕೆಲಸಕ್ಕೆ ಹೋಗಿ ಬರುವಾಗ ಅವರಿಗೆ ಸಮಯ ಸಿಗದೆ ಇರಬಹುದು. ಕೆಲಸಕ್ಕೆ ಹೋಗದಿದ್ದಿರೆ ಹಣ ಸಿಗುವುದಿಲ್ಲ. ಜೀವನವನ್ನು ನಡೆಸುವುದು ಸಹ ನಗರ ಪ್ರದೇಶಗಳಲ್ಲಿ ಕಷ್ಟವಾಗುತ್ತದೆ.

ಪ್ರತಿಯೊಂದು ಸಿಗುವ ನಗರಗಳಲ್ಲಿ ಪ್ರತಿಯೊಂದಕ್ಕೆ ದುಡ್ಡು ತೆರಬೇಕಾಗುತ್ತದೆ. ಕುಡಿಯುವಂತಹ ನೀರಿಗೂ ಹಣ ಕೊಡಬೇಕು. ಆದರೆ ಹಳ್ಳಿಗಳಲ್ಲಿ ಇಂತಹ ಪ್ರಮೇಯ ಪರಿಸ್ಥಿತಿಗಳು ತುಂಬಾ ಕಡಿಮೆ ಎಂದೇ ಹೇಳಬಹುದು. ನಗರ ಎಂದ ತಕ್ಷಣ ಇಲ್ಲಿಯ ಪರಿಸ್ಥಿತಿ ಉತ್ತಮವಾಗಿರುತ್ತದೆ, ಸುಖಕರವಾಗಿರುತ್ತದೆ ಎಂಬುದು ಸುಳ್ಳು. ಏಕೆಂದರೆ ಅಲ್ಲಿಯೂ ಸಹ ನೋವಿದೆ, ಸಂಕಟವಿದೆ, ದು:ಖವಿದೆ ಎಂಬುದನ್ನು ಕಾಣುತ್ತೇವೆ. ನಗರಗಳಲ್ಲಿ ಹತ್ತು ಸಾವಿರ ಬಾಡಿಗೆ ಕಟ್ಟಬೇಕಾದರೆ, ಜೀವನ ಸಾಗಿಸಬೇಕಾದರೆ ಅವರ ಆದಾಯ ಮೂವತ್ತು ಸಾವಿರವಾದರೂ ಇರಬೇಕಾಗುತ್ತದೆ. ಆ ಹಣವನ್ನು

ದುಡಿಯಬೇಕಾದರೆ, ಮಕ್ಕಳನ್ನು ಬಿಟ್ಟು ಸಂಸಾರ ಬಿಟ್ಟು ಬೆಳಗ್ಗೆ ಯಿಂದ ಸಂಜೆಯವರೆಗೂ ಒಂದು ದಿನವು ರಜೆಯಿಲ್ಲದೆ ದುಡಿಯಬೇಕಾದರೆ ಅವರ ಪರಿಸ್ಥಿತಿ ಅವರಿಗೆ ತಿಳಿದಿರುತ್ತದೆ. ಕೇವಲ ನೋಡುವವರಿಗೆ ಮೇಲೆ ಸುಖವಾಗಿದ್ದರೆಂದು ಕಂಡು ಬರುತ್ತಾರೆ. ಕೇವಲ ಸಾಫ್ಟ್‌ವೇರ್ ಇಂಜಿನಿಯರ್‌ಗಳು ವೈಧ್ಯರು, – ಆಡಳಿತ ರಾಜಕೀಯ ವರ್ಗದವರನ್ನು ಮಾತ್ರ ನಾವು ನಗರಗಳಲ್ಲಿ ಕಾಣುವುದಿಲ್ಲ. ಚಪ್ಪಲಿ ಹೊಲಿಯುವನಿಂದ ಹಿಡಿದು ಹೋಟೇಲ್ ಮ್ಯಾನೇಜ್‌ಮೆಂಟ್ ವರೆವಿಗೂ ನಾವು ಎಲ್ಲಾ ಜನ ಸಮುದಾಯವನ್ನು ಕಾಣುತ್ತೇವೆ. ಅವರವರ ವೃತ್ತಿ ಅವರವರ ಬದುಕು ಜೀವನ ಎಂಬುದು ಮಾತ್ರ ಸಾಗಲೇಬೇಕು. ಚಿಕ್ಕ ಚಿಕ್ಕ ಬಾಡಿಗೆ ಮನೆಗಳಲ್ಲಿ ವಾಸಿಸುವಂತಹ ವ್ಯಕ್ತಿಗಳು ಮುಂಬೈನಂತಹ ಪ್ರದೇಶಗಳಲ್ಲಿ ಇಡೀ ಸಂಸಾರವನ್ನು ಸಾಗಿಸುವುದನ್ನು ಕಾಣುತ್ತೇವೆ. ಉದಾ: ಸುಮಿತ್ರೆಗೊಂದು ಸುದ್ದಿ ಕಥೆಯಲ್ಲಿ ಕಾಣಬಹುದು. ನಗರಗಳಲ್ಲಿ ಜೀವನ ದುಸ್ತರ ಅಲ್ಲಿ ಓಡಾಡುತ್ತಿರುವ ಬಸ್ಸು, ಕಾರು, ಲಾರಿ, ವಾಹನಗಳು ಇಂಗಾಲದ ಡೈಆಕ್ಸೈಡ್‌ನ್ನು ಹೂರ ಹಾಕುವುದರಿಂದ ಮನುಷ್ಯನಿಗೆ ಉಸಿರಾಡಲು ಸಹ ತೊಂದರೆಯಾಗುತ್ತದೆ. ಹೊಸದಾಗಿ ನಿರ್ಮಾಗೊಳ್ಳುತ್ತಿರುವ ರೈಲ್ವೆ ಸೇತುವೆಗಳು ಬ್ರಿಡ್ಜ್‌ಗಳು ಅಲ್ಲಿಂದ ಬರುವಂತಹ ಧೂಳು ಮೊದಲಾದವುಗಳು ಮಾನವನ ಆರೋಗ್ಯದ ಮೇಲೆ ತ್ರೀವತರವಾದಂತ ದುಷ್ಪರಿಣಾಮವನ್ನು ಬೀರುತ್ತವೆ. (ಇದ್ದಾಗ ಇದ್ದಾಂಗ ಕಥೆಯಲ್ಲಿ) ಬ್ರಿಡ್ಜ್ ಕೆಲಸಕ್ಕೆ ಹೋಗುವುದೆಂದರೆ ಒಂದು ಅತಿ ಹೊಸ ಸುದ್ದಿ ಆಗ ಊರಿನಲ್ಲಿ ಆ ಕೆಲಸ ಅಷ್ಟೇ ಭಯಂಕರತೆ ಹೊಂದಿರುವುದನ್ನು ಕಾಣುತ್ತೇವೆ.

ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ನಗರ ಜೀವನವು ಯಾವ ರೀತಿಯಿಂದ ಕೂಡಿದೆ ಎಂಬುದು ವಿವಿಧ ರೀತಿಯಿಂದಲೂ ಕಂಡುಬರುತ್ತದೆ.

*****

ಅಡಿ ಟಿಪ್ಪಣಿ

೧. ಅಮೃತಬಳ್ಳಿ ಕಷಾಯ – ಜಯಂತ ಕಾಯ್ಕಿಣಿ
ಪ್ರಕಾಶಕರು – ಅಂಕಿತ ಪುಸ್ತಕ ಪ್ರಕಾಶನ
ಬೆಂಗಳೂರು,
ಪ್ರಕಟಣಾವರ್ಷ–೧೯೯೬,
ಪುಟ ಸಂಖ್ಯೆ: ೨೪೫

೨. ತೂಫಾನ್ ಮೇಲ್ – ಜಯಂತ ಕಾಯ್ಕಣಿ
ಪ್ರಕಾಶಕರು – ಅಂಕಿತ ಪುಸ್ತಕ ಪ್ರಕಾಶನ
ಬೆಂಗಳೂರು,
ಪ್ರಕಟಣೆ – ೨೦೧೬, ಪುಟ ಸಂಖ್ಯೆ: ೪೧

೩. ಅದೇ ಪುಸ್ತಕ – ಪುಟ ಸಂಖ್ಯೆ: ೧೨೨

೪. ಬಣ್ಣದ ಕಾಲು – ಜಯಂತ ಕಾಯ್ಕಿಣಿ
ಪ್ರಕಾಶಕರು – ಅಂಕಿತ ಪುಸ್ತಕ ಪ್ರಕಾಶನ
ಬೆಂಗಳೂರು,
ಪ್ರಕಟಣಾ ವರ್ಷ– ೨೦೧೪,
ಪುಟ ಸಂಖ್ಯೆ: ೧೪

೫. ಅದೇ ಪುಸ್ತಕ – ಪುಟ ಸಂಖ್ಯೆ: ೮೬

೬. ಸುವರ್ಣ ಸಂಪದ – ಸಂಪಾದಕರು
ಡಾ॥ ಸಿ.ಎಂ.ಕುಂದಗೋಳ
ನರಸಿಂಹೇಗೌಡ
ಪ್ರಕಟಣೆ – ನಿರ್ದೇಶಕರು
ಪ್ರಸಾರಾಂಗ ಮತ್ತು ಮುದ್ರಣಾಲಯ
ಬೆಂಗಳೂರ ವಿಶ್ವವಿದ್ಯಾನಿಲಯ,
ಪ್ರಕಟಣಾ ವರ್ಷ – ೨೦೧೫
ಪುಟ ಸಂಖ್ಯೆ:೫೯

*****

ಅಧ್ಯಾಯ–೪

ಪಾತ್ರಗಳ ಅಧ್ಯಯನ

ಪಾತ್ರಗಳು ಪ್ರತಿಯೊಬ್ಬರ ಜೀವನದಲ್ಲಿಯೂ ಪ್ರಮುಖವಾದವುಳಾಗಿವೆ. ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತವೆ. ಕೆಲವರು ಸಿನಿಮಾ ಕ್ಷೇತ್ರದ ನಾಯಕ ಪಾತ್ರಗಳನ್ನು ಆದರ್ಶಗಳಾಗಿ ಇಟ್ಟುಕೊಳ್ಳುತ್ತಾರೆ. ಕೆಲವರು ರಾಜಕೀಯ ವ್ಯಕ್ತಿಗಳ ಆದರ್ಶಗಳನ್ನು ಪಾಲಿಸುತ್ತಾರೆ. ಜೀವನದಲ್ಲಿ ಪ್ರತಿಯೊಂದು ಪಾತ್ರವು ಪ್ರಮುಖವಾದುದಾಗಿದೆ. ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪಾತ್ರಗಳು ಪ್ರಮುಖವಾದ ಪ್ರಭಾವವನ್ನು ಬೀರುತ್ತವೆ. ಒಂದು ಚಿಕ್ಕ ಪಾತ್ರವಾದರೂ ಸಹ ಆ ಪಾತ್ರದ ಗುಣ, ಆದರ್ಶ ಹಿರಿಮೆ, ಗೌರವಗಳು ಆಕರ್ಷಕವಾಗುತ್ತವೆ.

ಕಥೆಗಳಲ್ಲಿ ಪಾತ್ರಗಳು ಪ್ರಮುಖ ಪ್ರಭಾವಯುತವಾದವುಗಳಾಗಿವೆ. ಪಾತ್ರಗಳೇ ಇಲ್ಲದ ಕಥೆಯನ್ನು ನಿರೂಪಣೆ ಮಾಡುವುದು ಕಷ್ಟ ಸಾಧ್ಯದ ವಿಚಾರವಾಗಿದೆ. ಕುವೆಂಪುರವರ ಯಾರು ಅರಿಯದ ವೀರ ಕಥೆಯ ಲಿಂಗನ ಪಾತ್ರ ಅಜ್ಞಾತವಾಸಿ ಕಥೆಯ ಚೆನ್ನನ ಪಾತ್ರ. ಕೇವಲ ಕಥೆಗಳ ಪಾತ್ರ ಅಷ್ಟೆ ಅಲ್ಲ ಕಾದಂಬರಿ, ನಾಟಕ ಮೊದಲಾದವುಗಳು ಪಾತ್ರಗಳು ಪ್ರಮುಖವಾದಂತ ಪ್ರಭಾವವನ್ನು ಬೀರುತ್ತವೆ. ಒಂದು ನೀತಿ, ಆದರ್ಶ, ತತ್ವ, ನಿಯಮ ಮುಂತಾದವುಗಳನ್ನು ಒಳಗೊಂಡಿರುವಂತಹುಗಳಾಗಿರುತ್ತವೆ.

ಪಾತ್ರಗಳು ಸಮಾಜದ ಸುತ್ತ, ಪರಿಸರದ ಸುತ್ತ, ಒಂದು ತತ್ವದ ನೆಲಗಟ್ಟಿಲ್ಲಿ ವಿಚಾರಗಳನ್ನು ವಿಮರ್ಶೆಗೆ ಒಳಪಡಿಸುವಂತಹುದನ್ನು ಕಾಣುತ್ತೇವೆ. ಕೆಲವು ಪಾತ್ರಗಳು ಆದರ್ಶವಾಗಿದಿದ್ದರೂ ಸಹ ಸಮಾಜದಲ್ಲಿ ಇಂತಹ ವ್ಯಕ್ತಿತ್ವದವರು ಇರುತ್ತಾರೆ. ಅವರ ಮಧ್ಯೆ ನಾವು ಜೀವನವನ್ನು ರೂಪಿಸಿಕೊಳ್ಳಬೇಕೆಂಬುದು ತಿಳಿದು ಬರುತ್ತದೆ.

ಧನಂಜಯ

“ಧನಂಜಯ ಕಥೆಯ ನಾಯಕನಾಗಿದ್ದಾನೆ, ಪ್ರಭಾಕರ್‌ರಾವ್ ಮತ್ತು ಧನಂಜಯ ಒಂದೇ ಕೋಣೆಯಲ್ಲಿದ್ದ ಸ್ನೇಹಿತರು ಪ್ರಭಾಕರ್‌ರಾವ್‌ಗೆ ಸಚಿವಾಲಯದಲ್ಲಿ ಕೆಲಸ ಸಿಕ್ಕಿತು. ಧನಂಜಯ ಪ್ರಭಾಕರ್‌ರಾವ್ ನನ್ನು ಜೊತೆಯಲ್ಲಿ ಕಾರಿನಲ್ಲಿ ಕರೆದೊಯ್ಯುವಾಗ

ಕೆಂಪುಕೋಟೆ ಎದುರು ರಾಷ್ಟ್ರಪತಿ ನಡೆದಂತೆ ನಡೆದು ಕಾರು ಸೇರಿದೆ. ಒಂದು ಸಾರಿ ಧನಂಜಯನನ್ನು ಮನೆಗೆ ಕರೆಯುತ್ತಾರೆ. ಧನಂಜಯನ ಆಫೀಸಿಗೆ ಪೋನು ಮಾಡಿ "ಏನು ದೊಡ್ಡ ಮನುಷ್ಯ ನನ್ನಂಥ ಸಣ್ಣವನ ನೆನಪಲ್ಲಿ ಆಗಬೇಕು". ಎಂದು ಹೇಳಿದ. ಧನಂಜಯ 'ಅಲ್ಲೋ ನನ್ನನ್ನು ಶೂರಿಟಿ ಮಾಡಿಕೊಂಡು ಆದ್ಯಾವುದೋ ಫ್ರಿಜ್‌ಲೋನ್ ತೆಗೆದುಕೊಂಡಿದ್ದೆಯಲ್ಲಾ ಅದರ ಕಂತುಗಳನ್ನು ಸರಿಯಾಗಿ ತಲುಪಿಸುತ್ತಿದ್ದೀಯೋ ಎಂದು ಕೇಳಲು ರಾವ್ ಮನಸ್ಸಿಗೆ ಪಿರಿ-ಪಿರಿಯಾಯಿತು ಪ್ರಭಾಕರ್‌ರಾವ್ ತಮ್ಮ ಸುಮಂತ್‌ಗೆ ಮೆಡಿಕಲ್ ಸೀಟು ಕೊಡಿಸುವುದಾಗಿ ಧನಂಜಯ ಹೇಳುತ್ತಾನೆ. "ಸುಮಂತನಿಗೆ ಸೀಟು ಶೇ.೯೦% ಸಿಗುತ್ತದೆ. ಡೀನ್ ಗೀನ್ ಮುಂತಾದವರ ಜೊತೆ ಮಾತನಾಡಿದ್ದೇನೆ ಎಂದು ಹೇಳುತ್ತಾನೆ. "let him brush up his general knowledge"

ಧನಂಜಯ ಹೆಂಡತಿ ನರ್ಮದ. ಅವರಿಬ್ಬರ ನಡುವೆ ಹೊಂದಾಣಿಕೆ ಇಲ್ಲ ಎಂದು ಅನುಮಾನಿಸುತ್ತಾನೆ. ಆದರೆ ಅವರಿಬ್ಬರು ಚೆನ್ನಾಗಿ ಇರುತ್ತಾರೆ. ಸುಮಂತ್‌ಗೆ ಧನಂಜಯ ಸೀಟು ಕೊಡಿಸುವುದಿಲ್ಲ. ಆದ್ದರಿಂದ ಕದ್ದು-ಮುಚ್ಚಿ ತಿರುಗಾಡುತ್ತಿರುತ್ತಾನೆ. ರಾವ್ ಇದಕ್ಕೆ ಪ್ರತಿಕ್ರಿಯೆ ಎಂಬಂತೆ "ಸುಮಂತನಿಗೆ ಗೋವಾದಲ್ಲಿ ಸೀಟು ಸಿಕ್ಕಿದೆ ಎಂದು ಹೇಳುತ್ತಾನೆ".

ಓಹ್ ತುಂಬಾ ಒಳ್ಳೆಯದು. ಗೋವಾ ಅದ್ಭುತವಾದ ಜಾಗ ತುಂಬಾ ಶಾಂತ ನೋ ಪೊಲ್ಯೂಷನ್

ಧನಂಜಯ– "really it will be great"

ನಾಲಗೆಯು ಕುಲವನ್ನು ಹೇಳುತ್ತದೆ ಎಂಬಂತೆ ವ್ಯಕ್ತಿಯ ಮಾತು ಸಹ ಅವನ ಬುದ್ಧಿಯನ್ನು ತೋರಿಸುತ್ತದೆ. ಧನಂಜಯನಂತಹ ಉನ್ನತ ಹುದ್ದೆಯಲ್ಲಿರುವಂತಹ ವ್ಯಕ್ತಿ ಸುಮಂತ್ ನಂತಹ ಹುಡುಗನಿಗೆ ಸೀಟು ಕೊಡಿಸುವುದಾಗಿ ಹೇಳಿ ತಪ್ಪಿಸಿಕೊಳ್ಳುತ್ತಿರುತ್ತಾನೆ. ತಮ್ಮ ಕೈಯಲ್ಲಿ ಆದರೆ ಮಾತ್ರ ಮಾಡಬೇಕು. ಇಲ್ಲವಾದರೆ ಆಶ್ವಾಸನೆ, ಭರವಸೆ ಕೊಡುವುದನ್ನು ಮನುಷ್ಯ ಮೂಲತಃವಾಗಿಬಿಡಬೇಕು. ಏಕೆಂದರೆ ಮಾಡಿಸುತ್ತೇವೆ ಎಂದರೆ ಎಲ್ಲರಿಗೂ ಆಸೆ ಉಂಟಾಗುತ್ತಿದೆ. ಅದೇ ರೀತಿ ಇನ್ನೊಬ್ಬರ ಸಂಸಾರದಲ್ಲಿ ಹೊಂದಾಣಿಕೆಯನ್ನು ಕಂಡು ಹಿಡಿಯಲು ಮುಂದಾಗುವ ಪ್ರಭಾಕರ್‌ರಾವ್ ಬೇರೆಯವರ

ಮನೆ ಸಮಸ್ಯೆ ಎಂದರೆ ನಮ್ಮ ಜನ ಎಷ್ಟು ಖುಷಿಯಾಗಿ ಭಾಗಿಯಾಗುತ್ತಾರೆಂದು ವ್ಯಕ್ತವಾಗುತ್ತದೆ.

ಭಾಮಿನಿ (ತೂಫಾನ್ ಮೇಲ್)

ಹೆಣ್ಣು ಸಮಾಜದ ಕಣ್ಣು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಮನೆ ಮೊದಲ ಪಾಠಶಾಲೆ ತಾಯಿಯೆ ಮೊದಲ ಗುರು. ಈ ಎಲ್ಲಾ ಅಂಶಗಳಲ್ಲಿರುವ ಸಾರವನ್ನು ಗಮನಿಸಿದಾಗ ಕಣ್ಣಿಗೆ ಕಾಣುವಂತೆ ದೇವರು ತಾಯಿ ಎಂದು ಕಲ್ಪಿಸಿಕೊಳ್ಳುತ್ತೇವೆ. ಸ್ತ್ರೀ ಎಲ್ಲಾ ಪೂಜಿಸುತ್ತಾಳೋ ಅಲ್ಲ ದೇವತೆಗಳು ನೆಲಸಿರುತ್ತಾರೆ ಎಂಬ ಮಾತು ಸಹ ಇದೆ "ಭಾಮಿನಿ ಸಪ್ತಪದಿ" ಕಥೆಯ ನಾಯಕಿ ಭಾಮಿನಿಯೇ ಆಗಿದ್ದಾಳೆ.

ಅವಿಭಕ್ತ ಕುಟುಂಬದ ಹೆಣ್ಣು ಮಗಳಾದ ಭಾಮಿನಿಯು ಚಿಕ್ಕ ವಯಸ್ಸಿನಲ್ಲಿ ತಂದೆ-ತಾಯಿಗಳನ್ನು ಕಳೆದುಕೊಳ್ಳುತ್ತಾಳೆ. ತಾಯಿ ತೀರಿಕೊಂಡ ನಂತರ ತಂದೆಯೊಂದಿಗೆ ಗುಜರಾತಿಗೆ ಬಂದು ನೆಲೆಸುತ್ತಾಳೆ. ಬೇರೆ ಜನ, ಬೇರೆ ಭಾಷೆ, ಬೇರೆ ವ್ಯವಸ್ಥೆ ಆದರೂ ಮೂರು ನಾಲ್ಕು ವರ್ಷಕ್ಕೊಮ್ಮೆ ಶಿವರಾತ್ರಿಗೆ ಅಪ್ಪನ ಜೊತೆಗೆ ಊರಿಗೆ ಬಂದಾಗ ಹಳೇ ದೇವರ ಕೋಣೆಯಲ್ಲಿರುವ ಆಯಿಯ ಪೋಟೋವನ್ನು ನೋಡಲು ಮಾತ್ರ ಮರೆಯುತ್ತಿರಲಿಲ್ಲ. ನಂತರ ಅಹಮದಬಾದಿನಲ್ಲಿ ಪರೇಶ್‌ಶಹಾ ಎಂಬ ಸ್ಟೇಷನರಿ ಅಂಗಡಿಯವನನ್ನು ವಿವಾಹವಾಗಿ ಮುಂದೆ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾಳೆ. ರಾಜಕೀಯ ಕ್ಷೇತ್ರದಲ್ಲೂ ಗುರುತಿಸಿಕೊಳ್ಳುತ್ತಾಳೆ. ಕೊಳಚೆ ಪ್ರದೇಶಗಳಿಗೆ ಸ್ವತಃ ಭೇಟಿಕೊಟ್ಟು ಸ್ವಚ್ಛತೆಯ ಬಗ್ಗೆ ಅರಿವನ್ನು ಮೂಡಿಸುತ್ತಾಳೆ. ಅನಾಥ ಮಕ್ಕಳಿಗಾಗಿ ನಿಧಿ ಸಂಗ್ರಹಿಸುತ್ತಾಳೆ. ಬಡ ಮಕ್ಕಳ ನಿಧಿಯ ಹೆಸರಿನಲ್ಲಿ ಗಂಡ ಹಣ ವಸೂಲಿ ಮಾಡುತ್ತಿದ್ದಾಗ ಡಿಂಕಿ ಎಂಬ ಹುಡುಗಿಯೊಂದಿಗೆ ವಾಪಸ್ಸು ಗೋಕರ್ಣಕ್ಕೆ ಬರುತ್ತಾಳೆ. ಅಲ್ಲಿ ಅವಳ ದೊಡ್ಡಮ್ಮ ತಾಯಿ ಒಡವೆಗಾಗಿ ಬಂದಿದ್ದೀಯ ಎಂದು ಕೇಳಿದಾಗ ತಾನು ಅದಕ್ಕಾಗಿ ಬಂದಿಲ್ಲ ಎಂದು ಹೇಳಿದಾಗ, ಗಂಡನನ್ನು ಬಿಟ್ಟು ಬಂದಿದ್ದೀಯಾ ಎಂದು ಕೇಳುತ್ತಾಳೆ.

ಒಟ್ಟಾರೆ ನಮ್ಮ ಸಮಾಜದಲ್ಲಿ ಪ್ರತಿಯೊಬ್ಬರು ಅವರವರ ದೃಷ್ಟಿಕೋನ, ವಿವೇಚನೆಯಿಂದ ನೋಡುತ್ತಾರೆ. ಹೆಣ್ಣಾದವಳು ವಾಪಸ್ಸು ಬಂದರೆ ಗಂಡನನ್ನು ಬಿಟ್ಟು

ಬಂದಿದ್ದಾಳೆ ಎಂದು ಅವರೇ ತಿಳಿಯುತ್ತಾರೆ. ಎಲ್ಲಾ ಕ್ಷೇತ್ರಗಳಲ್ಲಿ ತನ್ನನ್ನು ಗುರುತಿಸಿಕೊಂಡ ಹೆಣ್ಣು ಒಂದು ಮಾದರಿ ಎಂಬುದು ಸ್ಪಷ್ಟವಾಗುತ್ತದೆ.

ಚಂದ್ರಹಾಸ

ನೀರು ಕಥೆಯಲ್ಲಿ ಬರುವಂತ ಪ್ರಮುಖ ಪಾತ್ರವಾಗಿದೆ. ವಿಮಾನದಲ್ಲಿ ಸಂತೋಷನ್ ಎಂಬ ವ್ಯಕ್ತಿಯು ಪರಿಚಯವಾಗುತ್ತದೆ. ಆತ ಆಸ್ಪತ್ರೆಗೆ ಒಬ್ಬನೆ ಹೋಗುತ್ತಿದ್ದಾನೆ. ಮಾನವೀಯತೆ ದೃಷ್ಟಿಯಿಂದ ಆತನು ಹೋಗುತ್ತಾನೆ. ಆದರೆ ತುಂಬಾ ಮಳೆಯಾದ್ದಾರಿಂದ ಇಡೀ ನಗರವೇ ನೀರಿನಿಂದ ಆವೃತ್ತವಾಗುತ್ತದೆ. ಬಸಂತಿ ಎಂಬ ಆಟೋ ಹತ್ತಿ ಕುಂಜ್‌ಬಿಹಾರಿ ಎಂಬ ಡ್ರೈವರ್‌ನೊಂದಿಗೆ ಇಡೀ ನಗರ ಸುತ್ತುತ್ತಾನೆ. ಮಳೆಯಲ್ಲಿಯೂ ಸಹ ಆ ವೃದ್ಧ ವ್ಯಕ್ತಿ ಬೇರೆ ಯಾರೋ ತಾನೇಕೆ ಅವರಿಗಾಗಿಯೇ ಸಮಯ ವ್ಯರ್ಥ ಮಾಡಬೇಕು ಎಂಬ ಕಿಂಚಿತ್ ಭಾವನೆ ಅವನಲ್ಲಿ ಮೂಡುವುದಿಲ್ಲ.

ಸಂತೋಷ್‌ನನ್ನು ಮುಂಬಯಿಯ ಹಿಂದೂಜಾ ಆಸ್ಪತ್ರೆಗೆ ಕರೆದ್ಯೊಯಲು ಮುಂದಾಗುತ್ತಾನೆ. ಅಳಿಯ ಬರುತ್ತಾನೆಂದು ಕಾಯ್ದರು ಬರಲಿಲ್ಲ. ಕೊನೆಗೆ ಸಂತೋಷನ್ ಜೊತೆ ಚಂದ್ರಹಾಸನೆ ಹೋಗುತ್ತಾನೆ. ಮಾನವೀಯತೆ, ಮನುಷ್ಯತ್ವ ಎಂಬುವು ಮೂಲತಃ ಅಂತಕರಣದಿಂದ ಮೂಡಿ ಬರಬೇಕು. ಕೇವಲ ತೋರ್ಪಡಿಕೆಗೆ ಬಾಹ್ಯವಾಗಿ ಬರಬಾರದು. ಏಕೆಂದರೆ ಅದು ಇನ್ನೊಬ್ಬರ ಜೀವನದಲ್ಲಿ ಆಟವಾಡಿದಂತೆ ಆಗುತ್ತದೆ. ಸಮಾಜಜೀವಿ, ಸಂಘಜೀವಿಯಾದ ಮಾನವ ಇದೆಲ್ಲವನ್ನು ತಿಳಿಯಬೇಕು. ಪರಸ್ಪರ ಸಹಕಾರ, ಸಹಬಾಳ್ವೆ ಎಂಬುದು ಮೂಲಭೂತವಾಗಿ ಮನುಷ್ಯನಿಗೆ ಅಗತ್ಯವಾದುದಾಗಿದೆ. ಮಾನವೀಯ ಮೌಲ್ಯಗಳ ನೆಲೆಗಟ್ಟಿನಲ್ಲಿಯೇ ಸಹ ಇವುಗಳನ್ನು ಕಾಣಬಹುದಾಗಿದೆ.

ಪಾಂಡುರಂಗ

ಚೌತಿಚಂದ್ರ ಕಥೆಯಲ್ಲಿ ಬರುವಂತ ಪ್ರಮುಖ ಪಾತ್ರವಾಗಿದೆ. ಡ್ರೈವರ್ ಆಗಿದ್ದ ಪಾಂಡುರಂಗ ತನ್ನ ಗೆಳೆಯ ಸಾವಂತನಿಗೆ ಪ್ರಮೋಷನ್ ಆಗುತ್ತದೆ. ಪಾಂಡುರಂಗನಿಗೆ ಗಣೇಶ ಹಬ್ಬಕ್ಕೆ ರಜೆ ಬೇಕಾದಾಗ ತನ್ನ ಜೊತೆಯಲ್ಲಿಯೇ, ಹಿಂದಿನ ವರ್ಷ ಕಳೆದ ಸಾವಂತ ರಜೆ ಕೊಡಲು ಒಪ್ಪುವುದಿಲ್ಲ. "ನಿನಗೊಬ್ಬನಿಗೆ ರಜೆ ಕೊಡುತ್ತ ಹೋಗುವುದೋ,

ಉಳಿದವರಿಗೆ ಗಣಪತಿ ಪೂಜೆ ಇಲ್ಲವೋ ಇಷ್ಟು ವರ್ಷ ಮಜಾ ಮಾಡಿದ್ದೀಯಲ್ಲ ಈಗ ಅನುಭವಿಸು ನನ್ನ ಕೈಕೆಳಗೆ" ಎನ್ನುತ್ತಾನೆ.

ಕೊಲ್ಲಾಪುರದಿಂದ ನರ್ತಕಿ ಜುಯಿಬಾಯಿಯನ್ನು ಕರೆಯಿಸಿದ್ದೇವೆ ಎಂದು ಕುವಾಳೇಕರ ಹೇಳಿದಾಗ ಹಿಂದು-ಮುಂದು ಯೋಚಿಸದೆ ಸಾವಂತನನ್ನು ಲೆಕ್ಕಿಸದೆ ಒಊಊಇಳಿಇಲಲ ಬಸ್ಸು ಓಡಿಸಿಕೊಂಡು, ಊರನ್ನು ತಲುಪಿದ. ಹೆಂಡತಿ ಹೇಳಿದಳು. ಅದೆಂಥ ಹುಚ್ಚು ಧೈರ್ಯ ಬಂತು ನಿಮಗೆ, ಈ ಬಸ್ಸು ಬಿಟ್ಟುಕೊಂಡು ಇಲ್ಲಿತನಕ ಬರೋದಕ್ಕೆ ಇನ್ನು ನೌಕರಿ ಹೋದ ಹಾಗೆ ಅನ್ನಿ"......

ಇಲ್ಲಿ ಸ್ವಾಭಿಮಾನ ಮತ್ತು ಕರ್ತವ್ಯಗಳ ನಡುವಿನ ಮುಸುಕಿನ ಗುದ್ದಾಟವನ್ನು ಕಾಣುತ್ತೇವೆ. ಹಬ್ಬಕ್ಕೆ ಹೋಗಬೇಕು ಸ್ವಾಭಿಮಾನ, ಮೇಲಾಧಿಕಾರಿ ಹೇಳಿದ ಮೇಲೆ ಕೆಲಸ ಮಾಡಬೇಕು ಕರ್ತವ್ಯ. ಆದರೂ ಇವೆರಡರ ನಡುವೆ ಸ್ವಾಭಿಮಾನಕ್ಕೆ ಬೆಲೆ ಕೊಡುವಂತಹ ಡ್ರೈವರ್ ಪಾಂಡುರಂಗ ಪ್ರಮುಖವಾದ ವ್ಯಕ್ತಿಯಾಗುತ್ತಾನೆ. ಸಾವಂತ ಮೇಲಾಧಿಕಾರಿಯಾಗಿ ಹೋದ ಮೇಲೆ ತನ್ನ ಕರ್ತವ್ಯ ನಿಷ್ಠೆಯೇ ಅಹಂಭಾವವೋ ಎನ್ನುವಂತೆ ವರ್ತಿಸುತ್ತಾನೆ. ಜಗತ್ತಿನ ವಿಶ್ಲೇಷಣೆಯ ಮನೋಭೂಮಿಕೆಯಲ್ಲಿ ಇಂತಹ ವ್ಯವಸ್ಥೆಗಳು ಸಹಜವಾಗಿರುವುದನ್ನು ಕಾಣುತ್ತೇವೆ. ಕೊನೆಗೆ ಜುಯೀಬಾಯಿಯನ್ನು ಚಂದ್ರಶಾಲೆ ತನಕ ತಲುಪಿಸುತ್ತೇನೆಂದು ಬಸ್ಸನ್ನು ತೆಗೆದುಕೊಂಡು ಹೋಗುವಾಗ ಮನುಷ್ಯನ ಸಹಜ ಪ್ರವೃತ್ತಿಗಳು ಕಂಡು ಬರುತ್ತಿವೆ.

ಮಹಾಜನ

ಸೇವಂತಿ ಹೂವಿನ ಟ್ರಕ್ಕು ಕಥೆಯಲ್ಲಿ ಬರುವಂತ ಒಂದು ಪಾತ್ರ ಮಹಾಜನದು. ಮನೆಯ ಯಾಜಮಾನನ ಪಾತ್ರವಾಗಿದೆ. ಹೆಂಡತಿ ಜ್ಯೋತಿ. ಮಕ್ಕಳು ರಶ್ಮಿಮತ್ತು ವರ್ಷಾ ಇದು ಅದರ ಸಂಸಾರ ದುರ್ಗಿಯು ಈಗ ೬೦ ವಯಸ್ಸಿನ ಸಣ್ಣ ಕಡ್ಡಿ ಕೈ ಕಾಲುಗಳ ಬಾಲೆಯಂತೆ ಕಾಣುತ್ತಾಳೆ. ಚಿಕ್ಕವಯಸ್ಸಿನಲ್ಲಿ ಇವರ ಮನೆಯಲ್ಲಿ ಕೆಲಸ ಮಾಡಿಕೊಂಡು ಸೇರಿಕೊಂಡ ದುರ್ಗಿ ಬೇರೆ ಕಡೆ ಎಲ್ಲೂ ಹೋಗಲಿಲ್ಲ. ತನ್ನ ಮನೆಯಂತೆ ಸೇರಿಕೊಂಡಳು. ಆ ಮನೆಯಲ್ಲಿ ಆಕೆಯು ಒಬ್ಬಳಾದಳು. ಮೊದಲು ಆಕೆ ಬಂದಾಗ, "ದಿನಕ್ಕೆ ಎರಡು ಊಟ ವರ್ಷಕ್ಕೊಂದು ಸೀರೆ ಮತ್ತು ಬ್ಯಾಂಕಿನಲ್ಲಿ ನಿನ್ನ ಹೆಸರಿನಲ್ಲೊಂದು ಖಾತೆ ತೆರೆದು ಅದರಲ್ಲಿ

ಹಣವನ್ನು ಜಮಾ ಮಾಡುತ್ತೇವೆ ಎಂದು ಹೇಳುತ್ತಾರೆ. ಆ ಮನೆಯಲ್ಲಿ ಒಬ್ಬಳಂತೆ ಕಾಲ ಕಳೆದ ದುರ್ಗಿ ಯಾವುದನ್ನು ನಿರೀಕ್ಷಿಸುವುದಿಲ್ಲ.

ವಯಸ್ಸಾದ ನಂತರ ದುರ್ಗಿಗೆ ಆರೋಗ್ಯದಲ್ಲಿ ಏರು-ಪೇರಾಗಿತ್ತು. ಜೀವನವೇ ದುಸ್ತರ ಎಂದೆನಿಸಿತು. ಆಗ ಮಹಾಜನ ತಾತ್ಸಾರ ಮಾಡಲು ತೊಡಗಿದ. ಆದರೆ ಹೆಂಡತಿ ಜ್ಯೋತಿ ದುರ್ಗಿಯನ್ನು ಮಾನವೀಯ ನೆಲಯಲ್ಲಿ ಕಂಡಳು. "ಎಷ್ಟೆಂದರೂ ನಮ್ಮ ಮಕ್ಕಳನ್ನು ತಾತ್ಸರವಿಲ್ಲದೆ ನೋಡಿಕೊಂಡಳು. ಮುಷ್ಕರದ ವೇಳೆಯಲ್ಲಿ ತಿಂಗಳುಗಟ್ಟಲೆ ಹೊಟ್ಟೆ ಸರಿ ಇಲ್ಲ ಅಂತ ಸುಳ್ಳು ಹೇಳಿ ಒಪ್ಪೊತ್ತು ಅರೆ ಹೊಟ್ಟೆ ಉಂಡವಳು. ಇದನ್ನೆಲ್ಲಾ ಮರೆಯಬಾರದು" ಎಂದು ಹೇಳಿದರು ಮಹಾಜನನಂತ ವ್ಯಕ್ತಿ ಆಕೆಯನ್ನು ಆಸ್ಪತೆಗೆ ಸೇರಿಸಿ ಚಿಕಿತ್ಸೆ ಕೊಡಿಸುವ ಕೆಲಸಕ್ಕೆ ಕೈ ಹಾಕಲೇ ಇಲ್ಲ.

ಮನುಷ್ಯನ ನೀಚ ಗುಣಗಳಲ್ಲಿ ಇದು ಒಂದು ಸಾಬೀತು ಆಗುತ್ತದೆ. ತಮಗೆ ಬೇಕಾದಾಗ ಮಾತ್ರ ಅವರಿಂದ ದುಡಿಸಿಕೊಂಡು ನಂತರ ಅವರನ್ನು ದೂರ ಹಾಕುವುದು ಇದನ್ನು ಕಾಣುತ್ತೇವೆ. ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವಾಗಬೇಕು. ಆರೈಕೆ ಮಾಡುವಾಗಬೇಕು. ಆದರೆ ಕಾಯಿಲೆ ಬಿದ್ದಾಗ ನೋಡಿಕೊಳ್ಳುವುದಿಲ್ಲ ಇಂತ ಜನರನ್ನು ಕಾಣುತ್ತೇವೆ. ಇಂತಹ ಕಾಯಿಲೆ ಇರುವಂತ ಮುದುಕಿ ತಮ್ಮ ಮನೆಯಲ್ಲಿ ಇದ್ದರೆ, ಹೆಣ್ಣು ಮಕ್ಕಳಿಗೆ ಗಂಡುಗಳು ಬರುವುದು ನಿಂತು ಹೋಗುತ್ತದೆ. ಹಾಗೆಯೇ ಕನ್ಯಾ ಪರೀಕ್ಷೆಗೆಂದು ಜನ ಬರುವ ದಿನಗಳು ಬಂದವು ಇದೆಂಥ ಗರ ಬಡಿದಿದೆ ಮನೆಗೆ" ಎಂದು ಹೇಳುತ್ತಾನೆ.

ಕೆಲವೊಮ್ಮೆ ವ್ಯಕ್ತಿ ನಿಷ್ಠುರವಾಗಿ ಎಂತಹ ಕೆಳಮಟ್ಟಕ್ಕೆ ಇಳಿಯುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ. ತನಗೆ ವಯಸ್ಸಾಗಿ ಅಂತಹ ಸ್ಥಿತಿ ಬಂದರೆ, ಅಥವಾ ತನ್ನ ಹೆತ್ತ ತಾಯಿಯೆ ಆ ಸ್ಥಿತಿಯಲ್ಲಿ ಇದ್ದರೆ ತಾನೇನು ಮಾಡುತ್ತಿದ್ದೆ ಎಂದು ಕಿಂಚಿತ್ ಯೋಚಿಸುವುದಿಲ್ಲ. ವಯಸ್ಸಾದ ಮುದುಕಿಗೆ ವೈದ್ಯರಿಂದ ಕೊಡಿಸುವ ಚಿಕಿತ್ಸೆ (ಮಾತ್ರ) ಚಿಂತಾಜನಕವಾಗಿ ಕಾಣುತ್ತದೆ. ಡಾಕ್ಟರ್ "ನನ್ನ ಹೆಸರು ಎಲ್ಲಿಯೂ ಬರಬಾರದು ಮಿಸ್ಟರ್. ಮಲಗುವ ಮುನ್ನ ಈ ಹತ್ತು ಗುಳಿಗೆ ಕೊಟ್ಟುಬಿಡಿ. ಅವಳಾಗೆ ತೆಗೆದುಕೊಳ್ಳಲಿ ನೀವಿನ್ನು ಹೋಗಿ".

ವಯಸ್ಸಾದ ಮುದುಕಿಯ ತಳಮಳ ಆತಂಕ, ಆವೇಶಗಳು ಕೊನೆಗೆ ಯಾರು ಆಸರೆಯಾಗದೆ ಹೋದಾಗ ತಾನು ಬಂದ ಆ ಮನೆಗೆ ಸೇರಿದ ಸೇವಂತಿ ಹೂವಿನ ಟ್ರಕ್ಕನ್ನು

ನೆನೆದು ಕಣ್ಣೀರಿಡುತ್ತಾಳೆ. ಅಂದರೆ ವಯಸ್ಸಾದವರನ್ನು ಗೌರವಿಸಬೇಕು. ಪೂಜಿಸಬೇಕು, ಆದರಿಸಬೇಕು. ಅತ್ಯಂತ ನಿಕೃಷ್ಟ ಮಟ್ಟದಲ್ಲಿ ಅವರನ್ನು ನಡೆಸಿಕೊಳ್ಳಬಾರದು.

ನಾಯಕ ಮಾಸ್ತರರು

ಟ್ರೈಸಿಕಲ್ ಕಥೆಯಲ್ಲಿ ಬರುವ ಒಂದು ಪ್ರಮುಖ ಪಾತ್ರ. ನಾಯಕ ಮಾಸ್ತರರದು ಶಾಲೆಯ ಮಾಸ್ತರರಾಗಿ ಘಟ್ಟದ ಮೇಲೆ ವರ್ಗವಾಗಿ ಹೋಗಿದ್ದಾದರೂ ಒಂದು ದಿನ ಗೋಕರ್ಣದ ರಥಬೀದಿಯನ್ನು ಕಾಣಿಸಿಕೊಳ್ಳುತ್ತಾರೆ. ಹೆಂಡತಿ ತಿಮ್ಮಕ್ಕ, ಮಗಳು ನಿರ್ಮಲ, ತಾವು ಗೋಕರ್ಣದಲ್ಲಿದ್ದಾಗ ಪಕ್ಕದ ಮನೆಯಲ್ಲಿ ಪ್ರಭಾಕರ ಮತ್ತು ಪ್ರಿಯಾ ವಾಸವಿರುತ್ತಾರೆ. ಅವರಿಗೆ ಒಂದು ಮಗುವಿರುತ್ತದೆ. ಅದರ ಹೆಸರು "ಅನಂತ", ಆನು ಎಂದು ಕರೆಯುತ್ತಾರೆ.

ನಾಯಕ ಮಾಸ್ತರರು ಅನಂತುವಿಗೆ ಆಡಲು ಮೂರು ಚಕ್ರದ ಒಂದು ಸೈಕಲ್ ಕೊಡುತ್ತಾರೆ. ಮತ್ತೆ ವಾಪಸ್ಸು ಕೇಳುವುದಿಲ್ಲ. ತಮ್ಮ ಮಗಳು ನಿರ್ಮಲ ಗರ್ಭಿಣಿಯಾದಾಗ ತಿಮ್ಮಕ್ಕ ಅನು ದೊಡ್ಡವನಾಗಿದ್ದಾನೆ. ಅವನಿಂದ ಕೇಳಿ ಪಡೆದು ಬನ್ನಿ ನಮ್ಮ ಮೊಮ್ಮಗುವಿಗೆ ಆಗುತ್ತದೆ ಎಂದು ಕಳಿಸುತ್ತಾಳೆ. ಬಂದ ಮಾಸ್ತರರು ಕೇಳುವ ಸಾಹಸಕ್ಕೆ ಕೈ ಹಾಕುವುದಿಲ್ಲ. ಏಕೆಂದರೆ ಕೊಟ್ಟ ವಸ್ತುವನ್ನು ಮತ್ತೆ ಕೇಳಿ ಹೇಗೆ ಹಿಂಪಡೆಯುವುದೆಂದು, ಆದರೆ ಬಂದ ಮಾಸ್ತರರನ್ನು ಕಂಡು ಪ್ರಿಯಾಗೆ ಮತ್ತು ಪ್ರಭಾಕರ ಎಲ್ಲಾ ವಿಚಾರವನ್ನು ಕೇಳಿ ಪಡೆದು ತಾವಾಗಿಯೇ ವಾಪಸ್ಸು ಕೊಡಬೇಕೆಂದು ತಿಳಿದು ಅನುವನ್ನು ಸಮುದ್ರ ದಂಡೆಗೆ ಕಳಿಸುತ್ತಾರೆ. ಅಷ್ಟಲ್ಲಿ ಆನು ಬರುತ್ತಾನೆ.

ನಾಯಕ ಮಾಸ್ತರರು – "ಅನು ಚಂದ ಆಗಿದ್ದಾನೆ. ಸ್ವಲ್ಪ ಬಡಕಲಾಗಿ ಕಂಡ, ಆರು ತಿಂಗಳಿಗೊಮ್ಮೆಯಾದರೂ ಜಂತುವಿನ ಔಷಧಿ ಕೊಡಿಸಿ" ಎಂದು ಹೇಳುತ್ತಾರೆ. ಒಳ್ಳೆಯ ಮೌಲ್ಯ ಮತ್ತು ಉದಾತ್ತ ಗುಣಗಳನ್ನು ಹೊಂದಿರುವಂತೆ ನಾಯಕ ಮಾಸ್ತರರು ಅದನ್ನು ಪಡೆಯುವ ಗೋಜಿಗೆ ಹೋಗುವುದಿಲ್ಲ. ಅವರ ಮನಸ್ಸಿನಲ್ಲಿ ಮಕ್ಕಳೆಂದರೆ ದೇವರ ಸಮಾನ. ಮಕ್ಕಳಿಂದ ಅದನ್ನು ನಾವು ಕಸಿದುಕೊಳ್ಳಬಾರದು. ಆ ಮಗು ಬೇರೆಯಲ್ಲ ನಮ್ಮ ಮಕ್ಕಳು ಬೇರೆಯಲ್ಲ ಎಂಬ ಭಾವನೆ ಇರಲಿಲ್ಲ. ಅನು ದೊಡ್ಡವನ್ನಾಗಿದ್ದಾನೆಂದು ತಿಳಿದು ಅವನಿಂದ ಪಡೆದು ತಮ್ಮ ಮನೆಯ ಮಗುವಿಗೆ ಕೊಡಬಹುದಿತ್ತು. ಆದರೆ ನಾಯಕ

ಮಾಸ್ತರರು ಅಂತಹ ಕೆಲಸಕ್ಕೆ ಕೈ ಹಾಕಲಿಲ್ಲ. ಏಕೆಂದರೆ ಪ್ರೀತಿಯಿಂದ ಕೊಟ್ಟರೆ ಮೌಲ್ಯ ಜಾಸ್ತಿ. ಆದರೆ ಕಸಿದು (ಕಿತ್ತು)ಕೊಂಡು ಪಡೆಯುವುದರಲ್ಲಿ ಯಾವುದೇ ಅರ್ಥವಿರಲಿಲ್ಲ. ಅಂತಹ ಒಳ್ಳೆಯ ಮನಸ್ಸನ್ನು ಹೊಂದಿದವರಾಗಿದ್ದರು.

ಚಂದು (ದಗಡು ಪರಬನ ಅಶ್ವಮೇಶ–ಮಿಥುನ್ ನಂಬರ್ ಟೂ)

ಸಿನಿಮಾದ ನಾಯಕ ಮಿಥುನ್‌ನಂತೆ ತಲೆಗೆ ಬಟ್ಟೆ ಕಟ್ಟಿಕೊಂಡ ತಕ್ಷಣ ತಾನು ಹಾಗೆಯೆ ಕಾಣುತ್ತೇನೆ ಎಂದು ಭಾವಿಸಿದ. ಚಂದು ಮುಂಬೈನಲ್ಲಿ ಓಡಾಡಿದ ಆದರೆ ನಿಜ ಜೀವನವೇ ಬೇರೆ ಸಿನಿಮಾ ಜಗತ್ತೆ ಬೇರೆ ಎಂದು ತಿಳಿಯದೆ ಸಿನಿಮಾ ಜಗತ್ತು ತನ್ನ ಪ್ರಪಂಚ ಎಂದು ತಿಳಿದ ಚಂದು ತನ್ನನ್ನು ಮಿಥುನ್ ಎಂದು ಕಲ್ಪಿಸಿಕೊಳ್ಳುತ್ತಾನೆ. ವಯಸ್ಸಿನ ಸಹಜ ನಡತೆಯನ್ನು ಸೂಚಿಸುತ್ತದೆ. ಮಕ್ಕಳು ಓದುವ ವಯಸ್ಸಿನಲ್ಲಿ ಬೇರೆಲ್ಲಾ ಕ್ಷೇತ್ರಗಳನ್ನು ಗಮನಹರಿಸಿ ತಮ್ಮ ಮನಸ್ಸನ್ನು ಬೇರೆತ್ತ ಹರಿಸುತ್ತಾರೆ. ನಮ್ಮ ಸಾಧನೆಯಲ್ಲಿ ತುಂಬಾ ಹಿಂದುಳಿಯುತ್ತಾರೆ.

ಸುಮಿತ್ರೆ

"ದಗಡು ಪರಬನ ಅಶ್ವಮೇಧ ಕಥಾಸಂಕಲನದ ಸುಮಿತ್ರೆಗೊಂದು ಸುದ್ಧಿ" ಕಥೆಯ ಒಂದು ಪಾತ್ರವಾಗಿದ್ದಾಳೆ. ಸುಮಿತ್ರೆ ಮುಂಬೈಯ ತಮ್ಮನ ಮಗ ಸುಧಾಕರನ ಮನೆಗೆ ಬಂದಿದ್ದಾಳೆ. ಸುಧಾಕರನಿಗೆ ಜಾಂಡೀಸ್ ಆಗಿ ಸರಿಯಾಗಿ ಊಟವಿಲ್ಲ ಎಂದು ತಿಳಿದ ತಂದೆ ತನ್ನ ಅಕ್ಕ ಸುಮಿತ್ರೆಯನ್ನು ಗಂಡನಿಂದ (ರಮಾಕಾಂತ) ದೂರವಿದ್ದ ಆಕೆಯನ್ನು ಹುಡುಕಿ ಮುಂಬಯಿಗೆ ಕಳುಹಿಸಿಕೊಟ್ಟ. ಸುಮಿತ್ರೆ ಮುಂಬಯಿಗೆ ಬಂದು ತಮ್ಮನ ಮಗನಿಗೆ ಎಲ್ಲಾ ಊಟ ಉಪಚಾರ ಮಾಡುತ್ತಿದ್ದಳು. ಮುಂಡುಗೋಡಿಲ್ಲಿದ್ದಾಗಲೂ ಅವರಿವರ ಮನೆ ಚಾಕರಿ ಮಾಡುತ್ತಿದ್ದಳು. ಒಂದು ದಿನ ಸುಧಾಕರನಿಗೆ ತಂದೆ ಪತ್ರ ಬರೆದಿದ್ದರು. ಪತ್ರದಲ್ಲಿ ರಮಾಕಾಂತ ತೀರಿಹೋದ ವಿಷಯವನ್ನು ತಿಳಿಸಿದರು. ಆದರೆ ಆ ವಿಷಯವನ್ನು ಸುಧಾಕರನಿಗೆ ತನ್ನ ಅತ್ತೆಗೆ ತಿಳಿಸಲು ಆಗುತ್ತಿಲ್ಲ.

ಟೇಬಲ್ ಮೇಲೆ ಸುಮಿತ್ರೆಗೆ ಕಾಣುವಂತೆ ಇಟ್ಟದ್ದು ಸಹ ಸುಧಾಕರನಲ್ಲಿ ತಳಮಳ ಆತಂಕಗಳು ವ್ಯಕ್ತಗೊಳ್ಳುತ್ತಿರುತ್ತವೆ. ಆ ಪತ್ರವನ್ನು ನೋಡಿದ ಸುಮಿತ್ರೆಯು ಕೂಡ

ಯಾವುದೇ ದುಃಖ ಆತಂಕ, ನೋವುಗಳನ್ನು ವ್ಯಕ್ತಿಗೊಳಿಸುವುದಿಲ್ಲ. ಬದುಕಿನಲ್ಲಿ ಒಂದಾಗಿ ಸಂಸಾರವನ್ನು ನಡೆಯಿಸದ ಸುಮಿತ್ರೆ, ರಮಕಾಂತ ಜೊತೆಯಾಗಿ ಬಾಳದವರು ಅಲ್ಲಿ ರಮಕಾಂತ ಸುಮಿತ್ರೆಯನ್ನು ಎಂದು ಪ್ರೀತಿ ಗೌರವದಿಂದ ಕಂಡವನಲ್ಲ. ಸಹಜವಾಗಿ ಅವಳಲ್ಲಿ ಪ್ರೀತಿ ಎಂಬುದು ಬರುವುದಿಲ್ಲ. ತನ್ನ ಗಂಡ ಸತ್ತಿದ್ದಾನೆಂದು ತಿಳಿದರು ಅದರ ಬಗ್ಗೆ ಅವಳು ಸ್ವಲ್ಪವೂ ಗಮನ ಕೊಡುವುದಿಲ್ಲ. ಗಂಡ ಹೆಂಡತಿ ಒಟ್ಟಾಗಿದ್ದು, ಗಂಡ ಸಹಜವಾಗಿ ಹೆಂಡತಿಯನ್ನು ಪ್ರೀತಿ ಆಕಾಂಕ್ಷೆಗಳಿಂದ ನೋಡಿಕೊಂಡಿದ್ದರೆ ಅವಳಿಗೆ ಸಹಜ ಪ್ರೀತಿ ಬರುತ್ತಿತ್ತು. ಬೇರೆಯವರ ಮನೆಯಲ್ಲಿದ್ದು ಜೀವನಕ್ಕೆ ಅವಳು ಅಷ್ಟೊಂದು ಕಷ್ಟಪಡುವಾಗ ಗಂಡನಾದವನು ಜೀವಂತವಿದ್ದರು ಅವಳ ಬಗ್ಗೆ ಯಾವುದೇ ಆಸ್ಥೆ ತೋರಿಸುತ್ತಿರಲಿಲ್ಲ. ಆದ್ದರಿಂದ ಪ್ರೀತಿ ಸಹಜವಾಗಿ ಅವಳಲ್ಲಿ ಕಡಿಮೆಯಾಯಿತು. ಕಷ್ಟ ಸುಖಕ್ಕೆ ಇಲ್ಲದ ಗಂಡ ಏಕೆ ಬೇಕು ಎಂದು ದಿಟ್ಟ ನಿರ್ಧಾರ ಕೈಗೊಳ್ಳುವಂತೆ ಮಾಡಿತು. ಒಡೆದ ಮನಸುಗಳನ್ನು ಕೂಡಿಸುವುದು ತುಂಬಾ ಕಷ್ಟ ಎಂಬುದು ಅರ್ಥವಾಯಿತು.

ಕೇವಲ ಗಂಡನೊಬ್ಬನಲ್ಲಾ ಆ ಪ್ರೀತಿ ಇರಬೇಕೆಂದು ಇಲ್ಲ. ಅದು ಹೆಣ್ಣಿನಲ್ಲಿಯೂ ಇರಬೇಕು. ಎರಡು ಹಸುಗಳು ಒಂದೇ ಸಮನಾಗಿ ನಡೆದಾಗ ಗಾಡಿ ಹೇಗೆ ಮುಂದೆ ಹೋಗುತ್ತದೆಯೋ ಹಾಗೆ ಗಂಡು ಹೆಣ್ಣುಗಳು ಸಹ ಸಂಸಾರ ಜೀವನದಲ್ಲಿ ಒಬ್ಬರಿಗೊಬ್ಬರು ಪರಸ್ಪರ ಪ್ರೀತಿ, ಹೊಂದಾಣಿಕೆಗಳು ಇದ್ದಾಗ ಮಾತ್ರ ಜೀವನ ಸುಖಮಯವಾಗಿರುವುದನ್ನು ಕಾಣುತ್ತೇವೆ. ಕೇವಲ ಸುಮಿತ್ರೆಯ ಜೀವನದಲ್ಲಿ ಮಾತ್ರವಲ್ಲಾ ಎಲ್ಲರ ಜೀವನದಲ್ಲೂ ಸಹ ಹೊಂದಾಣಿಕೆ ಎಂಬುದು ಅತ್ಯಗತ್ಯ ಎಂದು ತಿಳಿದು ಬರುತ್ತದೆ.

ಸುಮಿತ್ರೆಗೊಂದು ಸುದ್ಧಿ ಕಥೆಯ ಶೀರ್ಷಿಕೆಯೆ ಹೇಳುವಂತೆ ಅವಳಿಗೂ ಒಂದು ವಿಷಯವಿದೆ ಎಂಬುದು ಸ್ಪಷ್ಟವಾಗುತ್ತದೆ. ಆ ವಿಷಯವನ್ನು ಸುಮಿತ್ರೆ ಸಕರಾತ್ಮಕವಾಯಿಯಾದರೂ, ನಕರಾತ್ಮಕವಾಗಿಯಾದರೂ ತೆಗೆದುಕೊಳ್ಳಬಹುದಾಗಿದೆ. ಜೀವನವೆಂಬುದು ಗಾಜಿನ ರೀತಿ ಅದನ್ನು ನಿಧಾನವಾಗಿ, ತಾಳ್ಮೆಯಿಂದ ಪಳಗಿಸಿದರೆ ಜೀವನ ಬದುಕು ಇಲ್ಲದೆ ಹೋದರೆ ಗಾಜಿನ ರೀತಿಯಲ್ಲಿ ಒಡೆದು ಪುಡಿ-ಪುಡಿಯಾಗುತ್ತದೆ.

ನಾನಾ

ಅಮೃತಬಳ್ಳಿ ಕಷಾಯ ಕಥಾ ಸಂಕಲನದ ಪ್ರಕಾಶವರ್ಷ ಕಥೆಯ ಪ್ರಮುಖ. ಹಿರಿಯ ಪಾತ್ರ ನಾನಾದು. ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟವರು ನಾನಾ. ಮಗ ರಾಮ್‌ದಾಸ್ ಸೊಸೆ ತಾರಾ ಮೊಮ್ಮಗ ಪ್ರಕಾಶ್. ಮೊಮ್ಮಗಳು ಶಕೂ ಹಾಗೂ ನಾನಾ ನ ಹೆಂಡತಿ ಕುಮುದ. ಸ್ವಾತಂತ್ರ್ಯ ಸೇನಾನಿಯಾಗಿದ್ದರು. ನಾನಾ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾಲು ಅತ್ಯಂತ ಪ್ರಮುಖವಾದುದಾಗಿತ್ತು. ಮಗ ರಾಮ್‌ದಾಸ್‌ನ ಮಾತು ಕೇಳಿ ಎಲ್ಲವನ್ನು ಮಾರಿ ಬಂದು, ಮಗನ ಮನೆಯಲ್ಲಿ ಸೇರಿಕೊಂಡರು.

ಮಗ–ಸೊಸೆಯನ್ನು ನೋಡಿಕೊಂಡು, ಮೊಮ್ಮಕ್ಕಳನ್ನು ನೋಡಿಕೊಂಡು ಪ್ರೀತಿಯಿಂದ ಜೀವನ ಸಾಗಿಸುತ್ತಿದ್ದರು. ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟವರು ನಾನಾ. "ಶಿಕ್ಷಣಕ್ಕಿಂತ ಮಿಗಿಲಾದ ಐಶ್ವರ್ಯ ಇಲ್ಲ" ಎಂದು ಹೇಳುತ್ತಾರೆ. ಮೊಮ್ಮಕ್ಕಳು ಚೆನ್ನಾಗಿ ಓದಬೇಕು ಎಂದು ಬಯಸುತ್ತಿದ್ದರೂ ಪ್ರಕಾಶ – "ನಾನು ನೌಕರಿ ಮಾಡುವುದಿಲ್ಲ. ಬಿಸಿನೆಸ್ ಮಾಡುತ್ತೇನೆ. ಯಾವ ಬೋಳಿ ಮಕ್ಕಳ ಕಾಲೂ ಹಿಡಿಯುವುದಿಲ್ಲ, ಯಾರ ಎದುರು ಬಾಗುವುದಿಲ್ಲ" ಎಂದು ಹೇಳುತ್ತಾನೆ.

ನಾನಾ ಪ್ರಕಾಶನಿಗೆ ನೈತಿಕ ಬುದ್ಧಿಯನ್ನು ಹೇಳುತ್ತಿದ್ದರು. ಎಷ್ಟೇ ಪ್ರೀತಿ, ಗೌರವದಿಂದ ಮಕ್ಕಳನ್ನು ಬೆಳೆಯಿಸಿದರು. ಕೊನೆಗೆ ಮೊಮ್ಮಗಳು ಪ್ರೇಮ ವಿವಾಹವಾಗಿ ಧೀರತೆಯಿಂದ ಬಂದ ಶಕೂ ತನಗೆ ಸೇರಬೇಕಾದ ವಸ್ತು ಒಡವೆಗಳನ್ನು ತೆಗೆದುಕೊಂಡು ಹೋಗಲು ಬರುವುದು ಕಾಣುತ್ತೇವೆ. ನಾನಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರೂ ಸಹ ಸ್ವಾಭಿಮಾನಿಯಾಗಿದ್ದರು. ಆದರೂ ಕೆಲವೊಂದು ವೇಳೆ ಕೆಲವೊಂದು ವೇಳೆ ನಾನಾ ಸಂಕಷ್ಟಗಳನ್ನು ಎದುರಿಸಬೇಕಾಯ್ತು. ಮನೆಯಲ್ಲಿ ಹಿರಿಯರಾದ ನಾನಾರಾವರ ಅಭಿಪ್ರಾಯಗಳಿಗೆ ಬೆಲೆ ಕೊಟ್ಟಿದ್ದಾರೆ ಸೊಸೆ ತಾರ ಮೊಮ್ಮಗಳು ಶಕೂ ಗೌರವ ನೀಡಿದ್ದಾರೆ. ಶಕೂ ಮನೆ ಬಿಟ್ಟು ಹೋಗುವ ಅಗತ್ಯತೆ ಬರುತ್ತಿರಲಿಲ್ಲ. ಅಂದರೆ ಪ್ರತಿಯೊಬ್ಬರು ತಮ್ಮ–ತಮ್ಮ ಮನೆಗಳಲ್ಲಿ ಹಿರಿಯರಿಗೆ ಗೌರವ ಕೊಡಬೇಕು. ಅವರ ಅಭಿಪ್ರಾಯಗಳಿಗೆ ಮಾನ್ಯತೆಯನ್ನು ನೀಡಬೇಕು. ಒಳ್ಳೆಯ ಪರಿಸರದಿಂದ ಒಳ್ಳೆಯ ಚಾರಿತ್ರ್ಯ ನಿರ್ಮಾಣಗೊಳ್ಳುತ್ತವೆ.

ನೀಲಕಂಠ

ದಗಡು ಪರಬನ ಅಶ್ವಮೇಧ ಕಥಾ ಸಂಕಲನದ 'ಕೊಂಡಿ' ಕಥೆಯ ಪ್ರಮುಖ ಪಾತ್ರ ನೀಲಕಂಠನದು. ತಂದೆ ನಾರಾಯಣ ಮಾಸ್ತರು ಮುಂಬೈಯಲ್ಲಿ ನೌಕರಿಗೆಂದು ಮಗ ಹೋದಾಗ ಮಗನ ಅಗಲಿಕೆಯಿಂದ ನೋವನ್ನು ಅನುಭವಿಸಿದರು. ಊರಿನ ಜನ ಮಾಸ್ತರರನ್ನು ಕುರಿತು, "ಇನ್ನೇನು ಮಾಸ್ತರರೇ ನಿಮ್ಮ ಮಗ ಮುಂಬಯಿಯಲ್ಲಿ ಸೆಟಲ್ ಆದಂತೆಯೇ ನಿಮ್ಮನ್ನು ಕರೆಸುತ್ತಾನೆ. ಹೋಗಿಬಿಡಿ, ಇಲ್ಲೆನುಂಟು ಮಣ್ಣು" – ಎಂದರೆ ಮಣ್ಣೇ ಬೇಕಾದುದು ಎಂದು ಹೇಳುತ್ತಿದ್ದರು. ನೀಲಕಂಠ ಚಿಕ್ಕಂದಿನಲ್ಲಿಯೇ ತಾಯಿ ಕಳೆದುಕೊಂಡವನು. ತಂದೆಯೇ ಮಗ ಬರುವಷ್ಟರಲ್ಲಿ ಅಡುಗೆ ಮಾಡಿ ಇಡುತ್ತಿದ್ದರು. ಕ್ರಿಕೆಟ್ ಎಂದರೆ ತುಂಬಾ ಇಷ್ಟ. ನಾರಾಯಣ ಮಾಸ್ತರರು ಬರು ಬರುತ್ತ ಮಗನ ಬೇಡಿಕೆಗಳನ್ನು ಗಮನಿಸಿ ಬೆಲೆ ಕೊಡುತ್ತಿದ್ದರು.

ಮಾದೇವಜ್ಜನನ್ನು ಮುಂಬೈಗೆ ಆಸ್ಪತ್ರೆಗೆ ಸೇರಿಸಲು ಬಂದ ತಂದೆ ಕರುಣೆ. ಮೌಲ್ಯಗಳ ಸಹಕಾರ ಮೂರ್ತಿಯೇ ಆಗಿದ್ದರು. ನೀಲಕಂಠ ತಂದೆಗೆ ಸ್ವಲ್ಪವು ತೊಂದರೆಯನ್ನು ನೀಡುತ್ತಿರಲಿಲ್ಲ. ತನ್ನ ತಂದೆ ಚಿಕ್ಕಂದಿನಲ್ಲಿ ಮಕ್ಕಳಿಗಾಗಿ ಮಾಡಿದ ತ್ಯಾಗವನ್ನು ಪ್ರತಿದಿನ ನೆನಪಿಸಿಕೊಳ್ಳುತ್ತಿದ್ದನು. ತಾನು ಬೆಳೆದಂತೆ ತಂದೆಗೆ ಗೌರವ ಕೊಡುವುದನ್ನು ಗಮನಿಸುತ್ತಿದ್ದನು. ಭಾವನೆಗಳ ಸರಮಾಲೆಯೇ ವ್ಯಕ್ತಿ ಅನುಗತವಾಗಿ ನಡೆಸಿಕೊಂಡ ಬಂದ ಅಂಶಗಳನ್ನು ಗಮನಿಸಬಹುದಾಗಿದೆ. ತನ್ನ ಅಣ್ಣ ಮಧುಕರನು ತಮ್ಮನಿಗಾಗಿ ಬರೆಯುತ್ತಿದ್ದ ಪತ್ರಗಳು ನೀಲಕಂಠನ ಜೀವನವನ್ನು ರೂಪಿಸಿದ್ದವು.

ಪ್ಯಾರೇಲಾಲ

ಸಂತೆಯ ದಿನ ಕಥೆಯ ಒಂದು ಪ್ರಮುಖ ಪಾತ್ರವಾಗಿದೆ. ಕೇಕೊ ಶುಕ್ಲಾನ ಜೆರಾಕ್ಸ್ ಅಂಗಡಿಯ ಪಕ್ಕದಲ್ಲಿ ಹಣ್ಣಿನ ಅಂಗಡಿ ಇಟ್ಟದವನು. ಕ್ಯಾಸೆಟ್ ಅಂಗಡಿಯನ್ನು ಇಡುವಂತೆ ಕೇಕು ಶುಕ್ಲಾನನ್ನೂ ಪ್ರೇರೆಪಿಸುತ್ತಾನೆ. ಹಣ್ಣು ತರಲು ಹೋಗುವ ಪ್ಯಾರೇಲಾಲ ವಿಟಿಯಿಂದ ಹೊಸ ಕ್ಯಾಸೆಟ್ ತಂದು ಕೊಡುತ್ತಿದ್ದ. ಇಬ್ಬರು ಒಳ್ಳೆಯ ಸ್ನೇಹಿತರಾಗಿದ್ದರು. ಪ್ಯಾರಲಾಲ ಊಟಕ್ಕೆ ಹೊರಗೆ ಹೋದರೆ ಅವನ ಅಂಗಡಿಯನ್ನು ಕೇಕು ಶುಕ್ಲಾ ನೋಡಿಕೊಳ್ಳುತ್ತಿದ್ದ.

ಕೇಕೊ ಶುಕ್ಲಾನಿಗೆ ನಿಜವಾದ ಜೀವನ ದರ್ಶನ ಮಾಡಿಸಿದವನು ಪ್ಯಾರೇಲಾಲ ಯಾವ ಪೂರ್ವ ಸೂಚನೆಯು ಇಲ್ಲದೆ ಮುಂಬಯಿ ಬಂದ್ ದಿನ ರೈಲುಗಳು ಬಂದಾಗಿಲ್ಲ. ನಾವು ವಿಟಿ ಕಡೆ ಹೋಗೋಣವೇ, ಗೇಟ್‌ವೇ, ಸಮುದ್ರ ನೋಡಿಕೊಂಡು ಬರೋಣವೆ! ಎಂದು ಕೇಕೊ ಶುಕ್ಲಾಗೆ "ನಿನಗೆ ಇಲ್ಲೇ ಒಂದು ಗೇಟ್‌ವೇ ಕಾಣಿಸುತ್ತೇನೆ" ಎಂದ. ಪ್ಯಾರಲಾಲ. ಅಂದು ಮುಂಬೈಯಲ್ಲಿ ಯಾವುದೇ ಅಂಗಡಿಗಳು ಇರಲಿಲ್ಲ. ಯಾವುದೇ ಸಂಚಾರ ವ್ಯವಸ್ಥೆಗಳಿರಲಿಲ್ಲ. ಜ್ಯೂಸ್ ಸೆಂಟರ್, ಪಾವ್‌ಭಾಜಿ, ಬೇಲ್‌ಪುರಿಗಳ ಖಾಲಿ ಗಾಡಿಗಳು ಕಿಕ್ಕಿರಿದ ಕಡೆ ನಿಲ್ಲಿಸಿದವು. ಅಪರಾಧಿಗಳನ್ನು ಕೂಡಿ ಹಾಕುವ ತಾಣಕ್ಕೆ ಕರೆದೊಯ್ದನು. "ಹೆದರಬೇಡ, ಭದ್ರ ಕಾವಲಿದೆ ಇದಕ್ಕೆ, ಯಾರು ಬರಲಾರರು ಹೊರಗೆ ಎಂದ".

ಅಲ್ಲಿರುವಂತ ಪುಟ್ಟ-ಪುಟ್ಟ ಮಕ್ಕಳು ಅವುಗಳಲ್ಲಿನ ದುಃಖ, ನೋವು, ಸಂಕಟ ಮೊದಲಾದವುಗಳನ್ನು ಅನುಭವಿಸುತ್ತಿರುವಂತ ಮಕ್ಕಳನ್ನು ನೋಡಿದ ನಿಜವಾದ ಜೀವನವನ್ನು ಅರ್ಥೈಸಿಕೊಳ್ಳಲು ತುಂಬಾ ಸಹಕಾರಿಯಾಯಿತು. ನಾವು ನಮಗೆ ಮೇಲೆ ಕಾಣುವ ಸಮಾಜವನ್ನು ಮಾತ್ರ ನೋಡುತ್ತೇವೆ. ಇನ್ನೊಂದು ಸಮಾಜದಲ್ಲಿ ಅನುಭವಿಸುತ್ತಿರುವ ವೇದನೆಗಳನ್ನು ಗೇಟ್‌ವೇ ಮೂಲಕ ತೋರಿಸಿದವರಾಗಿದ್ದರು.

ಮಾಸ್ತರರು

'ಬಿಡು ಬಿಡು ನಿನ್ನಯ' ಕಥೆಯ ಪ್ರಮುಖವಾದ ಪಾತ್ರವಾಗಿದೆ. ಮನುಷ್ಯರಂತೆ ಪ್ರಾಣಿ, ಪಕ್ಷಿಗಳಿಗೂ ಒಂದು ಜೀವವಿದೆ ಎಂದು ತೋರಿಸಕೊಟ್ಟು ಮಾನವೀಯತೆಯಿಂದ ಮೆರೆದವರಾಗಿದ್ದಾರೆ. ನವಿಲುಗಳನ್ನು ಕೊಲ್ಲುತ್ತಿದ್ದ ಘನಶ್ಯಾಮ ನಾಯಕನಿಗೆ ಅವುಗಳು ರಾಷ್ಟ್ರಭಕ್ತಿ, ರಾಷ್ಟ್ರದ ಹೆಮ್ಮೆ, ನವಿಲು ಮಿರ್ಜಾನನ ಶೋಭೆ ಎಂದು ಹೇಳಿದರು. ಘನ ಶ್ಯಾಮನ ಮಗ ದಿಲೀಪ ಹೇಳಿದ ವಿಷಯದಿಂದ ಮನೆಗೆ ಹೋದಾಗ ಮಾಸ್ತರರನ್ನು ತುಂಬಾ ಬೈಯ್ದರು. ದಿಲೀಪ "ಗುರೂಜಿ ನಮ್ಮ ಮನೆ ಅಟ್ಟದಲ್ಲಿ ಸಾವಿರಾರು ನವಿಲುಗರಿ ಉಂಟು. ನಾನು ಹೇಳಿದೆ ಅಂತ ಹೇಳಬೇಡಿ" ಎಂದು ಹೇಳಿದಾಗ ವಿಚಾರಿಸಲು ಹೋದಾದ ತುಂಬಾ ಬೈಯ್ದರು.

ತಾನು ಕೂಡ ಹೈಸ್ಕೂಲ್ ಶಾಲೆಯ ಶಿಕ್ಷಕನಾದರೂ ಸಹ, ಬೇರೆಯವರನ್ನು ಹೇಗೆ ನಡೆಸಿಕೊಳ್ಳಬೇಕು, ಹೇಗೆ ಮಾತನಾಡಬೇಕು ಎಂಬುದನ್ನು ತಿಳಿಯಲಿಲ್ಲ. ಮಾಸ್ತರರ ಕೈ ತೋಟಕ್ಕೆ ಬಾವಿಯ ನೀರು ಹಾಕುತ್ತಿದ್ದ... ಅಜ್ಜಿಗೆ ಘನಶ್ಯಾಮ ತಾಕಿತ್ತು ಮಾಡಿದ್ದ ಇನ್ನು ಮುಂದೆ ನೀರನ್ನು ಬಿಡಬಾರದೆಂದು ಅಂದರೆ ಸಹಜತನದಲ್ಲಿಯೇ ಇದೆಲ್ಲ ನಡೆಯುತ್ತಿತ್ತು.

ಮನುಷ್ಯನ ಕ್ರೂರ ವರ್ತನೆಯ ಅರಿವಾಗುತ್ತದೆ. ತಾನು ಶಿಕ್ಷಣ ಪಡೆದು, ವಿದ್ಯಾವಂತನಾದರೂ ಬೇರೆಯವರನ್ನು ಹೇಗೆ ನಡೆಯಿಸಿಕೊಳ್ಳಬೇಕೆಂಬ ವರ್ತನೆಯನ್ನು ತಿಳಿಯಲಿಲ್ಲ. ಮಾಸ್ತರರ ವಿರುದ್ಧ ಕಿಡಿ ಕಾರುವುದು, ಸೇಡು ಹೊಂದುವುದು, ಕೋಪ ಮತ್ಸರ ಹಠವನ್ನು ಸಾಧಿಸುತ ಹೋದರು. "ಊರಿನ ಉದ್ದಾರ ಮಾಡ್ತಿರೊ ಹೊಟ್ಟೆಗಿಲ್ಲದವರು ಅನ್ನ ತಿನ್ನಬೇಕೊ ಅಥವಾ ನವಿಲು ನೋಡ್ತಾ ಪೂಜೆ ಮಾಡಬೇಕೊ ಎನ್ನುತ್ತಾನೆ. ಮನುಷ್ಯ ಮೂಲತಃ ಸಮಾಜ ಜೀವಿ ಪರಸ್ಪರ ಸಹಕಾರ ಅತ್ಯಗತ್ಯವಾದವು ಎಂದು ನಂಬಿದಂತ ಮಾಸ್ತರರಿಗೆ ಘನಶ್ಯಾಮ ಒಳ್ಳೆಯ ತಿರುಗೇಟು ನೀಡುತ್ತಾನೆ. ಮಾಸ್ತರರಿಗೆ ವರ್ಗವಾಗಿ ಒಂದು ದಿನ ಮತ್ತೆ ಬಂದರು. ಅದೇ ದ್ವೇಷ ಅಸೂಯೆಯನ್ನು ಸಾಧಿಸುತ್ತಾನೆ ಮಾಸ್ತರರು. ಸಣ್ಣ ಮಕ್ಕಳ ಬಗ್ಗೆ ಪ್ರಾಣಿ, ಪಕ್ಷಿಗಳ ಬಗ್ಗೆ ಒಂದೇ ರೀತಿಯ ಭಾವನೆಯನ್ನು ಹೊಂದಿದವರಾಗಿದ್ದರು. ಚಿಕ್ಕಂದಿನಲ್ಲಿ ಮಕ್ಕಳಲ್ಲಿ ಬೆಳೆಸಬಹುದಾದ ಪ್ರೀತಿ, ವಿಶ್ವಾಸ, ತ್ಯಾಗ, ಮೌಲ್ಯ ಮೊದಲಾದವುಗಳ ಬಗ್ಗೆ ಒತ್ತಿ ಹೇಳಿದರು.

ಕೇವಲ ನವಿಲುಗಳನ್ನಷ್ಟೆ ಅಲ್ಲ, ಯಾವುದೇ ಪ್ರಾಣಿ. ಪಕ್ಷಿಗಳನ್ನು ಹಿಂಸಿಸಬಾರದೆಂದು ಮಕ್ಕಳಿಗೆ ಶಾಲೆಯಲ್ಲಿ ಬೋಧಿಸುತ್ತಿದ್ದರು. ಮಕ್ಕಳನ್ನು ಕಟ್ಟಿಕೊಂಡು ಬೆಟ್ಟವನ್ನು ಶುಚಿಗೊಳಿಸಿ, ಯಾವುದೇ ಪಕ್ಷಿಗಳನ್ನು ಬೇಟೆಯಾಡಬಾರದೆಂದು ಸ್ವತಃ ತಿಳಿಸಿದರು. ಘನಶ್ಯಾಮನ ಪಿತೂರಿಯಿಂದ ಮಕ್ಕಳು ಬೆಟ್ಟಕ್ಕೆ ಹೋಗಲು ಹಿಂಜರಿಸದರು. ಬೆಟ್ಟಕ್ಕೆ ಹೋಗುವುದನ್ನು ನಿಲ್ಲಿಸಿಬಿಟ್ಟರು.

ಮನುಷ್ಯನ ಸೂಕ್ಷ್ಮ ವರ್ತನೆ ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. ಒಬ್ಬ ವ್ಯಕ್ತಿಯ ಏಳಿಗೆ ಮುಂದೆ ಬರುವಂತಹುದನ್ನು ಯಾರು ಸಹಿಸುವುದಿಲ್ಲ. ಇಬ್ಬರು ಶಿಕ್ಷಕರು, ಸಮಾಜ ಸುಧಾರಕರು, ಅರಿಯಬಹುದಿತ್ತು. ಆದರೆ ಅವಿದ್ಯಾವಂತರ ರೀತಿ ಘನಶ್ಯಾಮ

ವರ್ತಿಸುತ್ತಾನೆ. ಬದುಕಿನ ಸುಂದರ ಕ್ಷಣಗಳನ್ನ ಯಾವ ರೀತಿಯಾಗಿ ಹಾಳುಗೆಡವಿಕೊಳ್ಳುತ್ತಾನೆಂದು ಸ್ಪಷ್ಟವಾಗುತ್ತದೆ.

ಸೀತೆ

ದಗಡು ಪರಬನ ಅಶ್ವಮೇದ ಕಥಾ ಸಂಕಲನದ ಸಮುದ್ರ ಕಥೆಯ ಪ್ರಮುಖವಾದ ಪಾತ್ರ ಎಂದರೆ ಅದು ಸೀತೆಯದಾಗಿದೆ. ಐವತ್ತು ವರ್ಷವಾಗಿತ್ತು. ಚಿಕ್ಕವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡಳು ಸೀತೆ. ನಂತರ ತಂದೆಯನ್ನು ಕಳೆದುಕೊಂಡಳು. ಮದುವೆಯಾದ ದಿಗಂಬರ ಹತ್ತು ವರ್ಷ ಸಂಸಾರ ಮಾಡಿ ಆತನು ಕೈಬಿಟ್ಟ. ಮಗ ಮಧುಕರ ಮುಂಬಯಿ ಅಮೇರಿಕಾ ದೊಡ್ಡ ನಗರದಲ್ಲಿ ವಾಸಿಸುತ್ತಿದ್ದಾನೆ. ಇನ್ನು ಉಳಿದವಳು ಸೀತೆ ಒಬ್ಬಳೆ. ಒಂಟಿ ಬದುಕಿನ ನೋವಿನೊಂದಿಗೆ ದುಗ್ಗಿಯ ಜೊತೆ ಇದ್ದಾಳೆ.

ಹೂವಿನಂತೆ ಮನಸ್ಸನ್ನು ಹೊಂದಿರುವ ಸೀತಮ್ಮ ಗಿಡ ಮರಗಳನ್ನು ಹೂಗಳನ್ನು ಅಷ್ಟೇ ಪ್ರೀತಿಯಿಂದ ಕಾಣುತ್ತಿದ್ದಳು. ಎಲ್ಲರಲ್ಲೂ ಸಹ ತನ್ನ ಸುಖವನ್ನು ಕಾಣುತ್ತಿದ್ದವಳು ಸೀತೆ. ಹೆಣ್ಣು ಮಕ್ಕಳು ಮನೆಯಿಂದ ಹೊರಬರಲು ನಾಚುತ್ತಿದ್ದಾಗ ಸೈಕಲ್ ಕಲಿತವಳಾಗಿದ್ದಳು. ಗಂಡ ದಿಗಂಬರನೂ "ನೀನು ಸೈಕಲ್ ಗೀಕಲ್ ಕಲಿತಿರುವೆಯಂತೆ ಅದೆಲ್ಲ ಬೇಡ" ಎಂದು ಹೇಳಿದ. ಜೀವನದಲ್ಲಿ ಸಾಕಷ್ಟು ನೋವನ್ನು ಅನುಭವಿಸಿದವಳು ಸೀತೆಯಾಗಿದ್ದಳು. ಮಗನನ್ನು ದೂರ ದೇಶದಲ್ಲಿದ್ದರೂ ಪ್ರೀತಿಯಿಂದ ನೆನೆಯುತ್ತಿದ್ದಳು.

ಬಹು ಪ್ರತಿಭಾವಂತೆಯಾಗಿದ್ದಳು ಸೀತೆ. ಸರ್ಕಾರಿ ವೈದ್ಯರ ಹೆಂಡತಿಗೆ ವಯರಿನ ಚೀಲ ಹೆಣೆಯಲು ಬರುತ್ತವೆ ಎಂದು ಕೇಳಿ ಅವರ ಮನೆಗೆ ಹೋಗಿ ಕೂತು ಕಲಿತು ಬಂದಳು. ಇಂಗ್ಲೀಷ್ ಪತ್ರಿಕೆಗಳೊಂದಿಗೆ ಒಡನಾಟವನ್ನು ಹೊಂದಿದವಳು. ಪ್ರಾಣಿ, ಕಾರುಗಳ ಬಣ್ಣ-ಬಣ್ಣದ ಚಿತ್ರಗಳನ್ನು ದುಗ್ಗಿಗೆ ಕಾಣಿಸಬೇಕು. ಅವಳಿಗೆ ಅಕ್ಷರ ಕಲಿಸಬೇಕು ಎಂಬ ಆಕಾಂಕ್ಷೆ ಹೊತ್ತಿದ್ದಳು. ಆದರೆ ಕಲಿತ ಹೆಣ್ಣು ಏನನ್ನು ಬೇಕಾದರೂ ಸಾಧಿಸಬಹುದು ಎಂದು ಸ್ಪಷ್ಟವಾಗುತ್ತದೆ.

ಆಧುನಿಕತೆಗೆ ಹೆಚ್ಚು ಒತ್ತನ್ನು ಕೊಟ್ಟವಳು ಸೀತೆ. ಕಾರನು ಡ್ರೈವ್ ಮಾಡುವ ಹೆಂಗಳೆಯರನ್ನು ಕಂಡು ಸೀತೆಗೆ ವಿಚಿತ್ರವೆನ್ನಿಸಿ ತಾನು ಇದನ್ನೆಲ್ಲಾ ಮಾಡಬಹುದಿತ್ತಲ್ಲಾ

ಎಂದೆನಿಸಿತು. ತೋಳಿಲ್ಲದ ಪೋಲಕಾವನ್ನು ಹುಬ್ಬಳ್ಳಿಯಿಂದ ಹೊಲಿಸಿ ತಂದಿದ್ದಳು. ಸ್ವಾತಂತ್ರ್ಯೋತ್ಸವದಲ್ಲಿ ಮಕ್ಕಳಿಗೆ ಪೆಪರ್‌ಮೆಂಟು ಹಂಚುವ ವ್ಯವಸ್ಥೆ ಮಾಡಿದಳು. ಜರ್ಮನ್ ದಂಪತಿಗಳ ಜೊತೆಗೂಡಿ ಅರ್ಧಮರ್ಧ ಭಾಷೆಯನ್ನು ಕಲಿತಳು. ಓಡಿಹೋಗಿ ಮದುವೆಯಾಗಿದ್ದ ದಂಪತಿಗಳನ್ನು ಕರೆದು ಹೋಳಿಗೆ ಮಾಡಿದಳು.

ಚಿಕ್ಕ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ಮಗನಿಂದ ದೂರವಾದ ಸೀತೆ, ಬದುಕನ್ನು ಸ್ಫೂರ್ತಿ ಪ್ರೇರಣೆಯಿಂದ ತೆಗೆದುಕೊಂಡವಳಾಗಿದ್ದಳು. ಬದುಕನ್ನು ಧೈರ್ಯದಿಂದ ಮೆಟ್ಟಿ ನಿಲ್ಲುವ ಭರವಸೆಯೊಂದು ಮೂಡಿತು. ನವ್ಯದ ಲಕ್ಷಣಗಳಲ್ಲಿ ಒಂದಾದ ಆಲೋಚನಾ ಲಹರಿ ಇದು ವಿಭಿನ್ನ ರೀತಿಯಿಂದ ಅರ್ಥೈಸುವಂತೆ ಕಾಣಿಸತೊಡಗಿತು. ಗಂಡನಿಲ್ಲದೆ ಮಗ ಇದ್ದು ದೂರವಿರುವ ಅವಳ ಬದುಕನ್ನು ಮೆಚ್ಚುವಂತಹುದೆ ಆಗಿದೆ.

ತಾನೆಂದು ಒಂಟಿ ಎಂದು ಆಕೆಗೆ ಅನಿಸದೆ ಇಲ್ಲ. ಏಕೆಂದರೆ ಇಡೀ ಸಮಾಜ, ಸಮಾಜದಲ್ಲಿರುವ ಜನ ಎಲ್ಲರೂ ಕೂಡ ನನ್ನವರೆ ಎಂದು ಆಕೆ ಮನವರಿಕೆ ಮಾಡಿಕೊಂಡಿದ್ದಳು. ತನ್ನದು ಒಂಟಿ ಬದುಕು ಎಂದು ಗಮನಿಸಲೇ ಇಲ್ಲ. ಬದುಕಿನ ರೀತಿಗೆ ಹೊಂದಿಕೊಳ್ಳುವ ತನ್ನ ನೋವು ದುಃಖಗಳನ್ನು ಮರೆಯುತ್ತ ಹೋದವಳು ಸೀತೆ. ಪ್ರತಿಯೊಂದು ಹೆಣ್ಣಿಗೂ ಮಾದರಿಯಾಗಿದ್ದಾಳೆ. ಬದುಕನ್ನು ದಿಟ್ಟ ಧೈರ್ಯದಿಂದ ಎದುರಿಸಬೇಕು ಎಂಬ ಮಾದರಿಯನ್ನು ಕಾಣಬೇಕು ಸೀತೆ ಎಂಬುದು ಕಥೆಯ ಪ್ರಮುಖವಾದ ವಿಚಾರವಾಗಿದೆ.

ದಗಡು ಪರಬ್

"ದಗಡೂ ಪರಬನ ಅಶ್ವಮೇಧ" ಕಥೆಯ ಒಂದು ಪ್ರಮುಖವಾದಂತ ಪಾತ್ರವಾಗಿದೆ. ಅವಕುಂಠಿತ ಮದುಮಗನಾಗಿದ್ದಾನೆ. ಬಾಲಚಂದ್ರ ಪರಬ್ ಮದುಮಗನ ಅಣ್ಣ. ತನ್ನ ತಮ್ಮನೇ ಮೊಟ್ಟಮೊದಲ ಬಾರಿಗೆ ಕುದುರೆಯ ಮೇಲೆ ಮೆರವಣಿಗೆ ಹೊರಡುತ್ತಿರುವವನು ಎಂಬ ಅಭಿಮಾನವಿತ್ತು. ಮೋಟಾರ್ ಸೈಕಲ್‌ನ ದೆಸೆಯಿಂದ ಮೆರವಣಿಗೆ ಮಧ್ಯದಿಂದ ಅಶ್ವವು ವರ ಸಮೇತ ಓಡಿ ಹೋಯಿತು. ಎಲ್ಲಿ ಹುಡುಕಿದರೂ ದಗಡು ಮಾತ್ರ ಸಿಗಲಿಲ್ಲ. ಕುದುರೆಯ ಸಾರಥಿ ಗುಲಾಮ. ಕುದುರೆಯ ಯಜಮಾನ

ದಗಡೂ ಪ್ರೀತಿಸಿದ ಭಾನಮತಿಯ ಅಪ್ಪ. ತನ್ನ ಮಗಳನ್ನು ವಿವಾಹ ಮಾಡಲು ಒಪ್ಪದೆ ಇದುದರಿಂದ ಅವನ ಮೇಲಿನ ಸೇಡನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಕುದುರೆ ಸಮೇತ ಪರಾರಿಯಾದ. ಕೊನೆಗೆ ಕುದುರೆ ಮೇಲೆ ಬಂದ ದಗಡುನ ಕಂಡು ಭಾನಮತಿಯನ್ನು ವಿವಾಹ ಮಾಡಿದ.

ಬದುಕಿನ ಸಾರ್ಥಕತೆಯನ್ನು ದೈನ್ಯತೆ ಹಾಗೂ ಚಾಕಚಕ್ಯತೆಯನ್ನು ಕಾಣಬಹುದಾಗಿದೆ. ಕುದುರೆಯು ಮಾಡಿದ ಅವಾಂತರದಿಂದಾಗಿ, ಏನೆಲ್ಲ ಕಷ್ಟಗಳು ಬಂದರು ದಗಡುವಿನ (ಅಂಗವಿಕಲ) ಆತ್ಮವಿಶ್ವಾಸ. ಆಂತರ್ಯವನ್ನು ಕಾಣಬಹುದಾಗಿದೆ. ಪ್ರೀತಿಯಿಂದ ತಮ್ಮನ ಮದುವೆ ಮಾಡಬೇಕೆಂದಿದ್ದ ಅಣ್ಣ ಬಾಲಚಂದ್ರ ಪರಬ್‌ನ ಪ್ರೀತಿಯನ್ನು ಕಾಣಬಹುದು. ಏನೆಲ್ಲ ಬುದ್ಧಿ ಆತ್ಮ ವಿಶ್ವಾಸಿಗಳೆಂಬ ಪರದೆಯಲ್ಲಿ ನಾವು ಕಾಣಬಹುದಾಗಿದೆ. ಶಿವಾಜಿ ಪುತ್ಥಳಿಯ ವಿಶೇಷ ಚಿತ್ರಣವನ್ನು ಸಹ ಗಮನಿಸಬಹುದಾದ ಬದುಕಿನ ಆಸ್ಥೆ, ಗೌರವ, ಪ್ರೀತಿಗಳನ್ನು ಕಾಣಬಹುದಾಗಿದೆ.

ಬದುಕಿನ ಹೊಸ ಸಂಬಂಧಾತರಗಳನ್ನು ವಿವಿಧ ಮಜಲುಗಳನ್ನು ಕಾಣಬಹುದಾಗಿದೆ. ವಾಹನಗಳ ರಸ್ತೆಯಲ್ಲಿ ಕುದುರೆ ಓಡಿಹೋದ ಅವಸ್ಥೆಯನ್ನು ಸಹ ಕಾಣಬಹುದಾಗಿದೆ.

ಪಮ್ಮೇಚ

ಪಮ್ಮೇಚನ ಶಿವರಾತ್ರಿ ಕಥೆಯ ಪಮ್ಮೇಚ ಒಂದು ಪಾತ್ರವಾಗಿದೆ. ಹದಿನೆಂಟರ ಆಸು-ಪಾಸಿನ ಹುಡುಗ ಗೋಕರ್ಣದಲ್ಲಿ ನಡೆಯುವ ಶಿವರಾತ್ರಿಗೆ ವಿಶೇಷ ತಯಾರಿ ನಡೆಯುತ್ತಿದ್ದಿತು.ಅದರಲ್ಲಿ ಪುಮ್ಮೇಚನ ಪಾತ್ರ ಪ್ರಮುಖವಾದುದಾಗಿದೆ. ಶಿವರಾತ್ರಿ ಹಬ್ಬ ಆರಂಭವಾಗುವ ಮೊದಲೇ ರಥ ಬೀದಿಯ ಬಸ್ ಸ್ಟ್ಯಾಂಡ್‌ಗಳು ಊರ ಹೊರಗೆ ವರ್ಗಾಯಿಸಲ್ಪಡುವುದು. ಕುಲದಲ್ಲಿ ಹಿಂದಿನಿಂದಲೂ ನಡೆದುಕೊಂಡ ಪೂಜಾ ಪದ್ಧತಿಯನ್ನು ಬಿಡುವಂತಿರಲಿಲ್ಲ. ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಸಂಗೀತದಲ್ಲೂ ಆಸಕ್ತಿಯನ್ನು ಬೆಳೆಯಿಸಿಕೊಂಡಿದ್ದ. ಪಮ್ಮೇಚನಿಗೆ ನಾಟಕ ಕಂಪನಿಯ ಪೇಟಿ ಮಾಸ್ಟರ್ ಸಿಕ್ಕಿದರು. ಅವರ ಜೊತೆಯಲ್ಲಿಯೇ ಸಮುದ್ರಕ್ಕೆ ಹೋಗತೊಡಗಿದನು. ಪಮ್ಮೇಚನ ತಾಯಿ

“ಊಟಕ್ಕೆ ಹೋದಾಗಲೇ ಸರಿ ಉಣ್ಣ ಬೇಕು. ಸಂಜೆ ಮನೆಯಲ್ಲಿ ಊಟ ಮಾಡದಿದ್ದರೂ ನಡೆಯಬೇಕು” ಎನ್ನುತ್ತಿದ್ದಳು.

ಶರಣಯ್ಯನನ್ನು ಪಮ್ಮೇಚ ತುಂಬಾ ಹಚ್ಚಿಕೊಂಡಿದ್ದನು. “ನೀವು ದೇವಸ್ಥಾನದೊಳಗೆ ಹೋಗೆ ಇಲ್ವಲ್ಲ. ನಾನೊಂದು ಸಲ ಕರ್ಕೊಂಡು ಹೋಗ್ತೆನೆ. ಆತ್ಮಲಿಂಗ ಮುಟ್ಟಿಸಿ ತರ್ತೆನೆ” ಎಂದು ಉತ್ಸಾಹದಿಂದ ಹೇಳಿದ.

ಒಟ್ಟಾರೆಯಾಗಿ ಪಾತ್ರಗಳ ಅಧ್ಯಯನವು ಓದುಗರ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರುತ್ತದೆ.

*****

ಅಧ್ಯಾಯ–೪

ಅಡಿ ಟಿಪ್ಪಣಿ

೧. ಅಮೃತಬಳ್ಳಿ ಕಷಾಯ – ಜಯಂತ ಕಾಯ್ಕಿಣಿ
ಪ್ರಕಾಶಕರು – ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,
ಪ್ರಕಟಣ ವರ್ಷ–೧೯೯೬,
ಪುಟ ಸಂಖ್ಯೆ: ೩೨೧

೨. ಅದೇ ಪುಸ್ತಕ – ಪುಟ ಸಂಖ್ಯೆ: ೨೮೧
೩. ಅದೇ ಪುಸ್ತಕ – ಪುಟ ಸಂಖ್ಯೆ: ೨೮೪
೪. ತೆರದಷ್ಟೆ ಬಾಗಿಲು – ಜಯಂತ ಕಾಯ್ಕಿಣಿ
ಪ್ರಕಾಶಕರು–ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,
ಪ್ರಕಟಣ ವರ್ಷ –೧೯೮೨,
ಪುಟ ಸಂಖ್ಯೆ: ೭೫

೫. ತೂಫಾನ್ ಮೇಲ್ – ಜಯಂತ ಕಾಯ್ಕಿಣಿ
ಪ್ರಕಾಶಕರು–ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,
ಪ್ರಕಟಣ ವರ್ಷ –೨೦೧೬,
ಪುಟ ಸಂಖ್ಯೆ: ೪೮

೬. ದಗಡು ಪರಬನ ಅಶ್ವಮೇದ – ಜಯಂತ ಕಾಯ್ಕಿಣಿ
ಪ್ರಕಾಶಕರು–ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,
ಪ್ರಕಟಣ ವರ್ಷ –೧೯೮೯,
ಪುಟ ಸಂಖ್ಯೆ: ೧೧೧

೭. ಬಣ್ಣದ ಕಾಲು – ಜಯಂತ ಕಾಯ್ಕಿಣಿ
ಪ್ರಕಾಶಕರು–ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,
ಪ್ರಕಟಣ ವರ್ಷ –೨೦೧೪,
ಪುಟ ಸಂಖ್ಯೆ: ೨೬

೮. ಅದೇ ಪುಸ್ತಕ – ಪುಟ ಸಂಖ್ಯೆ: ೩೬

೯. ಅದೇ ಪುಸ್ತಕ – ಪುಟ ಸಂಖ್ಯೆ: ೮೬

೧೦. ಅದೇ ಪುಸ್ತಕ – ಪುಟ ಸಂಖ್ಯೆ: ೧೧೧

*****

ಅಧ್ಯಾಯ–೫

ನಗರ ಬದುಕಿನ ಸಮಸ್ಯೆ ಮತ್ತು ಸವಾಲುಗಳನ್ನು ಕಥೆಗಾರರು ನೋಡುವ ಬಗೆ

ನಗರ ಪ್ರದೇಶದಲ್ಲಿ ವಾಸಿಸುವಂತ ಜನರ ಬದುಕಿನಲ್ಲಿ ಹಲವಾರು ಸಮಸ್ಯೆಗಳು, ಸವಾಲುಗಳು ಎದುರಾಗುತ್ತವೆ. ಸಾಮಾಜಿಕ ಸಮಸ್ಯೆಗಳಾದ ಹಸಿವು, ಬಡತನ, ಅನಕ್ಷರತೆ ನಿರುದ್ಯೋಗ ಮೊದಲಾದವುಗಳು ಒಂದು ಕಡೆಯಾದರೆ ಮತ್ತೊಂದು ಕಡೆ ಹಣಕಾಸಿನ ಸಮಸ್ಯೆ. ಬಂಡವಾಳಶಾಹಿಗಳ ಹಿಡತದಲ್ಲಿ ಸಿಲುಕಿ ನಲುಗುವಂತಹುದು ಮುಂತಾದವುಗಳನ್ನು ಕಾಣುತ್ತೇವೆ. ಸಾಮಾನ್ಯವಾಗಿ ಉಂಟಾಗುವ ಸಮಸ್ಯೆಗಳೆಂದರೆ ಕುಡಿಯುವ ನೀರಿನ ಸಮಸ್ಯೆ, ಆಹಾರದ ಸಮಸ್ಯೆ, ಪರಿಸರ ಮಾಲಿನ್ಯಗಳು, ನೈರ್ಮಲ್ಯಗಳ ಕೊರತೆ ಮುಂತಾದವುಗಳನ್ನು ಕಾಣುತ್ತೇವೆ.

ಜನಸಂಖ್ಯೆ ಹೆಚ್ಚಾದ ಹಾಗೆ, ನಗರಗಳಲ್ಲಿನ ಜನಸಂಖ್ಯೆ ತೀವ್ರಗತಿಯಲ್ಲಿ ಹೆಚ್ಚಾಗುತ್ತಾರೆ. ಜನ ಸಂಖ್ಯೆಗೆ ಅನುಗುಣವಾಗಿ ಉದ್ಯೋಗ, ವಸತಿ, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸಮಸ್ಯೆಯಾಗುತ್ತದೆ. ಮತ್ತೊಂದು ಕಡೆ ರಾಜಕೀಯ ಪ್ರಭುತ್ವಗಳು, ಬಂಡವಾಳ ಶಾಹಿಗಳ ಹಿಡಿತ, ಬಡವರು ಮತ್ತು ಶ್ರೀಮಂತರ ನಡುವಿನ ಅಂತರಗಳು ತಾರತಮ್ಯ ಶೋಷಣೆ ಮೊದಲಾದವುಗಳನ್ನು ಕಾಣುತ್ತೇವೆ. ಕೇವಲ ನಗರ ಪ್ರದೇಶಗಳಲ್ಲಿ ಸಮಸ್ಯೆಗಳು ಇರುತ್ತವೆ ಎಂದು ಗ್ರಾಮೀಣ ಪ್ರದೇಶಗಳಲ್ಲಿ ಇರುವುದನ್ನು ಕಾಣುತ್ತೇವೆ. ರಸ್ತೆಗಳು, ಸಾರಿಗೆ ಸೌಲಭ್ಯಗಳ ಕೊರತೆ, ಒಳಚರಂಡಿ ವ್ಯವಸ್ಥೆಗಳ ಸಮಸ್ಯೆ ಮೊದಲಾದವುಗಳನ್ನು ಕಾಣುತ್ತೇವೆ.

ಮುಂಬೈನಂತಹ ನಗರಕ್ಕೆ ವಲಸೆ ಬರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಪ್ರಕೃತಿಯಿಂದ ದೂರ ಸರಿಯುತ್ತ ನಾಗರಿಕರಾದಂತ ನಿಸ್ಸಾರವು ನಿರ್ವೀಯವೂ ಆಗಿ ಬಿಡುವ ನಾಗರಿಕ ಬದುಕಿನ ದುರಂತವನ್ನು ಈ ಕವಿತೆಯು ದೃಶ್ಯವತ್ತಾಗಿ ಕಣ್ಮುಂದೆ ಇಡುತ್ತದೆ. (ಮುಂಬೈ ಜಾತಕ) ಬದುಕಿನ ಯಾಂತ್ರಿಕತೆಯಲ್ಲಿ ಅನುಭವಿಸುತ್ತಿರುವಂತಹ ವೇದನೆಗಳನ್ನು ಕಾಣುತ್ತೇವೆ. ಮುಂಬೈ ಬೆಂಗಳೂರು ಮುಂತಾದ ಬೃಹತ್ ನಗರಗಳಲ್ಲಿ ವಾಸಿಸುವವರ ಅತಂತ್ರ ಸ್ಥಿತಿ ಮರುಕ ಹುಟ್ಟಿಸುವಂತದ್ದು. ಇಂತಹ ನಗರಗಳಲ್ಲಿ ಹುಟ್ಟುವ

ಮಕ್ಕಳು ಕಣ್ತೆರೆದಾಗ ಕಾಣುವುದು. ಅವಸರದಿಂದ ಸರಿಯುವ ವಾಹನಗಳನ್ನು ಮಾತ್ರ ಯಾಂತ್ರಿಕೃತ ಬದುಕು ತಿಳಿಯುತ್ತಿದೆ.

ಯಾಂತ್ರಿಕ ಬದುಕಿನ ಆವರಣಕ್ಕೆ ಎಳೆತನದಲ್ಲೇ ಸಿಲುಕಿ ನಲುಗುವ ಧಾರುಣತೆಯನ್ನು ಕಾಣುತ್ತೇವೆ. ನಗರ ಸಂಸ್ಕೃತಿಯಲ್ಲಿ ಜೀವನದ ರಸಾನುಭವ ಅಸಾಧ್ಯವೆಂಬ ಧ್ವನಿಯಲ್ಲಿ ಕಾಣಬಹುದು. ತಂದೆ-ತಾಯಿಯರ ಕರುಳಬಳ್ಳಿಯ ಪ್ರೀತಿ, ಮಮತೆ, ಆರೈಕೆಗಳಲ್ಲೂ ಕೃತಕವಾದ ಹೊಣೆಗಾರಿಕೆಯನ್ನು ಚಿತ್ರಿಸಿರುವುದನ್ನು ಕಾಣುತ್ತೇವೆ. ಕೇವಲ ಯಾಂತ್ರಿಕೃತತೆಯ ಜೀವನದ ಸಮಸ್ಯೆಯು ಒಂದೇ ಅಲ್ಲ. ಸಾವಿರಾರು ಸಮಸ್ಯೆಗಳನ್ನು ದಿನ ಬೆಳಗಾದರೆ ಎದ್ದು ಕಾಣುತ್ತವೆ. ದಿನನಿತ್ಯ ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ದುಡಿದು, ದಣಿದು ಬಂದ ಜನ ತಮ್ಮ ಪ್ರೀತಿಯನ್ನು ಹುಡುಕುತ್ತ ಅರಸುವುದನ್ನು ಕಾಣುತ್ತೇವೆ. ಗ್ರಾಮೀಣ ಪ್ರದೇಶದಲ್ಲಿ ಒಂದೇ ರೀತಿಯ ಸಮಸ್ಯೆಯಾದರೆ ನಗರ ಪ್ರದೇಶದಲ್ಲಿಯೇ ಮತ್ತೊಂದು ಬಗೆಯ ಸಮಸ್ಯೆ ಇರುತ್ತದೆ. ಇವರೆಡರ ನಡುವಿನ ಹೋಲಿಕೆ, ಸಾಮ್ಯತೆಗಳನ್ನು ಪರಸ್ಪರ ಗಾಢವಾಗಿ ಚರ್ಚಿಸಬೇಕಾಗಿರುವುದನ್ನು ಕಾಣುತ್ತೇವೆ.

ಶಿಕ್ಷಣ

ಬೆಳೆಯುವಂತಿರುವಂತಹ ನಗರಗಳಲ್ಲಿ ಸಮಸ್ಯೆ ಪ್ರಮಾಣವು ಬೆಳೆಯುತ್ತಿದೆ. ಆದ್ದರಿಂದ ಬೆಳೆಯುವ ಜನ ಸಂಖ್ಯೆಗನುಗುಣವಾಗಿ ಶಿಕ್ಷಣವನ್ನು ಒದಗಿಸಬೇಕಾಗುತ್ತದೆ. ಕೊಳಚೆ ಪ್ರದೇಶಗಳಲ್ಲಿರುವ ಮಕ್ಕಳ ಶಿಕ್ಷಣವನ್ನು ಗಮನಿಸಬೇಕಾಗುತ್ತದೆ. ಶಿಕ್ಷಣವನ್ನು ಅಕ್ಷರಸ್ಥ, ಅನಕ್ಷರಸ್ಥ ಸಮುದಾಯಗಳನ್ನು ನಾವು ಕಾಣಬಹುದಾಗಿದೆ. ಅಕ್ಷರಸ್ಥರಲ್ಲಿ ಸ್ವಲ್ಪ ಪ್ರಮಾಣದಲ್ಲಿಯಾದರೂ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು. ಹೇಗೆ ತಿಳಿದುಕೊಳ್ಳಬೇಕು ಎಂಬುದು ಇರುತ್ತದೆ. ಬಣ್ಣದ ಕಾಲು ಕಥೆಯಲ್ಲಿ ಬರುವಂತ ಚಂದು ೬-೭ ವರ್ಷದ ಹುಡುಗ. ಆ ವಯಸ್ಸಿನಲ್ಲಿ ಏನು ಮಾಡಬೇಕು. ಅಂದರೆ ಓದಬೇಕು. ಆದರೆ ತುಂಬಾ ತುಂಟನಾದ ಹುಡುಗನಾಗಿದ್ದ. ಅದೇ ರೀತಿ ಮಿಥುನ್ ನಂಬರ್ ಟೂ ಕಥೆಯ ಚಂದು ಸಹ ಸಿನಿಮಾ ಹೀರೋ ಮಿಥುನ್‌ನಂತೆ ನಾನು ಕಾಣಬೇಕು ಎಂದು ಬಯಸಿದವನು.

ಈ ಚಿಕ್ಕ – ಚಿಕ್ಕ ವಯಸ್ಸಿನ ಮಕ್ಕಳೆಲ್ಲಾ ಇಂತಹ ಆಲೋಚನಾ ಲಹರಿಗಳು ಬೆಳಯುತ್ತವೆ. ತಾವು ಓದಬೇಕು, ವೈದ್ಯ, ಇಂಜಿನೀಯರ್, ಶಿಕ್ಷಕ, ಏನಾದರೊಂದು ಗುರಿ

ಮುಟ್ಟಬೇಕು ಎಂಬುದು ಬಲವಾಗಿ ಬೆಳೆದಾಗ ಮಾತ್ರ ಬದುಕಿನ ವಿವಿಧ ಆಯಾಮಗಳು ಅರ್ಥವಾಗುವುದನ್ನು ಕಾಣುತ್ತೇವೆ. ಇಂತಹ ಮಕ್ಕಳಿಗೆ ಒಳ್ಳೆಯ ಶಿಕ್ಷಣ. ಉತ್ತಮ ವಾತವರಣವನ್ನು ಕಲಿಸಿದಾಗ ಮಾತ್ರ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬೆಳೆಯುತ್ತಾರೆ. ಬೆಳೆಯುವ ಸಿರಿ ಮೊಳಗೆ ಯಲ್ಲಿ ಎಂಬಂತೆ ಚಿಕ್ಕ ವಯಸ್ಸಿನ ಎಳೆಯ ಮಕ್ಕಳನ್ನು ಯಾವ ರೀತಿಯಲ್ಲಾದರೂ ಹದಕ್ಕೆ ತರಬಹುದು.

ಬಡತನ

ಬಡತನ ಎಂಬುದು ದೇಶಕ್ಕೆ ಶಾಪವಾಗಿರುವಂತಹ ಒಂದು ಪ್ರಮುಖ ಸಮಸ್ಯೆ. ನಗರ, ಗ್ರಾಮೀಣ ಪ್ರದೇಶಗಳಡರಲ್ಲೂ ತನ್ನದೆ ಆದ ಬಾಹುಗಳನ್ನು ಚಾಚಿದೆ. ಬಡತನ, ಬಡವರು ಎಂದರೆ ಯಾರು?ತಿನ್ನಲೂ ಊಟ ಮಾಡಲು ಅನ್ನವಿಲ್ಲದೆ ಇರುವಂತ ಸ್ಥಿತಿಯನ್ನು ನಾವು ಬಡತನ ಎಂದು ಕರೆಯುತ್ತೇವೆ. ತಮ್ಮ ಪರಿಸ್ಥಿತಿಯನ್ನು ನಿವಾರಿಸಿಕೊಳ್ಳಲು ಮಕ್ಕಳನ್ನು ಚಿಕ್ಕ-ಚಿಕ್ಕ ವಯಸ್ಸಿನಲ್ಲಿಯೇ ಕೆಲಸಕ್ಕೆ ಕಳುಹಿಸಲು ಶಾಲೆ ಬಿಡಿಸುತ್ತಾರೆ. ಓದುವ ಅರ್ಧದಲ್ಲಿಯೇ ವ್ಯಾಸಂಗ ನಿಲ್ಲಿಸುವುದನ್ನು ಕಾಣುತ್ತೇವೆ.

ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ಕೇವಲ ಕೈಗಾರಿಕೆ, ಕಂಪನಿಗಳಲ್ಲಿ ದುಡಿಯುವವರು ಮಾತ್ರವಷ್ಟೆ ಅಲ್ಲದೆ ಚಿಕ್ಕ ಚಿಕ್ಕ ಹೋಟೆಲ್‌ನವರು, ಪುಟ್‌ಪಾತ್ ಮೇಲೆ ಅಂಗಡಿಯನಿಟ್ಟುರುವವರು ಮೊದಲಾದವರು ತಮ್ಮ ಜೀವನ ನಿರ್ವಹಣೆಗಾಗಿ ತಮ್ಮ ತಮ್ಮ ಸಾಮಾರ್ಥ್ಯಗಳಿಗನುಗುಣವಾಗಿ ಕೆಲಸ ಮಾಡಿ ನಿರ್ವಹಿಸುತ್ತಾರೆ. ಕೇವಲ ಹೊಟ್ಟೆ ತುಂಬುವುದಕ್ಕಾಗಿ ಅಲ್ಲ. ಉತ್ಕೃಷ್ಟ ಮಟ್ಟದ ಜೀವನವನ್ನು ಸಾಗಿಸಬೇಕಾದರೆ ದುಡಿಯಲೇ ಬೇಕಾಗುತ್ತದೆ. ಕೆಲವರ ಮನೋಭಾವ ದೃಷ್ಠಿಯಲ್ಲಿ ನಗರ ಪ್ರದೇಶಗಳಲ್ಲಿ ಬಡತನ ಎಂಬುದು ಇರುವುದಿಲ್ಲವೆಂದು ಭಾವಿಸುತ್ತಾರೆ. ಆದರೆ ನಗರಗಳಲ್ಲೂ ಬಡತನವಿರುತ್ತದೆ. ಕೊಳಚೆ ಪ್ರದೇಶಗಳಲ್ಲಿ ತಿನ್ನುವ ಅನ್ನಕ್ಕೂ ಬಹಳ ಕಷ್ಟಸ್ಥಿತಿ ಇರುವುದನ್ನು ಕಾಣುತ್ತೇವೆ. ಬಡತನಕ್ಕೆ ಮೂಲ ಕಾರಣ ಸೋಮಾರಿತನ. ಅದನ್ನು ಬಿಟ್ಟಾಗ ಮಾತ್ರ ಬಡತನವೇ ಕಡಿಮೆಯಾಗುವುದನ್ನು ಕಾಣಬಹುದು.

ಮಾಲಿನ್ಯಗಳು

ನಗರಗಳಲ್ಲಿ ಅತಿ ಮುಖ್ಯವಾದುದು ಮಾಲಿನ್ಯಗಳು, ಶಬ್ಧ ಮಾಲಿನ್ಯ, ವಾಯು ಮಾಲಿನ್ಯ, ಜಲಮಾಲಿನ್ಯಗಳನ್ನು ಕಾಣುತ್ತೇವೆ. ಕೈಗಾರಿಕೆ, ಕಾರ್ಖಾನೆಗಳಿಂದ ಹೊರಸೂಸುವ ದೂಳು, ಹೊಗೆಯಿಂದ ಕಲುಷಿತಗೊಂಡ ಆಮ್ಲಜನಕವನ್ನು ಸೇವಿಸಬೇಕಾಗುತ್ತದೆ. ಇದರಿಂದ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಕಾಣಬಹುದು. ಹೆಚ್ಚಾದ ವಾಹನಗಳು ದಟ್ಟಣೆಯಿಂದ ಶಬ್ಧಮಾಲಿನ್ಯ ಉಂಟಾಗುವುದನ್ನು ಕಾಣುತ್ತೇವೆ. ಮಾನವನ ಆರೋಗ್ಯದ ಮೇಲೆ ತೀವ್ರತರವಾದ ದುಷ್ಪರಿಣಾಮ ಬೀರುತ್ತವೆ.

ಒಂದೆಡೆ ಪರಿಸರ ಉಳಿಸಿ, ಬೆಳೆಸಿ, ಪರಿಸರದಿಂದ ಜೀವ, ಜೀವನ ಎಂದೆಲ್ಲ ನಾವು ತಿಳಿಸಿದ್ದೇವೆ. ಆದರೆ ಅದೇ ಪರಿಸರಕ್ಕೆ ನಾವೇ ಹಾನಿಯನ್ನುಂಟು ಮಾಡುತ್ತೇವೆ. ಮನುಷ್ಯ ಆಸೆ, ಆಕಾಂಕ್ಷೆಗಳು ಹೆಚ್ಚಾಗುತ್ತ ಹೋದಂತೆ ಮಾಲಿನ್ಯಗಳು, ಸಮಸ್ಯೆಗಳು ಹೆಚ್ಚಾಗುತ್ತ ಹೋಗುತ್ತವೆ. ಮಾಲಿನ್ಯಗಳನ್ನು ಹೆಚ್ಚಾಗಿ ನಗರ ಪ್ರದೇಶಗಳಲ್ಲಿಯೇ ಕಾಣುತ್ತೇವೆ. ಗ್ರಾಮೀಣ ಪ್ರದೇಶಗಳಲ್ಲಿ ಮಾಲಿನ್ಯಗಳ ಪ್ರಮಾಣ ಕಡಿಮೆ. ನಗರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಏಕೆಂದರೆ ಹೆಚ್ಚಿನ ಪ್ರಮಾಣದ ಕೈಗಾರಿಕೆ-ಕಂಪನಿಗಳು ನಗರ ಪ್ರದೇಶದಲ್ಲಿ ಕೇಂದ್ರಿಕೃತಗೊಂಡಿರುತ್ತವೆ. ಇದರಿಂದಾಗಿ ಮಾಲಿನ್ಯ ಉಂಟಾಗುತ್ತದೆ ಅನುಪಯುಕ್ತ ವಸ್ತುಗಳನ್ನು ಬಿಸಾಡುವುದರಿಂದ ಮಾಲಿನ್ಯಗಳು ಉಂಟಾಗುವುದನ್ನು ಸಹ ಕಾಣುತ್ತೇವೆ. ಆದ್ದರಿಂದ ಹೊಗೆ-ಧೂಳು, ಅನುಪಯುಕ್ತ ವಸ್ತುಗಳನ್ನು ಆದಷ್ಟು ಕಡಿಮೆಗೊಳಿಸಬೇಕು.

ಸ್ವಚ್ಛತೆ

ಜನಸಂಖ್ಯೆ ಹೆಚ್ಚಾಗಿರುವ ನಗರ ಪ್ರದೇಶಗಳಲ್ಲಿ ಸ್ವಚ್ಛತೆ ಕಡಿಮೆಯಿರುವಂತಹುದನ್ನು ಕಾಣುತ್ತೇವೆ. ಕೊಳಚೆ ನಗರ ಪ್ರದೇಶಗಳಲ್ಲಿ ಈ ಸಮಸ್ಯೆ ಹೆಚ್ಚಾಗಿರುತ್ತದೆ. ನಗರ ಎಂದ ತಕ್ಷಣ ನಮ್ಮ ಕಣ್ಣಿಗೆ ಬೀಳುವುದು ಸುಸಜ್ಜಿತನಗರ ವ್ಯವಸ್ಥೆ ಮಾತ್ರ. ಅದರಲ್ಲಿ ಶ್ರೀಮಂತರು, ಬಡವರು ಇರುವಂತೆ, ಒಳ್ಳೆಯ ಪ್ರದೇಶಗಳು ಹಾಗೂ ಕೊಳಚೆ ಪ್ರದೇಶಗಳನ್ನು ಕಾಣುತ್ತೇವೆ. ಕಸವನ್ನು ಎಲ್ಲಿ ಬೇಕೆಂದರೆ ಅಲ್ಲಿ ಹಾಕುವುದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿ ಆರೋಗ್ಯದ ಮೇಲೆ ತೀವ್ರತರವಾದಂತ ದುಷ್ಪರಿಣಾಮವನ್ನು ಬೀರುತ್ತದೆ. ಇದರಿಂದಾಗಿ ಮಕ್ಕಳ ಮಾನಸಿಕ ಮಟ್ಟದ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರುತ್ತಿದೆ.

ಸಮಸ್ಯೆಗಳು ಕೇವಲ ಸಮಸ್ಯೆಗಳಾಗಿಯೇ ಉಳಿಯುವದನ್ನು ಕಾಣುತ್ತೇವೆ. ಅದಕ್ಕೆ ಪರಿಹಾರವನ್ನು ನಾವೇ ಕಂಡುಕೊಳ್ಳಬೇಕಾಗಿದೆ. ಅದಕ್ಕೆ ಪರಿಹಾರವನ್ನು ನಾವೇ ಕಂಡುಕೊಳ್ಳಬೇಕಾಗಿದೆ. ಕಸವನ್ನು ಎಲ್ಲಿ ಬೇಕೆಂದರೆ ಅಲ್ಲಿ ಹಾಕಬಾರದು ಒಂದೆಡೆ ಹಾಕಬೇಕು. ಅದನ್ನು ಸುಟ್ಟು ಹಾಕಬೇಕು. ಡೆಂಗ್ಯೂ, ಮಲೇರಿಯಾ ಮೊದಲಾದ ಕಾಯಿಲೆಗಳನ್ನು ಸಹ ತಡೆಗಟ್ಟಬಹುದಾಗಿದೆ. ಸ್ವಚ್ಛತೆ ಇರುವಲ್ಲಿ ನೈರ್ಮಲ್ಯ ಇರುವಲ್ಲಿ ಉತ್ತಮವಾದಂತ ಆರೋಗ್ಯವನ್ನು ಕಾಣುತ್ತೇವೆ. ಸ್ವಚ್ಛತೆಯ ಅರಿವು ಪ್ರತಿಯೊಬ್ಬ ವ್ಯಕ್ತಿಗೂ ಬರಬೇಕು. ಇಲ್ಲದೆ ಹೋದರೆ ನಗರ ಎಂಬುದು ಸಮಸ್ಯೆಗಳ ಗೂಡಾಗುವುದನ್ನು ಸಹ ಕಾಣುತ್ತೇವೆ. ಸ್ವಚ್ಛತೆಯ ಕಡೆ ಗಮನ ಹರಿಸಿದಾಗ ಉನ್ನತವಾದ ವಿಚಾರವನ್ನು ಕಾಣುತ್ತೇವೆ. ಇದಕ್ಕಾಗಿ ನಡೆದ ಸ್ವಚ್ಛಭಾರತ ಆಂದೋಲನವನ್ನು ಕಾಣುತ್ತೇವೆ. ಪ್ರತಿಯೊಬ್ಬರು ತಮ್ಮ-ತಮ್ಮ ಮನೆಯಿಂದ ಆರಂಭಿಸಿದರೆ ಇಡೀ ದೇಶವೇ ಸ್ವಚ್ಛತೆಯಿಂದ ಕೂಡಿರುತ್ತದೆ.

ಕುಡಿಯುವ ನೀರಿನ ಸಮಸ್ಯೆ

ಕುಡಿಯುವ ನೀರಿನ ಸಮಸ್ಯೆಯು ಕೇವಲ ನಗರ ಪ್ರದೇಶದಲ್ಲಿ ಮಾತ್ರವಲ್ಲ ನಗರಗಳಲ್ಲಿಯೂ ಪ್ರಮುಖವಾಗಿ ಇಂತಹ ಸಮಸ್ಯೆಯನ್ನು ಕಾಣುತ್ತೇವೆ. ನೀರನ್ನು ಹೆಚ್ಚು ಹೆಚ್ಚಾಗಿ ಒಂದು ಕಡೆ ಬಳಸಿದ್ದರೆ ಮತ್ತೊಂದು ಕಡೆ ಶುದ್ಧ ನೀರಿನ ಸಮಸ್ಯೆಗಳನ್ನು ಸಹ ಕಾಣುತ್ತೇವೆ ನೀರಿಗಾಗಿ ನಲ್ಲಿಗಳ ಮುಂದೆ ಸರದಿ ಪ್ರಕಾರ ನಿಲ್ಲುವುದನ್ನ ಕಾಣಬಹುದು. ಬೆಳಗ್ಗೆ ಎದ್ದು ಕೆಲಸಕ್ಕೆ ಹೋಗಿ ದುಡಿಯುವ ಜನರಿಗೆ ಇದೊಂದು ಪ್ರಮುಖ ಸಮಸ್ಯೆಯಾಗಿದೆ ಏಕೆಂದರೆ ನೀರು ಬಂದಾಗ ಹಿಡಿಯಲು ಅವರುಗಳು ಇರುವುದಿಲ್ಲ. ಏಕೆಂದರೆ ಕೆಲಸದಲ್ಲಿರುತ್ತಾರೆ. ನೀರಿಲ್ಲದ ಜೀವನವನ್ನು ಊಹಿಸಿಕೊಳ್ಳಲು ಆಗುವುದಿಲ್ಲ.

ನೀರು ಜೀವದ ಜೀವಾಳ ಅದೇ ಇಲ್ಲದೆ ಹೋದರೆ ಮನುಷ್ಯನ ಬದುಕನ್ನು ಊಹಿಸಿಕೊಳ್ಳುವುದು ತುಂಬಾ ಕಷ್ಟಕರವಾಗಿರುವುದನ್ನು ಕಾಣುತ್ತೇವೆ. ಕೆಲವರು ನೀರನ್ನು ಅನಾವಶ್ಯಕವಾಗಿ ವ್ಯರ್ಥ ಮಾಡುತ್ತಾರೆ. ಅಂತಹ ನೀರಿನಿಂದ ಎಷ್ಟೋ ಜೀವನಗಳನ್ನು ಉಳಿಸಬಹುದೆಂಬುದನ್ನು ಮರೆಯುತ್ತಾರೆ ನೀರಿಗಾಗಿ ಎಷ್ಟೋ ದೇಶ ದೇಶಗಳ ನಡುವೆ ರಾಜ್ಯ ರಾಜ್ಯಗಳ ನಡುವೆ ಸಮಸ್ಯೆಗಳಿರುವಂತಹುದನ್ನು ಸಹ ಕಾಣುತ್ತೇವೆ. ಚಾರ್ ಮಿನಾರ್

ಕಥಾ ಸಂಕಲನದ ನೀರು ಕಥೆಯಲ್ಲಿ ಮುಂಬಯಿ ಉಂಟಾದ ಮಳೆಯಿಂದಾಗಿ ವ್ಯವಸ್ಥೆ ಅಸ್ತ ವ್ಯಸ್ತಗೊಂಡಿರುವುದನ್ನ ಸಹ ಕಾಣುತ್ತೇವೆ ಕುಡಿಯುವ ನೀರಿನ ಸಮಸ್ಯೆ ಒಂದೆಡೆಯಾದರೆ ಅತಿಯಾದ ಮಳೆಯಿಂದ ಬೇರೆ ಸಮಸ್ಯೆ ಉಂಟಾಗುತ್ತದೆ .

ಮುಂಬಯಿ ಅಹಮದಬಾದ್ ದೆಹಲಿ ಬೆಂಗಳೂರು ಮುಂತಾದ ನಗರಗಳಲ್ಲಿಯೂ ಬಾರ್ ಗಳಲ್ಲಿ ಹೆಣ್ಣು ಮಕ್ಕಳು ದುಡಿಯುವುದನ್ನು ನೋಡುತ್ತೇವೆ. ಒಂದು ಕಾಲದಲ್ಲಿ ಹೆಣ್ಣು ಮಕ್ಕಳು ಹೊರ ಬರುವುದೇ ತಪ್ಪು ಎಂದು ತಿಳಿದಾಗ ಇಂದು ಎಲ್ಲ ಕಡೆ ದುಡಿಯುವುದನ್ನು ಕಾಣುತ್ತೇವೆ. ಸಮಯದ ಒತ್ತಡ ಅಧಿಕಾರಿಗಳ ಹಿಡಿತ ಅವ್ಯವಸ್ಥಿತ ವ್ಯವಸ್ಥೆ ಮುಂತಾದವುಗಳು ಪ್ರಮುಖವಾದವುಗಳಾಗಿವೆ ಗ್ರಾಮೀಣ ಪ್ರದೇಶಗಳಲ್ಲಿ ಒಂದು ರೀತಿ ಸಮಸ್ಯೆ ಯಾದರೆ ನಗರಗಳಲ್ಲಿ ಇನ್ನೊಂದು ರೀತಿಯ ಸಮಸ್ಯೆಗಳು ಉಂಟಾಗುವುದನ್ನ ಕಾಣುತ್ತೇವೆ.

ನಗರಗಳಲ್ಲಿ ಸೌಲಭ್ಯಗಳಾಗಿ ಕಂಡುಬಂದರೆ ಗ್ರಾಮೀಣ ಪ್ರದೇಶಗಳಲ್ಲಿ ಸಮಸ್ಯೆಗಳಾಗಿ ಕಂಡು ಬರುತ್ತವೆ. ಸಾರಿಗೆ ವ್ಯವಸ್ಥೆಯ ಸೌಲಭ್ಯವು ನಗರಗಳಲ್ಲಿ ಉತ್ತಮವಾಗಿರುತ್ತದೆ. ಅದೇ ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ಕಡೆ ಬಸ್ ಗಳ ಸಂಚಾರವೇ ಇರುವುದಿಲ್ಲ. ಇಂತಹ ಸಮಸ್ಯೆಯನ್ನು ಕಾಣುತ್ತೇವೆ ಹಾಗೆಯೇ ಕೈಗಾರಿಕೆ, ಕಾರ್ಖಾನೆಗಳಿಂದ ಹೊರ ಸೂಸೂವ ಧೂಳು ಮಾಲಿನ್ಯದಿಂದ ಇಂಗಾಲದ ಡೈಆಕ್ಸೈಡ್ ಪ್ರಮಾಣ ಹೆಚ್ಚಾಗಿ ಮಾನವನ ಆರೋಗ್ಯದ ಮೇಲೆ ತೀವ್ರತರವಾದ ಪರಿಣಾಮವನ್ನು ನಗರಗಳಲ್ಲಿ ಬೀರುತ್ತವೆ ಚಿಕ್ಕ ಚಿಕ್ಕ ವಯಸ್ಸಿಗೆ ಹಲವಾರು ರೋಗಗಳು ಉಂಟಾಗುವುದನ್ನ ಕಾಣುತ್ತೇವೆ.

ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಸಮಸ್ಯೆಗಳು ಕಡಿಮೆ ಪ್ರಮಾಣದಲ್ಲಿರುವಂತಹುದನ್ನು ಕಾಣುತ್ತೇವೆ. ಬೂಟ್ ಪಾಲಿಶ್ ಮಾಡುವವರು, ಕಾರಿನ ಗಾಜು ಒರೆಸುವವರು ಭೆಲ್ ಪುರಿ ಆಮ್ಲೆಟ್ ಗಾಡಿಗಳಿಗೆ ಕೂಗಿ ಕರೆಯುವವರು ಇಲಿ ಪಾಷಣ ಮಾರುವವರು ಪೋಸ್ಟರ ಹಚ್ಚುವವನ ಏಣಿ ಹಿಡಿದವರು ಮುಂತಾದವರನ್ನು ಮುಂಬೈನಲ್ಲಿ ಕಾಣುತ್ತೇವೆ.

ವಿಜ್ಞಾನ ತಂತ್ರಜ್ಞಾನಗಳು ವರವು ಹೌದು ಶಾಪವು ಹೌದು ಎಂದು ಗೊತ್ತಿರುವಂತ ವಿಚಾರವೇ ಆಗಿದೆ ಬೇರೆ ದೇಶಗಳಿಗಿಂತ ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬೇಕು ಎಂದು

ಪ್ರತಿಯೊಂದು ದೇಶವು ಇಂದು ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಪ್ರಯತ್ನಿಸುತ್ತಿದೆ ನಗರ ಪ್ರದೇಶಗಳಲ್ಲಿ ವಿಜ್ಞಾನ ತಂತ್ರಜ್ಞಾನ ಮತ್ತು ತಂತ್ರಜ್ಞಾನ ಪಾತ್ರ ಅಪಾರವಾದುದಾಗಿದೆ. ತೆರೆದಷ್ಟೆ ಬಾಗಿಲು ಕಥಾ ಸಂಕಲನದ ಇದ್ದಾಗ ಇದ್ದಾಂಗ ಎಂಬ ಕಥೆಯಲ್ಲಿ ಒಂದು ಸೇತುವೆ ಬ್ರಿಜ್ ನಿರ್ಮಾಣವಾಗುವಾಗ ಬ್ರಿಜ್ ಆದದ್ದೇ ಗಿರಾಕಿಗಳೇ ಇರದೆ ಬೀಳಗಿಯ ಎಲ್ಲ ಚಾ ಅಂಗಡಿಗಳು ಕುಸಿದವು ಧಕ್ಕೆ ಬೋಳಾಯಿತು ಶೆರೆ ಅಂಗಡಿಯ ಕ್ಯಾಲೆಂಡರ್‌ಗಳು ಮಾಸಿದವು ಮೊದಲೇ ಹುಚ್ಚು ಹಿಡಿದಿದ್ದ ಶ್ರೀಧರ ಕಮ್ತೀರು ಒಂದು ದಿನ ಬ್ರಿಜ್ ನಿಂದ ಹಾರಿ ಸತ್ತದ್ದು ಒಂದು ಸಂಗತಿಯಾಯಿತು ತಂತ್ರಜ್ಞಾನದ ದೆಸೆಯಿಂದಾಗಿ ಜನ ಅನುಭವಿಸುವ ವೇದನೆಯನ್ನ ತಿಳಿಸಿಕೊಡುತ್ತದೆ.

ಆಗಿನ ಹಳೇ ಕೆಂಪು ರಸ್ತೆಗಳು ಮೈತುಂಬ ಹಚ್ಚ ಹಸಿರು ಹೊತ್ತುಕೊಂಡಿರುತ್ತಿದ್ದ ಪಾಗಾರಗಳು, ಕುಮಟೆ ತೇರು, ಮಾಂಶಿ, ಬಣ್ಣದ ಶರಬತ್ತು, ಭಜನೆ, ಡೋಲಕ, ಗುಮಟೆ ಪಾಂಗಿನ ಪದಗಳು ಮಳೆಗಾಲದಲ್ಲಿ ಕೆಂಪಾಗುತ್ತಿದ್ದ ನದಿ ನೀರು, ಅದರಲ್ಲಿ ತೇಲಿ ಬರುತ್ತಿದ್ದ ಸೌದೆಗಳು ಮನೆ ಆಳುಗಳು ಈ ನೆನಪುಗಳ ಹಿನ್ನಲೆಯಲ್ಲಿದ್ದಂತೆಯೆ ಬ್ರಿಜ್ ಬಂದೆ ಬಿಟ್ಟಿತು. ಇಂತಹ ಗ್ರಾಮ್ಯದ ವಾತಾವರಣ ಮರೆ ಆಗಿರುವುದನ್ನು ಕಾಣಬಹುದಾಗಿದೆ. ವಿಜ್ಞಾನ ತಂತ್ರಜ್ಞಾನದಿಂದಾಗಿ ಇಂದು ಗ್ರಾಮಗಳು ನಗರಗಳಾಗಿ ಪರಿವರ್ತನೆಯಾಗುತಿವೆ. ನಗರಗಳಲ್ಲಿ ವಿಜ್ಞಾನ ತಂತ್ರಜ್ಞಾನದ ಫಲವಾಗಿ ನೆಟ್‌ವರ್ಕ್‌ಗಳಿಂದಾಗಿ ಇಂದು ಹಲವಾರು ಕಾಯಿಲೆಗಳು ತಲೆದೊರುತ್ತಿವೆ. ಗುಬ್ಬಚ್ಚಿಯಂತಹ ಸಂತತಿಯನ್ನ ಕಳೆದುಕೊಳ್ಳುತ್ತಿರು–
–ವಂತಹುದು ವಿಷಾದದ ಸಂಗತಿಯಾಗಿದೆ

ಪ್ರೀತಿ ವಿಶ್ವಾಸ ಬಾಂಧವ್ಯಗಳ ನೆಲೆಯಲ್ಲಿ ಕಾಣುವಂತ ಜೀವನವನ್ನು ಆಥಿಕತೆ, ಹಣಕಾಸಿನ ದೃಷ್ಟಿಯಿಂದ ತನ್ನ ಬಳಿ ಹಣವಿಲ್ಲದಿದ್ದರೂ ತಾನೇ ಆಸ್ಪತ್ರೆಯ ಹಣವನ್ನು ಪಾವತಿಸುತ್ತೇನೆ ಎಂದು ಹೇಳಿ ದುಡ್ಡು ಕೊಟ್ಟ ತಕ್ಷಣ ತೆಗೆದುಕೊಳ್ಳುವುದು ಪಾರ್ಟನರ್ ಕಥೆಯಲ್ಲಿ ರೂಪಕ್ ರಾಠೋಡ್ ಮತ್ತು ಅವನ ಸ್ನೇಹಿತನ ಸಂಬಂಧದಲ್ಲಿ ಕಾಣಬಹುದಾಗಿದೆ. ಅಂದರೆ ದುಡ್ಡು ಎಂಬುದು ಜೀವನದಲ್ಲಿ ಅವಶ್ಯಕ ಎಂಬುದು ಕಥೆಯ ಮೂಲಕ ನೋಡಬಹುದು. ರೂಪಕ್ ರಾಥೋಡ್ ಬಳಿ ಹಣವಿದ್ದಿರೆ ಪಾರ್ಟನರ್ ನೀಡಿದ

ತಕ್ಷಣ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಅವನ ಬಳಿಯೂ ಸಹ ಹಣವಿರಲಿಲ್ಲ ಆದರು ನಾನೇ ಕೊಡುತ್ತೇನೆ ಎಂದು ಹೇಳುವಂತ ಧಿಮಂತ ತನವನ್ನ ಮೆಚ್ಚುವಂತಹುದು.

ವಿಜ್ಞಾನ ತಂತ್ರಜ್ಞಾನದ ಫಲವಾಗಿ ನಗರಗಳಲ್ಲಿ ಆಗುವಂತ ಪರಿಸ್ಥಿತಿಯನ್ನ ಚಾರ್ ಮಿನಾರ್ ಕಥೆಯಲ್ಲಿ ಕಾಣುತ್ತೇವೆ. "ನಾನು ಹೇಮಚಂದ್ರನ ದೋಸ್ತ ವರಪಕ್ಷದವನಾಗಿ ಅತಿಥಿಗಳನ್ನು ಬರಮಾಡಿಕೊಳ್ಳಬೇಕು" ಎಂಬ ಆವೇಶದಿಂದ ಹೈದ್ರಾಬಾದಿನ ಇಂಬ್ಲಿಬನ್ ಸ್ಟ್ಯಾಂಡಿನಲ್ಲಿಳಿದ ನೈಋತ್ಯ ಸಮೀಪದ ಲಾಡ್ಜ್ ಒಂದರಲ್ಲಿ ರೂಮು ಹಿಡಿದು ಸ್ನಾನ ಮುಗಿಸಿ ಕಲ್ಯಾಣ ಮಂಟಪಕ್ಕೆ ಶರವೇಗದಲ್ಲಿ ಧಾವಿಸಿದೆ ಆದರೆ ಅವನ ಉಮೇದಿಯೆಲ್ಲ ಮಂಟಪಕ್ಕೆ ಶರವೇಗದಲ್ಲಿ ಧಾವಿಸಿದ. ಆದರೆ ಅವನ ಉಮೇದಿಯಲ್ಲ ಮಂಟಪದ ಬಾಗಿಲಲ್ಲಿ ಯಾಂತ್ರೀಕೃತವಾಗಿ ಕೈಮುಗಿಯುತ್ತಿರುವುದನ್ನ ಈ ಗೊಂಬೆಗಳು ಎದುರು ಜನ ಬರದಿದ್ದಾಗಲು ಕೈಮುಗಿಯುವಾಗ ಯಂತ್ರದ ವಿಚಿತ್ರ ಆವಾಜು ಬೇರೆ ಬರುತ್ತಿತ್ತು "ಇವ ನನ್ನ ಸಹಪಾಠಿಗೆಳೆಯ ಎಂದು ಹೇಮಚಂದ್ರ ತನ್ನನ್ನು ಪರಿಚಯಿಸುತ್ತ ಇದ್ದರೂ, ತಾನು ಸೋಕಲಾರದ ಬೇರೊಂದೇ ಪ್ರಪಂಚದಲ್ಲಿ ಅವನು ಪ್ರಜೆಯಾಗಿದ್ದಾನೆ ಎಂದು ನೈಋತ್ಯನಿಗೆ ಭಾಸವಾಯಿತು.

ಅಷ್ಟೊಂದು ಆಸೆ, ಆಕಾಂಕ್ಷೆಗಳನ್ನು ಹೊತ್ತ ನೈಋತ್ಯ ತನ್ನ ಗೆಳೆಯ ಹೇಮಚಂದ್ರನ ಮದುವೆಯಲ್ಲಿ ತಾನು ಗಂಡಿನ ಕಡೆಯವನು ಎಂದು ಎಲ್ಲರಿಗೂ ಸ್ವಾಗತ ಕೋರಬೇಕೆಂದು ಬಂದಾಗ ಗೊಂಬೆಯೇ ಆ ಕೆಲಸವನ್ನ ಮಾಡುವುದನ್ನು ಕಂಡ ನೈಋತ್ಯನಿಗೆ ದಿಗ್ಭ್ರಮೆಯಾಯಿತು. ವಿಜ್ಞಾನ ತಂತ್ರಜ್ಞಾನದ ಫಲವಾಗಿ ಇಂದು ಯಂತ್ರಗಳು ಮಾಡುವುದರಿಂದ ಸಹಜವಾಗಿಯೇ ಮನುಷ್ಯನ ಪ್ರೀತಿ ವಿಶ್ವಾಸಗಳು ಕಡಿಮೆಯಾಗುವುದನ್ನು ಕಾಣಬಹುದಾಗಿದೆ.

ಸಾಮಾಜಿಕ ನೆಲೆಗಟ್ಟಿನಿಂದ ನೋಡುವುದಾದರೆ ಸಮಸ್ಯೆಗಳು ಚಿಕ್ಕಮಕ್ಕಳು ನಗರ ಪ್ರದೇಶಗಳಲ್ಲಿ ಮನೆಯಿಂದ ಹೊರ ಬರುತ್ತೆವೆ. ಹಾಗೇಯೆ ಹೊರ ಬಂದ ಮಕ್ಕಳು ನೋಡುವವರ ಕಣ್ಣಿಗೆ ಅನಾಥ ಮಕ್ಕಳಂತೆ ಕಾಣುತ್ತಾರೆ. ಅವರು ಮಧ್ಯಮ ವರ್ಗದ ಕುಟುಂಬದವರಾಗಿರುತ್ತಾರೆ. ಇಂತಹ ಸಮಸ್ಯೆಯನ್ನು ನಾವು ಚಾರ್ ಮಿನಾರ್ ಕಥೆಯಲ್ಲಿ ಕಾಣಬಹುದಾಗಿದೆ. ರೈಲು ತುಂಬ, ಕಸಗುಡಿಸಿ ನಂತರ ಕೆದಕಿ ಕೆದಕಿ ಮಾತಿಲ್ಲದೆ ಹಣ

ಯಾಚಿಸುವವರು ಎರಡು ಪುಟಾಣಿ ಕಲ್ಲು ಚಪ್ಪಡಿಗಳನ್ನು ಬೆರಳಲ್ಲಿ ಸಿಗಿಸಿಕೊಂಡು ಕಿಟಿ ಕಿಟಿ ಎಂದು ಆ ಪರಶಿವನು ನಾಚುವಂತ ಅಲೌಕಿಕ ಲಯವಾದ್ಯವನ್ನ ನುಡಿಸುತ್ತ ಹೊಚ್ಚ ಹೊಸ ಹಿಂದಿ ಸಿನಿಮಾ ಹಾಡನ್ನು ಜನಪದಗೊಳಿಸುವವರು ಎಷ್ಟೆ ಬೇಡವೆಂದರು ನಿಮ್ಮ ಶಿಷ್ಟ ಅಡೆ-ತಡೆಗಳನ್ನ ಮೀರಿ ನಿಮ್ಮನ್ನು ನಿಶ್ಯಸ್ತ್ರಗೊಳಿಸಿ ನಿಮ್ಮ ಬೂಟು ಚಪ್ಪಲಿ ಇಸಕೊಂಡು ತಲೆ ಕುಣಿಸುತ್ತ ತನ್ಮಯರಾಗಿ ನಾಲಿಗೆ ಕಚ್ಚಿ ಪಾಲೀಶು ಮಾಡುವವರು.

ನಗರ ಪ್ರದೇಶಗಳ ಮಕ್ಕಳು ಈ ರೀತಿಯಾಗಿ ಬಂದು ಕೆಲಸ ಮಾಡುವ ಪ್ರಮೇಯ ಏನಿದೆ ಕೊಳಚೆ/ಸ್ಲಂ ಪ್ರದೇಶಗಳಲ್ಲಿ ಆದರೆ ಈ ಪ್ರಮೇಯ, ಪರಿಸ್ಥಿತಿ ಇರಬಹುದು ಅಂದರೆ ಅವರು ಮಧ್ಯಮವರ್ಗದ ಶಿಕ್ಷಕರು ವ್ಯಾಪಾರಿಗಳು ಇಂತಹವರ ಮಕ್ಕಳು ವಯಸ್ಸಾದವರು ದುಡಿದು ಬಂದು ಜೀವನ ಸಾಗಿಸುವವರು ತಮ್ಮ ಮಕ್ಕಳನ್ನು ನೋಡಿಕೊಳ್ಳುವರು ಆ ಮಕ್ಕಳು ಮಜ್ಜಿಗೆ ತಿಂಡಿ, ಹಣ್ಣುಗಳನ್ನು ಮಾರಿ ಜೀವನ ನಡೆಸುವಂತಹ. ಅಗತ್ಯತೆ ಎಂಬುದು ಇರಲಿಲ್ಲ ಆದರು ಅಂತಹ ವ್ಯವಸ್ಥೆಯನ್ನು ಕಾಣುತ್ತೇವೆ. ಇಂತಹ ಸಮಸ್ಯೆಗಳಿಗೆ ನೈಋತ್ಯ ಎಂಬ ಯುವಕ ಆ ಮಕ್ಕಳಿಗಾಗಿಯೇ ತನ್ನ ಇಡೀ ಜೀವನವನ್ನು ಮುಡುಪಾಗಿ ಇಟ್ಟವನು ಅದಕ್ಕೆ ಆತನ ಹೆಂಡತಿ ಪುನರ್ವಸು ಕೂಡ ಸ್ಪಂದಿಸಿದಳು. ಹೈದರಾಬಾದಿನಿಂದ ಬರುವಾಗ ನೋಡಿದ ಈ ಮಕ್ಕಳ ಮನಕರಗುವಂತ ದೃಶ್ಯ ಒಬ್ಬ ಪ್ರತಿಭಾವಂತನನ್ನು ಅಲುಗಾಡಿಸುತ್ತದೆ.

ಭಾರತ ಮುಂದುವರೆಯುತ್ತಿರುವ ದೇಶ, ಅನಕ್ಷರತೆ, ಬಾಲಕಾರ್ಮಿಕತೆ, ಅಜ್ಞಾನ ಬಡತನ ಕಡಿಮೆಯಾಗುತ್ತಿರುವ ದೇಶ ಎಂದು ನಾವು ಸ್ಪಷ್ಟಪಡಿಸಿಕೊಳ್ಳುತ್ತಿರುವಂತ ಇಂತಹ ಚಿಕ್ಕ-ಚಿಕ್ಕ ಮಕ್ಕಳು ಚಿಕ್ಕ ವಯಸ್ಸಿಗೆ ಮನೆ ಬಿಟ್ಟು ಬಂದು ಹೊರಗಡೆ ಇದ್ದು ಇಂತಹ ಚಿಕ್ಕ ವಯಸ್ಸಿನಲ್ಲಿ ಕೆಲಸಮಾಡುವುದನ್ನು ನೋಡಿದರೆ ಹೃದಯ ಕಲಕುತ್ತದೆ, ನೈಋತ್ಯ ಈ ರೈಲು ಮಕ್ಕಳ ಲೋಕವನ್ನು ತಿಳಿದು ಅದನ್ನು ತುಸುವಾದರೂ ಹಸನುಗೊಳಿಸಲು ಪ್ರಯತ್ನವಾಗಿದೆ. ಹಿಂದೂ ಪುರ ತೋರಣಗಲ್ಲು ಧರ್ಮಾವರಂ, ಬಳ್ಳಾರಿ ಇತ್ಯಾದಿ ಊರುಗಳಲ್ಲಿ ಮನೆಬಿಟ್ಟು ಓಡಿ ಹೋದ ಮಕ್ಕಳ ಮಾಹಿತಿಗಳನ್ನು ಆಯಾ ಊರಿನ ಪೋಲೀಸ್ ಸ್ಟೇಷನ್ ಗಳಿಂದ ಕಲೆ ಹಾಕುವುದು ಮನೆ ಮಂದಿಯನ ಸಂಪರ್ಕಿಸುವುದು ಮತ್ತು ಇನ್ನೊಂದೆಡೆಯಿಂದ ರೈಲುಗಳಲ್ಲಿ ಪ್ಲಾಟ್ ಫಾರ್ಮುಗಳಲ್ಲಿ ಸಿಕ್ಕಿದ ಹುಡುಗರ

ಮನಗೆದ್ದು ಅವರನ ತಲುಪಿಸುವುದು ನೈಋತ್ಯ ಕೆಲಸ ಶುರುವಾಯಿತು ಅಲ್ಲಿ ಅವನಿಗೆ ಕಾದಿದ್ದ ಮೊದಲ, ಅಚ್ಚರಿ ಎಂದರೆ ಈ ರೈಲು ಮಕ್ಕಳಲ್ಲಿ ಅತ್ಯಂತ ದುಸ್ಥಿತಿಯ ಕೊಳಗೇರಿಯಿಂದ ಬಂದ ಊಹೆ ಹೆಚ್ಚನಾಂಶ ಸುಳ್ಳಾಗಿತ್ತು.

ಮಧ್ಯಮ, ಕೆಳಮಧ್ಯಮ ವರ್ಗದ ಮಕ್ಕಳೇ ಹೆಚ್ಚಾಗಿದ್ದರು ಶಿಕ್ಷಕರು, ಸರ್ಕಾರಿ ಗುಮಾಸ್ತರು, ಬ್ಯಾಂಕ್, ಕೆಲಸಗಾರರು, ಪೊಲೀಸರು, ಕಿರಾಣಿ ಅಂಗಡಿಯವರು, ಇಂತವರೆಲ್ಲರ ಮಕ್ಕಳು ಬೊರ್ ಎಂದು ಹಾಯುವ ಲೋಹದ ರೈಲಿನ ಚುಂಬಕ ಗಾಳಿಗೆ ತರಗೆಲೆಗಳಂತೆ ಸೆಳೆಯಲ್ಪಡುತ್ತಿದ್ದರು. ಇಂತಹವರನ್ನು ಗುರುತಿಸಿ ಅವರ ಮನವೊಲಿಸಲು ಯತ್ನಿಸುತ್ತಿದ್ದರು. ಇಂತಹ ಮಕ್ಕಳಿಗಾಗಿ ನೈಋತ್ಯನ ಗೆಳೆಯ ಹೇಮಚಂದ್ರ ಫೋನು ಮಾಡಿ “ನಿಮ್ಮ ಕೇಂದ್ರಕ್ಕೆ ನನ್ನ ವತಿಯಿಂದ ಕರಿ ಹಲಗೆ, ಬೆಂಚು, ಡೆಸ್ಕು, ನೀರಿನ ಡ್ರಮ್ಮು, ವಾಲಿಬಾಲ್, ಸಾಧ್ಯವಾದರೆ ಒಂದು ಕಂಪ್ಯೂಟರ್ ಕೊಡುತ್ತೇನೆ” ಎಂದನು. ಅಲ್ಲಿನ ಮಕ್ಕಳ ಸಮಸ್ಯೆಗೆ ಪರಿಹಾರವನ್ನು ಕಾಣಬಹುದಾಗಿದೆ. ಸ್ಯೆಗಳನ್ನು ಕಾಣುತ್ತೇವೆ. ಅವುಗಳನ್ನು ಗುರುತಿಸಿ ಪರಿಹಾರ ಒದಗಿಸುವುದು ಪ್ರಮುಖವಾಗಿವೆ. ಬಡತನ, ಅನಕ್ಷರತೆ, ಅಜ್ಞಾನ, ಬಾಲ್ಯವಿವಾಹ, ಮೊದಲಾದ ಸಮಸ್ಯೆಗಳು ಸಮಾಜದಲ್ಲಿ ಬೇರುಬಿಟ್ಟು ಆಳವಾಗಿ ಬೇರೂರುವ ಮೊದಲೇ ಅವನ್ನು ಸಮಾಜದಿಂದ ಸಮಸ್ಯೆಗಳೆಂದು ಪರಿಗಣಿಸದೆ ಕಿತ್ತು ಹಾಕಬೇಕಾಗಿದೆ. ಇಂತಹ ಸಮಸ್ಯೆಗಳು ಇಲ್ಲವಾದರೆ ಮಾತ್ರ, ದೇಶ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಲು ಸಾಧ್ಯವಾಗುವಂತಹುದು. ಇಲ್ಲವಾದರೆ ಸಮಸ್ಯೆಗಳು ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲು ತೊಂದರೆಯ್ನುಂಟು ಮಾಡುತ್ತವೆ. ಹೈದರಾಬಾದ್, ಮುಂಬೈ, ಬೆಂಗಳೂರು, ದೆಹಲಿ, ಭಾರತದಂತಹ ಪ್ರಮುಖ ನಗರಗಳಲ್ಲಿ ಈ ವಯಸ್ಸಿನಲ್ಲಿ ಮಕ್ಕಳು ಈ ರೀತಿಯ ಕೆಲಸಕ್ಕೆ ತಮ್ಮನ್ನು ತೊಡಗಿಸಿಕೊಂಡರೆ ಮಾನವ ಸಂಪನ್ಮೂಲ ಪ್ರಮಾಣ ಕಡಿಮೆಯಾಗುವುದನ್ನು ಕಾಣುತ್ತೇವೆ.

ಜಾಗತೀಕರಣ

೧೯೯೦ರ ದಶಕದಲ್ಲಿ ಬಂದ ಜಾಗತೀಕರಣ ಖಾಸಗೀಕರಣ, ಉದಾರೀಕರಣಗಳು, ಮಾನವನ ವಿಕಾಸದ ದಿಕ್ಕನ್ನೇ ಬದಲಾಯಿಸಿದವು. ದೇಶವು ಅಭಿವೃದ್ಧಿಯ ಪಥದತ್ತ ಮುನ್ನುಗ್ಗಲು ತುಂಬಾ ಸಹಕಾರಿಯಾದವುಗಳಾಗಿವೆ. ದೇಶದ ಅರ್ಥವ್ಯವಸ್ಥೆಯಲ್ಲಿಯೂ ಬದಲಾವಣೆಗಳು ಉಂಟಾದವು. ಜಾಗತೀಕರಣದಿಂದಾಗಿ ನಾವು ಬಂಡವಾಳ, ಸೇವೆಗಳು, ಮಾಹಿತಿ, ತಂತ್ರಜ್ಞಾನ, ಅಂತರಾಷ್ಟ್ರೀಯ ಮಟ್ಟದಲ್ಲಿ ಪಡೆದುಕೊಳ್ಳುವಂತಹುದಾಗಿದೆ. ಕೆಲವೊಮ್ಮೆ ಸಂಸ್ಕೃತಿಗಳನ್ನು, ಆಚಾರ ವಿಚಾರಗಳನ್ನು, ಅನುಸರಿಸುತ್ತೇವೆ. ಅಂತರ್ಜಾಲ ಮತ್ತು ಮೊಬೈಲ್‌ಗಳ ಬಳಕೆಯನ್ನು ಅತ್ಯುನ್ನತ ಮಟ್ಟದಲ್ಲಿ ಕಾಣುತ್ತೇವೆ.

ಜಾಗತೀಕರಣದಿಂದ ದೇಶ ಒಂದೆಡೆ ಅತ್ಯುನ್ನತ ಮಟ್ಟದಿಂದ ಅಭಿವೃದ್ಧಿ ಪಥದತ್ತ ಮುನ್ನಡೆದರೆ, ಮತ್ತೊಂದು ಕಡೆ ಸಮಸ್ಯೆಗಳನ್ನು ಕಾಣುತ್ತೇವೆ. ಜಾಗತೀಕರಣ ವ್ಯವಸ್ಥೆಯು ಮೂರು ಮುಖ್ಯ ವ್ಯವಸ್ಥೆಗಳನ್ನು ಒಳಗೊಂಡಿದೆ, ಆರ್ಥಿಕ ಜಾಗತೀಕರಣ, (Economic Globalization) ಸಂಸ್ಕೃತಿ ಜಾಗತೀಕರಣ (Cultural Globalization) ರಾಜಕೀಯ ಜಾಗತೀಕರಣ (political Globalization) ಇವುಗಳನ್ನ ಅಂತರಾಷ್ಟ್ರೀಯ ಮಟ್ಟದಲ್ಲಿ ಕಾಣುತ್ತೇವೆ. ಇಡೀ ವಿಶ್ವವನ್ನೇ ಒಂದೆಡೆ ತರುತ್ತವೆ. ಅಂಗೈಯಲ್ಲಿ ಇಡೀ ವಿಶ್ವವನ್ನೇ ಕಾಣುತ್ತೇವೆ. ಮನೆಯಲ್ಲಿ ಕುಳಿತು, ಇಡೀ ಪ್ರಪಂಚದ ಆಗು ಹೋಗುಗಳನ್ನು ಅವಲೋಕಿಸಬಹುದು. ಜಾಗತೀಕರಣದಿಂದಾಗಿ, ನಗರ ಪ್ರದೇಶಗಳು, ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತವೆ. ಅದೇ ರೀತಿಯಾಗಿ ಅನೇಕ ಸಮಸ್ಯೆಗಳನ್ನು ಕಾಣುತ್ತೇವೆ. ವಿಕಾಸವೂ ಹೌದು, ವಿನಾಶವೂ ಹೌದು ಎಂಬಂತೆ ಮನೆ ಮಾಡಿರುವುದನ್ನು ಕಾಣುತ್ತೇವೆ. ಪ್ರಗತಿಪರ ಧೋರಣೆಯನ್ನು ಅನುಸರಿಸಬಹುದಾಗಿದೆ.

ಜಾಗತೀಕರಣದಿಂದಾಗಿ ಸಾಮಾನ್ಯ ಮನುಷ್ಯನು ಚಿಕ್ಕ ವಯಸ್ಸಿಗೆ ಅನಾರೋಗ್ಯಕ್ಕೆ ತುತ್ತಾಗುವುದು ಕಂಡು ಬರುತ್ತದೆ. ನೆಟ್ ವರ್ಕ್‌ಗಳಿಂದ ಮನುಷ್ಯನ ಮೆದುಳಿನ ಮೇಲೆ ತೀವ್ರತರವಾದ ಪರಿಣಾಮ ಬೀರುತ್ತವೆ. ಗುಬ್ಬಚ್ಚಿಯಂತಹ ಪಕ್ಷಿಗಳನ್ನು ಕಾಣುವುದು ತುಂಬಾ ವಿರಳವಾಗಿದೆ. ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುವುದರಿಂದ

ಕಡಿಮೆ ಬೆಲೆಗೆ ಸಿಗುವುದರಿಂದ, ಉತ್ಕೃಷ್ಟತೆಯ ಪ್ರಮಾಣ ಕಡಿಮೆ ಇರುವುದರಿಂದ, ತೀವ್ರತರವಾದಂತ ಪರಿಣಾಮವನ್ನು ಕಾಣಬಹುದಾಗಿದೆ. ಇಂದಿನ ಬೆಳೆಯುತ್ತಿರುವಂತಹ ಮಕ್ಕಳು ಹೆಚ್ಚಾಗಿ ಜಾಗತೀಕರಣಕ್ಕೆ ಒಳಗಾಗುವುದನ್ನು ಕಾಣುತ್ತೇವೆ.

ಆಧುನಿಕತೆ, ಆವಿಷ್ಕಾರ, ವಿಜ್ಞಾನ, ತಂತ್ರಜ್ಞಾನ ಒಂದೆಡೆಯಾದರೆ, ಅವುಗಳಿಂದ ಸಮಸ್ಯೆಗಳನ್ನು ಸಹ ಅನುಭವಿಸುತ್ತಿದ್ದೇವೆ. ದೆಹಲಿ, ಮುಂಬೈ, ಬೆಂಗಳೂರು, ಹೈದರಾಬಾದ್, ಮುಂತಾದ ನಗರಗಳು ವಾಸಿಸಲು ಯೋಗ್ಯವಾಗಬೇಕದರೆ ಮಾನವನಿಗೆ ಉತ್ತಮ ಸೌಲಭ್ಯ ಒದಗಿಸಬಲ್ಲ ಸೌಕರ್ಯಗಳ ವ್ಯವಸ್ಥೆಯೂ ಇರಬೇಕು. ಆಗ ಎಲ್ಲರೂ ನಗರಗಳತ್ತ ವಲಸೆ ಬರುವುದನ್ನು ಕಾಣುತ್ತೇವೆ. ಇಂಟರ್‌ನೆಟ್, ಮೊಬೈಲ್ ಫೋನ್‌ಗಳ ವ್ಯವಸ್ಥೆಯಿಂದಾಗಿ ಅನುಕೂಲಗಳಿದ್ದರೂ, ಅನಾನುಕೂಲಗಳು ಇರುವುತಂಹುದು ಕಂಡು ಬರುತ್ತದೆ. ತೆರೆದಷ್ಟೇ ಬಾಗಿಲು , ಕಥಾ ಸಂಕಲನದ 'ಇದ್ದಾಗ ಇದ್ದಾಂಗ' ಕಥೆಯಲ್ಲಿ ಬರುವ ಪಬ್ಬೂ, ಪ್ರಭಾಕರ ದಂಡೂ ಹರಿಕಾಂತ ಬಾಂಬೆಯಲ್ಲಿದ್ದವನು. ಮತ್ತೆ ಊರಿಗೆ ಬಂದು ಬ್ರಿಡ್ಜ್ ಕೆಲಸದಲ್ಲಿ ಸಿಮೆಂಟ್ ಕೆಲಸಕ್ಕೆ ಸೇರಿದವನು. ಆದರೆ ಅವನಲ್ಲಿರುವಂತಹ ಕೆಲವು ಪ್ರವೃತ್ತಿಗಳು ಅವನನ್ನು ಒಬ್ಬ ಸಮಾಜ ವಂಚಿತನನ್ನಾಗಿ ಮಾಡಿತ್ತು. ಅಂತರ್ಜಾಲದಲ್ಲಿ ಬರುವ ಕೆಲವು ನಕಾರಾತ್ಮಕದ ವಿಷಯಗಳ ಫಲವಾಗಿ ಅಥವಾ ಬಾಂಬೆಯಂತಹ ಮುಂದುವರೆದ ನಗರಗಳಲ್ಲಿ ಇರಬಹುದಾದ ಹುಡುಗಿಯರ ಮಾರಾಟ, ಇದರಿಂದ ದುಡ್ಡು ಮಾಡಬಹುದು, ಜೀವನದಲ್ಲಿ ಚೆನ್ನಾಗಿರಬಹುದೆಂದು ಬಹು ಉತ್ಸುಕನಾಗಿದ್ದವನು. ಆದರೆ ಅಂತಹ ಅಂಶಗಳು ಗ್ರಾಮೀಣ ಪ್ರದೇಶದಲ್ಲಿ ಕಡಿಮೆ. ಪಬ್ಬು, ಆನಂದನಿಗೆ ಹೇಳುವಂತಹ ಮಾತುಗಳಿಂದ ತಿಳಿದುಬರುವಂತಹುಗಳಾಗಿವೆ. "ನಾನು ನಾಳೆಯೇ ಊರು ಬಿಟ್ಟು ಹೋಗುವ ಪ್ಲಾನ್ ಮಾಡಿದ್ದೇನೆ. ನನಗೆ 500 ರೂಪಾಯಿ ಬೇಕು. ತಿರುಗಿ ಬೊಂಬಾಯಿಗೆ ಹೋಗುತ್ತೇನೆ. ಒಬ್ಬನೇ ಅಲ್ಲ, ಇಲ್ಲಿಯ ಸುಮಾರು 8–10 ಹುಡುಗಿಯರನ್ನ ತೆಗೆದುಕೊಂಡು ಹೋಗುತ್ತೇನೆ. ಅಲ್ಲಿ ಅವರನ್ನು ಮಾರುತ್ತೇನೆ. ಇಲ್ಲಿಗಿಂತ ಚಲೋದಾಗಿ ಅವರಲ್ಲಿ ಇರುತ್ತಾರೆ. ನಾನೂ ಬದುಕುತ್ತೇನೆ".

ಈ ರೀತಿಯಾಗಿ ಹೇಳಿರುವಂತಹ ಪಬ್ಬುವಿನ ಮೂಲಧೋರಣೆ, ನಗರ ಪ್ರದೇಶವು ಯುವ ಜನಾಂಗವನ್ನು ಆಕರ್ಷಣೆಗೆ ಒಳಪಡಿಸಿರುವುದು ಹೆಣ್ಣು ಮಕ್ಕಳನ್ನು ದಾರಿ ತಪ್ಪಿಸುವಂತಿರುವುದನ್ನು ಕಾಣಬಹುದಾಗಿದೆ. ಬದುಕಿನ ವಿವಿಧ ಹಂತಗಳಲ್ಲಿ ಮನುಷ್ಯನ ಮೂಲತಃ ಪ್ರವೃತ್ತಿ ಎಂತಹದು, ಅವನನ್ನ ಯಾವ ಮಟ್ಟಕ್ಕೆ ಇಳಿಸುತ್ತದೆ ಎಂಬುದು ವ್ಯಕ್ತವಾಗುತ್ತದೆ.

ಗಾಡಿ ವೆಂಕಟರಮಣನ ಮಗಳು ಸಿಂಗಾರಿ, ಶ್ರೀಧರ ಕಮ್ತೀರ ಮಗಳು ಸರೋಜ ಕೂಡಾ ನಾಪತ್ತೆಯಾದವರಲ್ಲಿ ಇದ್ದದ್ದು ತುಂಬಾ ಕಳವಳವನ್ನುಂಟು ಮಾಡಿತ್ತು. ಅಂತಹ ಮಕ್ಕಳನ್ನ ಬಾಂಬೆಗೆ ಒಯ್ಯುವಂತಹ ಕೆಲಸವನ್ನು ಮಾಡಿದ್ದ ವಸುದೇಂದ್ರ ರವರ "ಯುಗಾದಿ" ಕಥೆಯಲ್ಲಿಯೂ ಇಂತಹ ವ್ಯವಸ್ಥೆ, ಅಂದರೆ ಹೊರದೇಶಗಳ ಕಂಪನಿಗಳಲ್ಲಿ ಕೆಲಸ ಮಾಡುವ ಪ್ರಹ್ಲಾದ ತಂದೆ ಗೋಪಣ್ಣ ಮಾಸ್ತರರನ್ನು ತನ್ನ ಸಂಬಳಕ್ಕಿಂತ ಕಡಿಮೆ ಸಂಬಳ ಪಡಿಯುವವರೆಂದು ಹಾಗೂ ಅವರಿಗಿಂತ ತಾನು ಮೇಲೆ ಎಂದು ಗುರುತಿಸಿಕೊಳ್ಳುವಂತ ವಿಚಾರ ಜಾಗತೀಕರಣದ ಫಲವಾಗಿ ಸ್ಥಳೀಯತೆಗಳಿಗೆ ಮಹತ್ವ ಕಡಿಮೆಯಾಗುತ್ತಿರುವುದು ವಿದೇಶೀ ತಂತ್ರಜ್ಞಾನ ಆಚರಣೆ, ಅನುಕರಣೆಗಳು ಹೆಚ್ಚಾಗುತ್ತಿರುವುದು ಕಂಡು ಬರುತ್ತವೆ. ಯುವ ಜನಾಂಗ, ವಿದೇಶೀ ಪದ್ಧತಿಯ ಮೋಜು ಮಸ್ತಿಗಳ ಹಿಂದೆ ಬಿದ್ದು, ಪ್ರಾದೇಶಿಕತೆಯನ್ನು ಕಡೆಗಣಿಸಿ, ಕೊನೆಗೆ ಸ್ಥಳೀಯ ಸಂಸ್ಕೃತಿಯ ಮಹತ್ವದ ಅರಿವಾಗುತ್ತದೆ. ಕಾರಿನಲ್ಲಿ ವಾಪಸ್ಸು ಮನೆಗೆ ಹೋಗುವಾಗ ಪ್ರಹ್ಲಾದ ಮಾತನಾಡಿಸಿದ ರೀತಿ ಆಗಿತ್ತು "ಅಪ್ಪ, ರಾಧಾಳಂತಹ ವ್ಯಕ್ತಿ ನನ್ನ ಜೀವನದಲ್ಲಿ ಖಂಡಿತ ಸಿಗಂಗಿಲ್ಲ ಅನಿಸ್ತದೆ. ಹಗಲು ರಾತ್ರಿ, ಖಬರಿಲ್ಲದಂತೆ ದುಡಿಮೆ ಮಾಡಿ ಯಾರೋ ಅಮೆರಿಕಾದವರು ಉಪಯೋಗಿಸುವಂತಹ ಸಾಫ್ಟ್‌ವೇರ್ ಕಂಪನಿಗೆ ಬರ್ತೀವಿ. ಅವರಿಗೆ ನಾವ್ಯಾರೋ ಗೊತ್ತಿಲ್ಲ, ನಮಗೆ ಅವರ್ಯಾರೋ ಗೊತ್ತಿಲ್ಲ, ಇಬ್ಬರಿಗೋ ಗೊತ್ತಿರೋದು ಆ ಕೆಲಸಕ್ಕೆ ನಿಗಧಿಯಾಗಿರೋ ಬಡ್ಜೆಟ್ ಮಾತ್ರ" ಎಂದು ರಾಧಾ ಎಂಬ ನರ್ಸನ್ನು ನೆನೆಯುವಾಗ ಜೀವನ ಸಾರ್ಥಕತೆಯನ್ನು ಪಡೆಯುವುದನ್ನು ಕಾಣುತ್ತೇವೆ. ಬದುಕಿನ ವಿಪರ್ಯಾಸದ ಹಂತಗಳು ಅನುಕರಣೆ ಅಭೂತ ಪೂರ್ವತೆಯನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ.

ಜಾಗತೀಕರಣದ ಫಲವಾಗಿ ದೇಶದ ಖಾದ್ಯ ತಯಾರಿಕಾ ಕಂಪನಿಗಳು, ಹೋಟೆಲ್‌ಗಳು ಧಾಳಿಯಿಡುತ್ತವೆ. ಪ್ರಾಣಿಗಳ ಮಾಂಸ ಹೆಚ್ಚು ರುಚಿಕರವಾಗಿರಲೆಂದು ಮತ್ತು ದಿಡೀರ್ ಉಬ್ಬಿಕೊಂಡು ಬೆಳೆಯಲೆಂದು ಅಪಾಯಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತಿರುವ ಅಂಶ ಕಂಡುಬರುತ್ತದೆ. ಇಂತಹ ಪ್ರಾಣಿಗಳನ್ನು ತಿನ್ನುವುದರಿಂದ ಕರುಳಿನ ಕ್ಯಾನ್ಸರ್, ಜ್ವರ, ಮಕ್ಕಳು ಮತ್ತು ವಯಸ್ಕರಲ್ಲಿ ಲೈಂಗಿಕ ಬದಲಾವಣೆಗಳು, ನಪಂಸುಕತ್ವ, ಮಕ್ಕಳ ಅಕಾಲಿಕ ಹರೆಯ ಬರುವಿಕೆ, ಮೊದಲಾದ ಸಮಸ್ಯೆಗಳನ್ನು

ಕಾಣಬಹುದಾಗಿದೆ. ಮಾಂಸ ಬೇಯುವ ಶಾಖದ ಪ್ರಮಾಣಕ್ಕೆ ಈ ರಾಸಾಯನಿಕಗಳು ಮನುಷ್ಯನ ದೇಹ ಸೇರುತ್ತವೆ. ಅಮೇರಿಕನ್ನರು ಇಂತಹ ಹೋಟೆಲ್‌ಗಳನ್ನು ಜಂಕ್ ಫುಡ್ ಎಂದು ಹೀಯಾಳಿಸಲಾರಂಭಿಸಿದರು.

ಆಧುನಿಕ ಕಾಲದಲ್ಲಿ ನಗರ ಬದುಕು ಎಂಬುದು ಪ್ರತಿಯೊಬ್ಬರನ್ನು ಆಕರ್ಷಿಸುತ್ತದೆ. ಅಲ್ಲಿನ ಸೌಲಭ್ಯಗಳು, ನಗರೀಕರಣ ಮೊದಲಾದವು, ಆಕರ್ಷಣೆಗೆ ಒಳಪಡಿಸುತ್ತವೆ. ರಾಜಕೀಯ, ಸಾಮಾಜಿಕ, ಆರ್ಥಿಕ, ವಿಜ್ಞಾನ, ತಂತ್ರಜ್ಞಾನ, ಜಾಗತೀಕರಣ, ಇವುಗಳ ಹಿನ್ನೆಲೆಯಲ್ಲಿ ನೋಡಿದಾಗ ಸಮಸ್ಯೆಗಳಿದ್ದರೂ ಸಹ ಅಭಿವೃದ್ಧಿಯ ಪಥದತ್ತ ಮುಂದುವರಿಯಬೇಕಾದರೆ, ನಗರ ಜೀವನ ಅವಶ್ಯಕವೆಂದು ತಿಳಿದುಬರುತ್ತದೆ.

*****

ಅಧ್ಯಾಯ–5

ಅಡಿ ಟಿಪ್ಪಣಿ

೧. ಚಾರ್ ಮಿನಾರ್ – ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪುಟ ಸಂಖ್ಯೆ – ೧೨೦

೨. ಅದೇ ಪುಸ್ತಕ – ಪುಟ ಸಂಖ್ಯೆ – ೧೨೩

೩. ಅದೇ ಪುಸ್ತಕ – ಪುಟ ಸಂಖ್ಯೆ – ೧೩೧

೪. ತೆರೆದಷ್ಟೇ ಬಾಗಿಲು – ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ – ೧೯೮೨
ಪುಟ ಸಂಖ್ಯೆ – ೩೦

೫. ಅದೇ ಪುಸ್ತಕ – ಪುಟ ಸಂಖ್ಯೆ – ೩೧

೬. ಅದೇ ಪುಸ್ತಕ – ಪುಟ ಸಂಖ್ಯೆ – ೩೨

೭. ಸಾಹಿತ್ಯ ಸಂಚಲನ – ಪದವಿಪೂರ್ವ ಶಿಕ್ಷಣ ಇಲಾಖೆ
ಪ್ರಥಮ ಪಿ.ಯು.ಸಿ ೨೦೧೬
ಪುಟ ಸಂಖ್ಯೆ – ೧೪೬

*****

ಅಧ್ಯಾಯ – ೬

ಕಥೆಗಳಲ್ಲಿ ನಿರೂಪಣೆ ಹಾಗೂ ಭಾಷೆಯ ಬಳಕೆ

ಕಥೆಗಳಲ್ಲಿ ಓದುಗನ ಮನಸ್ಸನ್ನ ಮುಕ್ತವಾಗಿ ಹಿಡಿದಿಟ್ಟಿಕೊಳ್ಳುವಂತಹುದು ಕಥಾ ನಿರೂಪಣ ಶೈಲಿಯಾಗಿದೆ. ವಿಭಿನ್ನ ರೀತಿಯಲ್ಲಿ ಕಥೆಯ ಸಾರವನ್ನ ಬೇರೆ, ಬೇರೆ ಲೇಖಕರು ನವೋದಯ, ಪ್ರಗತಿ ಶೀಲ, ನವ್ಯ, ದಲಿತ ಬಂಡಾಯ, ವಿವಿಧ ಪಂಥಗಳಲ್ಲಿ ತಮ್ಮನ್ನು ಗುರುತಿಸಿಕೊಂಡಂತಹ ಕವಿಗಳು, ನಿರೂಪಣಾ ವಿಧಾನದಲ್ಲಿ ಬೇರೆ ಬೇರೆ ರೀತಿಯಲ್ಲಿ ಬಳಸಿಕೊಂಡಿರುವಂತಹುದನ್ನ ಕಾಣಬಹುದಾಗಿದೆ. ಕುವೆಂಪುರವರ ನಿರೂಪಣಾ ಶೈಲಿಗಿಂತ, ಬೇಂದ್ರೆಯವರ ನಿರೂಪಣಾ ಶೈಲಿ ಬೇರೆ ರೀತಿಯದೇ ಆಗಿರುತ್ತದೆ ಅದೇ ರೀತಿ ಅ.ನ. ಕೃಷ್ಣರಾಯರ ಶೈಲಿಗಿಂತ ಕಟ್ಟಿಮನಿಯವರ ನಿರೂಪಣಾ ವಿಧಾನ ಭಿನ್ನವಾಗಿರುವುದನ್ನ ಕಾಣುತ್ತೇವೆ.

ನವ್ಯ ಕಥೆಗಾರರಲ್ಲಿ ಲಂಕೇಶ್, ಕೆ.ಸದಾಶಿವ, ಪೂರ್ಣಚಂದ್ರ ತೇಜಸ್ವಿ, ಬಿ.ಸಿ. ರಾಮಚಂದ್ರ ಶರ್ಮ, ಟಿ.ಜಿ.ರಾಘವ, ತ.ರಾ.ಸು, ಮೊದಲಾದವರನ್ನ ನಾವು ಗುರುತಿಸುತ್ತೇವೆ. ಒಬ್ಬೊಬ್ಬರಿಗಿಂತ ಒಬ್ಬರ ಶೈಲಿ ಭಿನ್ನವಾಗಿರುವುದನ್ನು ಕಾಣುತ್ತೇವೆ. ಕೇವಲ ನವ್ಯ ಘಟ್ಟವೆಂದೇ ಪರಿಗಣಿಸಬೇಕಾಗಿಲ್ಲ. ಎಲ್ಲಾ ಘಟ್ಟಗಳಲ್ಲು ಎಲ್ಲಾ ಕವಿಗಳಲ್ಲೂ ಅವರದೇ ಆದ ಶೈಲಿ, ನಿರೂಪಣಾ ವಿಧಾನವನ್ನ ಕಾಣುತ್ತೇವೆ. ಕುವೆಂಪುರವರ ಧನ್ವಂತರಿಯ ಚಿಕಿತ್ಸೆ ಕಥೆಯಲ್ಲಿ ರೈತನ ಹೆಂಡತಿ ರೋಧಿಸುವಂತಹ ಆ ಸ್ಥಿತಿ ಎಲ್ಲರ ಹೃದಯವನ್ನ ಕಲಕುತ್ತದೆ. ಸಾಮಾನ್ಯ ವೇಶಧಾರಿಗಳಾಗಿದ್ದರೂ, ಸಾಮಾನ್ಯ ಜನರು ನೋಡಲು ಹೋದರೂ "ದಮ್ಮಯ್ಯ, ನಿಮ್ಮ ಕಾಲಿಗೆ ಬೀಳ್ತೀನಿ ಈಗ ದುಡ್ಡಿಲ್ಲ, ನನ್ನ ಗಂಡನಿಗೆ ಕಾಯಿಲೆ ಗುಣವಾದ ಕೂಡಲೇ ಸಾಲ ಮಾಡಿಯಾದರೂ ತಂದು ಕೊಡ್ತಾರೆ, ಕೂಸನ್ನ ನೋಡಿಯಾದರೂ ಕನಿಕರ ತೋರಿಸಿ" ಎಂದು ರೋಧಿಸತೊಡಗಿದಳು. ಎ.ಆರ್. ಕೃಷ್ಣಾ ಶಾಸ್ತ್ರಿಯವರ ಗುರುಗಳ ಮಹಿಮೆ ಕಥೆಯಲ್ಲಿ ಸಾಧ್ವಿತನದಲ್ಲಿ ಬೇಡಿಕೊಳ್ಳವಂತಹುದು, ಶಾಂತಪ್ರಿಯತೆ. ಬಾಳು ಸ್ವೀಕಾರಾರ್ಹ, ಎಂಬ ಮೊದಲಾದ ಅಂಶಗಳನ್ನು ಕಾಣುತ್ತೇವೆ. ನಾನು ಊರಿನಲ್ಲಿದ್ದು, ಮಾಡುವುದನ್ನೆಲ್ಲ ಮಾಡೀ ಮಾಡೀ ಸಾಕಾಯಿತು. ಹೇಳಿದ ಕೇಳಿದ ವ್ರತವೆಲ್ಲವಾಯಿತು. ನೋಮಿಯಾಯಿತು,

ಪೂಜೆಯಾಯಿತು, ಏನೂ ಫಲವಾಗಲಿಲ್ಲ ಅದಕ್ಕೋಸ್ಕರ ನನ್ನ ಕೆಲಸವಾಗುವ ತನಕ ಎಷ್ಟೇ ದಿನವಾಗಲಿ ಇಲ್ಲೇ ಇದ್ದುಬಿಡೋಣ ಅಂತ ಮನಸ್ಸು ಗಟ್ಟಿಮಾಡಿಕೊಂಡು ಬಂದುಬಿಟ್ಟಿದ್ದೀನಿ ಎಂದು ಹೇಳುವ ಆ ತಾಯಿಯ ಹೃದಯ ಕಲ್ಪತೆ, ಶಾಂತಚಿತ್ತತೆ, ಬೇಡುವರೀತಿ ಎಲ್ಲವನ್ನೂ ಗಮನಿಸುವಂತಹುದಾಗಿದೆ.

ಪೂರ್ಣ ಚಂದ್ರ ತೇಜಸ್ವಿಯವರ ನಿರೂಪಣಾ ವಿಧಾನವು ಭಿನ್ನ ರೀತಿಯಿಂದ ಕೂಡಿದೆ. ಆಧುನಿಕತೆ, ನಾಗರೀಕತೆಗಳಿಂದ ಕೂಡಿದ ಆಧುನಿಕತೆಯನ್ನು ನಗರಗಳಿಂದ ಆಕರ್ಷಿತಗೊಂಡು ಹಳ್ಳಿಗಳು ಅಳವಡಿಸಿಕೊಳ್ಳುವುದರಿಂದ ಏನೆಲ್ಲಾ ಆಗುತ್ತದೆ ಎಂಬುದನ್ನ 'ಅಬಚೂರಿನ ಪೋಸ್ಟಾಫೀಸು' ಕಥೆಯಲ್ಲಿ ತಿಳಿಸಿಕೊಡುತ್ತಾರೆ. ಕಾವೇರಿ, ಮಾಚಮ್ಮ, ಇವರಲ್ಲರ ಹಿಡಿತದಿಂದ ಹೊರಬರಲು ಹಾಗೂ ತನ್ನ ಕೆಲವು ಕಾಮನೆಗಳ ವಿಧಾನಗಳನ್ನು ಹಿಡಿದಿಟ್ಟಿರುವಂತಹ ಕೆಲಸಗಳನ್ನು ಬೋಬಣ್ಣನ ಮೂಲಕ ಮಾಡಿಸಿರುವಂತಹುದನ್ನು ಕಾಣುತ್ತೇವೆ.

ಲಂಕೇಶ್‌ರ ನಿವೃತ್ತರು ಕಥೆಯಲ್ಲಿ ದಿಟ್ಟ, ಸ್ಪಷ್ಟ ನಿರ್ಧಾರವನ್ನು ವ್ಯಕ್ತಪಡಿಸುವಂತಹುದನ್ನು ಕಾಣಬಹುದಾಗಿದೆ. ಪ್ರಹ್ಲಾದ ರಾಯ, ನರಸಿಂಗರಾಯರ ಪಾತ್ರಗಳಲ್ಲಿ ತೋರಿಸಿರುವಂತಹುದನ್ನು ಕಾಣುತ್ತೇವೆ. ನರಸಿಂಗರಾಯ "ರೀ, ರಾಯರೇ, ಅಕೋ ಅಲ್ಲಿ ಕಡಲೇಕಾಯಿ ಮಾರೋನಿದ್ದಾನೆ, ಹೋಗಿಬಿಟ್ಟು ಎರೆಡಾಣೆ ಕಡ್ಲೆಕಾಯಿ ತನ್ನಿ, ಇಗೋ ಎರಡಾಣೆ, ಬೇಗ ಹೋಗಿ" ಅಂದ ಪ್ರಹ್ಲಾದರಾಯ ಏಳಲಿಲ್ಲ, ತಾನು ಇಲ್ಲದಾಗ ಇನ್ನೂ ಹೊಲಸಾಗಿ ನರಸಿಂಗರಾಯ ಮಾತನಾಡಬಹುದೆಂದು ಅನಿಸಿತು. ತನ್ನ ಜೀವನದಲ್ಲಿ ಮೊದಲ ಬಾರಿಗೆ ತನ್ನ ಮೇಲಿದ್ದವನ ಮಾತನ್ನ ಎದುರಿಸುವಂತಹ ದಿಟ್ಟತನ ಗಟ್ಟಿ ಧೈರ್ಯ ಮಾಡಿ ಕೂತಲ್ಲಿಯೇ ಕೂತ. ಮುಖ ಗಂಟು ಹಾಕಿಕೊಂಡು. "ನೀವೇ ಹೋಗಿಬಿಟ್ಟು ಬನ್ನಿ ಎಂದ. ತನ್ನ ಶೌರ್ಯ ಕೊಚ್ಚಿಕೊಂಡ ನರಸಿಂಗರಾಯರಿಗೆ ತನ್ನ ಕೈಕೆಳಗಿನವನ ಮಾತು ನುಂಗಲಾರದ ತುತ್ತಾಯಿತು. ಅನಿರೀಕ್ಷಿತ ಉತ್ತರಕ್ಕೆ ಬೆಚ್ಚಾಗಿ ಅದರಲ್ಲಿಯೂ ಧೈರ್ಯ ಕೂಡಿಸಿಕೊಂಡು ಹಳೆಯ ದರ್ಪವನ್ನು ಪ್ರತಿ ಮಾತಿನಲ್ಲೂ ತುಂಬುತ್ತಾ "ಹೋಗ್ರಿ ಇವ್ರೆ, ಎಷ್ಟ್‌ರೀ ನಿಮಗೆ ಸೊಕ್ಕು" ಅಂದ ಪ್ರಹ್ಲಾದರಾಯ. ಎಣ್ಣೆಗೆಂಪು ಮುಖದಲ್ಲಿ ಹಾಸ್ಯವನ್ನೊಡೆದು ಕೋಪ ಬರುತ್ತಿತ್ತು "ಸ್ವಾಮಿ, ನರಸಿಂಗರಾಯರೆ

ನಿಮ್ಮ ಕಟ್ಟಾರೋಪು ಇನ್ನು ನಡೆಯೋಲ್ಲ, ತೋರುಸ್ತಾನೆ ಮಹಾ ಯಾರಿಗೂ ಗೊತ್ತಿಲ್ಲ ನಿನ್ನ ಬಂಡವಾಳ ಅಂತ ತಿಳಿದಿದ್ದೀಯೋ, ಮೀರಾ ಚಪ್ಪಲಿಯಿಂದ ಹೊಡೆದದ್ದು ಗೋವಿಂದರಾಜು ಫೈಲಿನಿಂದ ತಲೆಗೆ ಕುಕ್ಕಿದ್ದು" ಎಂದು ವ್ಯಕ್ತವಾಗುವ ವಿಚಾರೆಲ್ಲಿ ಆಕ್ರೋಶ ಎಂಬುದು ಹೆಚ್ಚಾದರೆ, ಶ್ರೀಮಂತ, ಮೇಲ್ವರ್ಗ, ಮೇಲಾಧಿಕಾರಿ ಎಂಬುದನ್ನು ನೋಡದೆ ನ್ಯಾಯಕ್ಕಾಗಿ ಹೋರಾಡುವುದನ್ನು ಲಂಕೇಶ್ 'ನಿವೃತ್ತರು' ಕಥೆಯಲ್ಲಿ ಕಾಣುತ್ತೇವೆ.

ನಿರೂಪಣಾ ಶೈಲಿ, ಒಬ್ಬರಿಗಿಂತ ಒಬ್ಬರದು. ಭಿನ್ನ ವ್ಯಕ್ತಿತ್ವವನ್ನು ಬಿಂಬಿಸುವಂತಹುದನ್ನು ಕಾಣುತ್ತೇವೆ. ಕುವೆಂಪು, ಕೃಷ್ಣಾ ಶಾಸ್ತ್ರಿಗಳ ಕಥೆಯಲ್ಲಿನ ದೈನ್ಯತೆಯನ್ನು ಲಂಕೇಶ್ ಹಾಗೂ ತೇಜಸ್ವಿಯವರ ಕಥೆಗಳ ನೇರ, ದಿಟ್ಟವಾಗಿ ಉತ್ತರಿಸುವುದನ್ನು, ಮಾತನಾಡುವುದನ್ನು ಕಾಣುತ್ತೇವೆ. ಬದುಕಿನ ವಿವಿಧ ಮಜಲಿನ ವಸ್ತು, ದೃಷ್ಟಿಕೋನ, ಸಾಮ್ಯತೆಯನ್ನು ಭಿನ್ನ ದೃಷ್ಟಿಗಳಿಂದ ತೋರಿಸುವಂತಹುದನ್ನು ಕಾಣಬಹುದಾಗಿದೆ. ಕೇವಲ ಇಂತಹವರಲ್ಲದೆಯೇ ಇನ್ನು ಬಸವರಾಜ ಕಟ್ಟಿಮನೆಯವರ ಶೈಲಿ ರಾಘವೇಂದ್ರ ಖಾಸನೀಸರ ನಿರೂಪಣಾ ಶೈಲಿ ಕಟ್ಟಿಮನಿಯವರ ಅಜ್ಞಾತವಾಸಿ ಕಥೆಯಲ್ಲಿ ಸ್ವಾತಂತ್ರ್ಯದ ಕಿಚ್ಚು ಮೊಳಗುವಂತಹ ಮಾತುಗಳು ಕಂಡು ಬರುತ್ತವೆ. ಯಾರಿಗೂ ತಲೆಬಾಗುವುದಿಲ್ಲ, ಪ್ರಾಣ ಹೋದರು ಸರಿಯೇ ಇನ್ನೊಬ್ಬರ ಹಿಡಿತಕ್ಕೆ ಸಿಗುವುದಿಲ್ಲ ಎಂದು ಸಾರುವಂತಹ ವಿಷಯವನ್ನು 'ಅಜ್ಞಾತವಾಸಿ; ಕಥೆಯಲ್ಲಿ ಕಾಣಬಹುದು, ಎಂಟು ದಿನಗಳಿಂದ ಒಂದೇ ಸಮನೆ ಅವರು ಅವಳನ್ನು ಹೊಡೆದಿದ್ದರು, ಲಾಠಿ, ಬೆತ್ತ, ಬೂಟು, ಚಪ್ಪಲಿ, ಕೈಗೆ ಸಿಕ್ಕಿದ್ದರಿಂದ ಏಟು ಹಾಕಿದ್ದರು, ಸೀರೆ, ಕುಪ್ಪಸಗಳನ್ನೆಳೆದು ನಗ್ನಗೊಳಿಸಿ ಶರೀರದ ಮೇಲೆ ಚರ್ಮದ ಪಟ್ಟಿಯಿಂದ ಬಿಗಿದಿದ್ದರು. ಅಂದರೆ ಇಷ್ಟೆಲ್ಲಾ ಕ್ರೂರ ಹಿಂಸೆ, ದಬ್ಬಾಳಿಕೆ, ದರ್ಪ, ದೌರ್ಜನ್ಯವನ್ನು ತೋರಿಸಿದರೂ ಸಹ ಏನೇ ಮಾಡಿದರೂ ತನ್ನ ಗಂಡ ಚೆನ್ನ ಎಲ್ಲಿದ್ದಾನೆಂಬ ಸತ್ಯವನ್ನ ಹೇಳಲು ಅವಳು ಸಿದ್ಧಳಿಲ್ಲ.

"ಹೇಳು ನಿನ್ನ ಗಂಡ ಎಲ್ಲಿದ್ದಾನೆ, ಆ ಭಂಡ ಎಲ್ಲಿ ಅಡಗಿದ್ದಾನೆ, ಹೇಡಿಯ ಹಾಗೆ" ಭಂಡ! ಹೇಡಿ! ಅದು ತನ್ನ ಗಂಡ! ನಾಗಮ್ಮನ ಸ್ವಾಭಿಮಾನ ಕುದಿಯಿತು, ಆಕೆ "ಯಾರಿಗೆ

ಭಂಡ ಅಂತಿಯೋ ಷಂಡ, ಹೆಂಗಸರ ಮೇಲೆ ಕೈ ಎತ್ತುವ ನಿಮ್ಮಂತಹ ಹೇಡಿಗಳಂತವನಲ್ಲ ನನ್ನ ಗಂಡ! ಥೂ ನಿಮ್ಮ ಮುಖಕ್ಕೆ ಬೆಂಕಿ ಹಾಕಲಿ, ನಾಚಿಕೆ ಆಗೋದಿಲ್ಲವೇ ನಿಮಗೆ"

ಅಂದರೆ ಅಷ್ಟು ಹಿಂಸೆ ಕೊಟ್ಟಿದ್ದರೂ ಆಕ್ರೋಶ ಎಂಬುದು ಕುದಿಯುವುದಂತಹುದನ್ನ ಕಟ್ಟಿಮನಿಯವರು ಮನಮುಟ್ಟುವಂತೆ ತಿಳಿಸಿದ್ದಾರೆ. ಅದು ಅವರ ನಿರೂಪಣಾ ಶೈಲಿಯನ್ನ ಪ್ರತಿಬಿಂಬಿಸುವಂತಹುದಾಗಿದೆ. ಪ್ರಗತಿಶೀಲರ ಕಥೆಗಳಲ್ಲಿ ಪ್ರತಿಬಿಂಬಿಸುವಂತಹ ಸ್ಪಷ್ಟ ಅಂಶಗಳನ್ನ ಅವು ಗೋಚರಿಸುತ್ತವೆ. ಕೊನೆಗೂ ಚೆನ್ನಬಸಪ್ಪ ಅವರ ಕೈಗೆ ಸಿಗದೇ ಇರುವಂತಹ ಹಾಗೂ ಆಕ್ರೋಶವನ್ನ ವ್ಯಕ್ತಪಡಿಸುವಂತಹುದನ್ನ ಕಾಣಬಹುದಾಗಿದೆ.

ರಾಘವೇಂದ್ರ ಖಾಸನೀಸರ 'ತಬ್ಬಲಿಗಳು' ಕಥೆಯ ನಿರೂಪಣಾ ಶೈಲಿಯಲ್ಲಿ ಇಡೀ ಒಂದು ಸಂಸಾರ ಅನುಭವಿಸುವಂತಹ ನೋವು, ವೇದನೆ, ಸಂಬಂಧಗಳನ್ನು ಬೆಸೆಯುವಂತಹ ವೈಖರಿಯನ್ನ ಕಾಣಬಹುದಾಗಿದೆ. ಗಂಡ, ಹೆಂಡತಿ, ಮಕ್ಕಳು ಮಂತ್ರಾಲಯಕ್ಕೆ ಹೋದಾಗ ಆಗುವಂತಹ ವಿವಿಧ ರೀತಿಯ ಅನುಭವಗಳನ್ನ ಕಾಣುತ್ತೇವೆ. ಸೊಸೆ ತೀರಿ ಹೋಗಿದ್ದಾಳೆ, ಮಗಳಿಗೆ ಭ್ರಮೆಯಾಗಿದೆ, ರಥಕ್ಕೆ ಬೆಂಕಿ ಬಿದ್ದಿದೆ ಎಂದು ಆ ಮಗು ಕೂಗುವಾಗ ಇಡೀ ಜನ ಅಪಶಕುನವೆಂದು ಭಾವಿಸುತ್ತಾರೆ. ಸಂಬಂಧಗಳು ಬೆಸೆಯುವಂತಹ, ಒಂದಾಗುವಂತಹ ಬಾಂಧವ್ಯವನ್ನು ನಾವು ಕಾಣಬಹುದು, ಇಡೀ ಸಂಸಾರದ ಸುಖಕ್ಕಾಗಿ ತಂದೆ, ಹೆಂಡತಿಯ ಆತ್ಮ ತೃಪ್ತಿಗಾಗಿ ಮಗ ಮಗಳ ಆರೋಗ್ಯ ಸುಧಾರಣೆಗಳಿಗೆ ಬಾಂಧವ್ಯದ ಸುತ್ತುವಂತಹುದನ್ನ ಕಾಣುತ್ತೇವೆ.

"ತಂಗಿ ಕೈ ಬಿಡಬ್ಯಾಡ ಹಿಡಿ, ಗದ್ದಲದಾಗ ಎಲ್ಲಾರ ತಪ್ಪಿಸಿಕೊಂಡಿ" ಮಗಳ ಕೈ ಹಿಡಿತವನ್ನ ಇನ್ನೂ ಬಿಗಿಯಾಗಿ ಮಾಡುತ್ತಾ ತಾಯಿ ಹೇಳಿದಳು, ತಂಗಿ ಉತ್ಸವಕ್ಕೆಂದು ನೆರೆದಿದ್ದ ಜನಜಂಗುಳಿಯನ್ನು ಬೆರಗು ಬಿಟ್ಟು ನೋಡುತ್ತಿದ್ದಾಳೇ. ಮಠದ ಎದುರಿನ ಬಯಲಿನಲ್ಲಿ ಸಾಲಾಗಿ ಅಂಗಡಿಗಳನ್ನು ಹಚ್ಚಿದ್ದಾರೆ. ಕೊಳ್ಳುವುದು ಏನೂ ಇರದಿದ್ದರೂ ಸುಮ್ಮನೆ ಯಾವುದಾದರೊಂದು ಅಂಗಡಿಯ ಮುಂದೆ ಹೋಗಿ ನಿಲ್ಲಬೇಕೆಂದು ಅನ್ನಿಸಿತು. ಇಡೀ ಸಂಸಾರದೊಂದಿಗೆ ತಾವು ಹಾಗೆ ಹೊರಗೆ ಹೋದದ್ದು ಅಪರೂಪ ಎನಿಸಿತು. ತಂದೆಗೆ ಒಂದು ಕ್ಷಣ ಅಭಿಮಾನ ಎನಿಸಿತು. ತೃಪ್ತಿಯಾಯಿತು. ನಾವೆಲ್ಲರೂ

ಬದುಕಿನಲ್ಲಿ ಹೀಗೆ ಕೂಡಿದ್ದರೆ ನಮ್ಮೆಲ್ಲರ ಬಾಳು ಹೇಗಾಗಬಹುದಿತ್ತು ಎಂಬುದನ್ನು ಕನಸು ಕಾಣುತ್ತಾ ಮುಂದೆ ನಡೆದರು. ಖಾಸನೀಸರ ಕಥೆಗಳಲ್ಲಿ ಸುಖ ಸಂತೋಷದ ಬದುಕನ್ನು ಬಯಸುವಂತಹ ಪಾತ್ರವನ್ನು ಕಾಣುತ್ತೇವೆ.

ದಲಿತ ಬಂಡಾಯ ಪಂಥದಲ್ಲಿ ಬರುವ ದೇವನೂರು ಮಹಾದೇವ, ಸಿದ್ಧಲಿಂಗಯ್ಯನವರ ನಿರೂಪಣಾ ಶೈಲಿಯೇ ಬೇರೆಯಾಗಿದೆ. ಹಸಿವು, ಆಕ್ರೋಶಗಳು ತುಂಬಿವೆ. ಎಲ್ಲರಿಗೂ ಒಂದೇ ರೀತಿಯ ನ್ಯಾಯ ದೊರೆಯಬೇಕೆಂಬ ಉದ್ದೇಶವನ್ನು ಕಾಣುತ್ತೇವೆ. ಕೇವಲ ಕಥೆಗಳ ಮೂಲಕವಷ್ಟೇ ಅಲ್ಲ, ಕವನಗಳ ಮೂಲಕವೂ ಕಿಚ್ಚನ್ನ ಹತ್ತಿಸಿದ್ದಾರೆ. "ಯಾರಿಗೆ ಬಂತು, ಎಲ್ಲಿಗೆ ಬಂತು ೪೭ರ ಸ್ವಾತಂತ್ರ್ಯ" ಎಂದು ಹೇಳುವಲ್ಲಿ ಆ ಸ್ವಾತಂತ್ರ್ಯ ನಮಗೆ ಇನ್ನೂ ಬಂದಿಲ್ಲ ಎಂಬುದನ್ನು ಕಾಣುತ್ತೇವೆ. ಶತಶತಮಾನಗಳಿಂದ ಜಾತೀಯತೆಯ ಆಧಾರದ ಮೇಲೆ ಯಜಮಾನನ್ನ ಹೊರಗಿಟ್ಟು ಅವಕಾಶ ವಂಚಿತರಿಗೆ ಆದ್ಯತೆ ನೀಡುವುದನ್ನ ಅವರ ಕಥಾ ನಿರೂಪಣೆಯಲ್ಲಿ ಕಾಣುತ್ತೇವೆ. ಸಾಮಾನ್ಯನನ್ನೂ ತಮ್ಮ ಬರವಣಿಗೆಯ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. ದೇವನೂರು ಮಹಾದೇವರು, 'ಡಾಂಬರು ಬಂದದ್ದು' ಕಥೆಯಲ್ಲಿ ಅಧಿಕಾರಿ ವರ್ಗವನ್ನ ಎದುರಿಸುವಂತಹ ದಿಟ್ಟತನವನ್ನ ಕಾಣುತ್ತೇವೆ. "ನ್ಯಾಯಕ್ಕೆ ಮನೆಗೊಂದಾಳು ಚಾವಡಿಗೆ ಬರಬೇಕೆಂದು ಪಟೇಲರು ತಮಟೆ ಬಡಿಸಿ ಸಾರಿಸಿದರು". ನ್ಯಾಯಕ್ಕಾಗಿ ಹೋರಾಡುವಂತಹ ಚಿತ್ರಣವನ್ನು ಹಾಗೂ ಅನ್ಯಾಯವನ್ನು ತಡೆಯವಂತಹ ಸ್ಥಿತಿಯನ್ನ ಕಾಣುತ್ತೇವೆ. ಗ್ರಾಮ್ಯ ಮಾತುಗಳು ಓದುಗರ ಮನಮುಟ್ಟುತ್ತವೆ, 'ಒಕ್ಕಡೆ ಕುಂತು ಹತ್ತಾರು ಯಮ್ಕ ತಲೆಗೆ ಸೆರಗು ಸುತ್ತಿಕೊಂಡು ಜಲ್ಲಿಕಲ್ಲು ಚಚ್ಚುತ್ತಿರುವುದು ಗುಂಪಲ್ಲೇ ಒಬ್ಬಳು ಸಣ್ಣ ದನಿ ಎತ್ತರಿಸಿ "ಸುವ್ವಿ ಬಾ ಚೆನ್ನಬಸಯ್ಯ" ಮೊಳಗಿಸುತ್ತಿರುವಳು. ಗ್ರಾಮ್ಯ ಶಬ್ಧಗಳಿಂದ ಕೂಡಿರುವುದು ಕಂಡುಬರುತ್ತದೆ.

ಅಮಾಸ ಕಥೆಯಲ್ಲಿ ದಲಿತನನ್ನು ಸಮಾಜದ ಮುಖ್ಯವಾಹಿನಿಗೆ ತಂದಿರುವುದನ್ನ ಕಾಣುತ್ತೇವೆ. ಸಾಮಾಜಿಕ ಕಳಕಳಿ ಹೊತ್ತು ಪ್ರತಿಭಟನೆಯ ಗಟ್ಟಿದನಿಗೆ ಜನಪರ ಸಾಮಾಜಿಕ ರಾಜಕೀಯ ಪ್ರಜ್ಞೆಗೆ ಒತ್ತುಕೊಟ್ಟವರು, ದಲಿತ ಮುಖಗಳನ್ನ ಕಥೆಯಲ್ಲಿ ತಂದರು. ಶೋಷಿಸುವ ಯಜಮಾನನ್ನು ತೀವ್ರ ವಿರೋಧ ಸೂಚಿಸುವ ಗುಣವಿದೆ. ಸಾಮಾನ್ಯನೂ ಕೂಡ ಏನು ಬೇಕಾದರೂ ಸಾಧಿಸಬಲ್ಲ ಎಂಬ ಧೀಮಂತ ವ್ಯವಸ್ಥೆಯ

ಶೈಲಿಯ ನಿರೂಪಣೆಯನ್ನು ಕಾಣಬಹುದು. ಅವನ ಮೈ ಕಪ್ಪಗಿದ್ದು, ಮೈಗೆಲ್ಲ ನರನರವೇ ಹಬ್ಬಿತ್ತು. ವಟಗುಟ್ಟುವುದಕ್ಕೆ ತಕ್ಕಂತೆ ಅವು ಹಿಗ್ಗುತ್ತಾ, ಕುಗ್ಗುತ್ತಾ ಇದ್ದವು. ಆ ಮೇಲೆ ಅವ ಹೂ ಎರಡು ಮಾಡಿ ಆಡುಗಳ ಕೊರಳಿಗೆ ಬಿಗಿದನು. ಅದಾದ ಮೇಲೆ ಬಿಡಿ ಹೂವ ಆಡುಗಳೆರೆಡರ ನೆತ್ತಿಯ ಮೇಲೆ ಇಟ್ಟು, ತೀರ್ಥವನ್ನ ಮೈಮೇಲೆರಚಿ ಕೈ ಮುಗಿದು "ಏನಾರಾ ತಪ್ಪಿದ್ದರೆ ಹೊಟ್ಟೆ ಒಳಕ ಹಾಕವ್ವಾ ಒಪ್ಪಿಗೆ ಕೊಡು" ಎಂದನು.

ದೇವನೂರರ ಗ್ರಾಮ್ಯ ಶೈಲಿಯನ್ನು ಈ ಹೇಳಿಕೆಗಳಲ್ಲಿ ಕಾಣಬಹುದು "ಮಾರನೆ ದಿನ ಬಂತಲ್ಲ ಅವತ್ತು ಆಕಳಿಸುತ್ತಾ ಕಳೆಯಿತು. ಯಾವ್ಯಾವ ಜಗಲಿ ನೋಡಿದರೂ ಜನ ತುಂಬಿತ್ತು, ಅಷ್ಟಕ್ಕೂ ಎಷ್ಟೋ ಜನ ಇನ್ನೂ ಎದ್ದಿರಲಿಲ್ಲ ಉದಾ: ಸಿದ್ದಪ್ಪ ಮಧ್ಯಾಹ್ನ ಬಂತಲೇ ಹುಲಿ ಯಾಸದವರಿಂದ ಚಲನ ವಲನ ಮಾರಿಗುಡಿಗೆ ಬಂತು. ಗೌಡರ ಜೀತದಾಳು ಬಂದು "ಗೌಡ್ರಟ್ಟಿಗೆ ತಿಂಗ್ನ ಕಾಯಬೇಕಂತೆ" ಎಂದು ಕುರಿಯಯ್ಯ ಕಿತ್ಕೋ ಅಂತಲೇ ಮರವ ನಿಮಿಷಕ್ಕೆ ಹತ್ತಿ ಉದುರಿಸಿಕೊಂಡು ಹೋದನೆ, ಗ್ರಾಮ್ಯತೆಯ ಸ್ಪಷ್ಟತೆ, ನೇರ ನುಡಿ ನಡೆಯನ್ನ ದೇವನೂರು ಮಹಾದೇವರ ಗ್ರಾಮ್ಯ ಶೈಲಿಯ ವಿಧಾನದಲ್ಲಿ ಕಾಣುತ್ತೇವೆ. ವಿಭಿನ್ನ ಲೇಖಕರ ವಿಭಿನ್ನ ನಿರೂಪಣಾ ಶೈಲಿಯಲ್ಲಿ ಕಾಣುತ್ತೇವೆ.

ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ದೈನ್ಯತೆ, ಸಾರ್ಥಕತೆಯನ್ನ ಪಡೆಯುವುದನ್ನ ಕಾಣುತ್ತೇವೆ. ಅವಧಾನಿಯವರ 'ಬೆಂಕಿ ಬೆಳ್ಳಿ' ಕಥೆ ಕಾಯ್ಕಿಣಿಯವರಿಗೆ ಪ್ರೇರಣೆ ನೀಡಿತ್ತು.. ಬದುಕಿನ ವ್ಯಕ್ತಿತ್ವದ ನೆಲೆಯಲ್ಲಿ ಮಾನವೀಯ ಕಾಳಜಿಯನ್ನ ಕಾಣಬಹುದು. ಕಾಯ್ಕಿಣಿಯವರ ಪ್ರಮುಖ ಕಥೆಗಳೆಂದರೆ 'ಬಣ್ಣದ ಕಾಲು' 'ತೂಫಾನ್ ಮೇಲ್' 'ಚಾರ್ಮಿನಾರ್' 'ತೆರೆದಷ್ಟೇ ಬಾಗಿಲು' 'ಅಮೃತಬಳ್ಳಿಯ ಕಷಾಯ' 'ದಗಡುಪರಬನ ಅಶ್ವಮೇಧ' – ಈ ಕಥೆಗಳಲ್ಲಿ ಬದುಕಿನ ಸಾರ್ಥಕತೆಯನ್ನು ಹುಡುಕುವ ಹಂಬಲ, ಪ್ರೀತಿ, ವಿಶ್ವಾಸ, ಗೆಳೆತನ, ಮುಂತಾದವುಗಳು, ಮನುಷ್ಯನ ಜೀವನಕ್ಕೆ ಅಗತ್ಯ ಎಂಬುದನ್ನ ಕಾಣುತ್ತೇವೆ.

ಚಂದ್ರಶಾಲೆಯ ಕಥೆಯಲ್ಲಿ ಪ್ರಮುಖವಾಗಿ ಬ್ಯಾಂಕ್ ಮ್ಯಾನೇಜರ್ ಹೆಂಡತಿ ರಂಗೋಲಿಗೆ ಬಣ್ಣ ತುಂಬುವುದನ್ನ ನೋಡಿದ ಊರ ಪೋರಿಯರೆಲ್ಲ ಪಾವು, ಚಟಾಕು ಎಂದು ವಿಧ ವಿಧ ಬಣ್ಣದ ಕುಂಕುಮಗಳನ್ನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕಟ್ಟಿಸಿಕೊಂಡು ಹೋಗುತ್ತಿದ್ದರು. ಗೋಕರ್ಣದಲ್ಲಿ ನಡೆಯುವ ಹಬ್ಬದ ವಾತಾವರಣವನ್ನ

ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಕುಂಕುಮದ ಅಂಗಡಿಯ ವರ್ಣನೆಯನ್ನು ಗೋಪುರಗಳಿಗೆ ಹೋಲಿಸಿದ್ದಾರೆ. ಕುಂಕುಮದ ಅಂಗಡಿಯನ್ನ ತೆಗೆಯದ ವಿಶ್ವೇಶ್ವರನನ್ನ ಎಲ್ಲರನ್ನೂ ಕೇಳುವುದು ಮುಂದೆ ತೇರು ಹೋಗದೇ ನಿಂತಿರುವುದಕ್ಕೆ ಕಾರಣವಾಗಿದೆ. ತಮ್ಮತಮ್ಮಲ್ಲಿ ಪ್ರೀತಿ ವಿಶ್ವಾಸವನ್ನ ಹುಡುಕುವುದನ್ನು ಕಣ್ಮರೆಯ ಕಾಡು ಕಥೆಯಲ್ಲಿ ಕುಸುಮಾ ಪೂರ್ವಿ ಮಕರಂದನನ್ನ ಹುಡುಕುವುದಲ್ಲಿ ಕಾಣುತ್ತೇವೆ. ಅಲ್ಲಿನ ಕಥೆಗಳಲ್ಲಿನ ಬದುಕು ಇಡೀ ಜೀವನ ವ್ಯವಸ್ತೆ ಹಾಗೂ ನಮ್ಮ ದೇಶದ ಸ್ಥಿತಿಯನ್ನ ಕಂಡುಕೊಳ್ಳುವಂತಹದ್ದಾಗಿದೆ. ಭವಿಷ್ಯತ್ತಿನ ದೃಷ್ಟಿಯಿಂದ ನಾವು ಬೆಳೆಯುತ್ತಿರುವ ನಗರಗಳಲ್ಲಿ ಭವಿಷ್ಯದ ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಮುಂಬೈ, ದೆಹಲಿ ನಗರಗಳಲ್ಲಿ ಸಮಸ್ಯೆಯ ಪೂರವೇ ಹರಿದು ಬರುತ್ತದೆ. ಇಂತಹ ಹಲವಾರು ವ್ಯವಸ್ಥೆಗಳನ್ನ ಭಾಷೆಯ ಮೂಲಕ ಹಿಡಿದಿಟ್ಟಿದ್ದಾರೆ. ಹೆಚ್ಚಾಗಿ ಹಿಂದಿ ಬಳಕೆಯನ್ನ ಕಾಣುತ್ತೇವೆ.

ಅನ್ಯಾಯ ಆಗಿರುವಂತಹ ಪಾತ್ರಗಳಿಗೆ ಇನ್ನೊಂದು ಪಾತ್ರದ ಮೂಲಕ ನ್ಯಾಯ ಒದಗಿಸುವಂತಹ ಪಾತ್ರವನ್ನ ಕಾಣುತ್ತೇವೆ. 'ನೀರೂ' ಕಥೆಯಲ್ಲಿ ಸಂತೋಷನ್ ಎಂಬ ವ್ಯಕ್ತಿ ಆಸ್ಪತ್ರೆಗೆ ಹೋಗಬೇಕಾದಾಗ ಚಂದ್ರಹಾಸ ತಾನೇ ಅವರನ್ನ ಆಸ್ಪತ್ರೆಯವರೆಗೂ ತಲುಪಿಸಿ ನಿಮ್ಮ ಅಳಿಯ ಬರುವವರೆಗೂ ನಾನು ಕಾಯುತ್ತೇನೆ, ಅಂತಹ ಕೆಲಸ ನನಗೆ ಏನೂ ಇಲ್ಲ ಎಂದು ಮಾನವೀಯ ದೃಷ್ಟಿಯಲ್ಲಿ ಹೇಳುವುದನ್ನು ವ್ಯಕ್ತಪಡಿಸುತ್ತಾರೆ.

ಜಯಂತ ಕಾಯ್ಕಿಣಿಯವರ ಭಾಷೆಯಲ್ಲಿನ ಸಾರವನ್ನ ಕಥೆ, ಕವನ, ನಾಟಕ, ಚಲನಚಿತ್ರ ಗೀತೆಗಳಲ್ಲಿ ಹಿಡಿದಿಟ್ಟಿದ್ದಾರೆ. ಮುಂಬೈಯಲ್ಲಿ ೨೩ ವರ್ಷಗಳ ಕಾಲ ಜೀವನ ನಡೆಸಿದ ಕಾಯ್ಕಿಣಿಯವರು ಹಿಂದಿ, ಇಂಗ್ಲೀಷ್, ಕನ್ನಡ, ತುಳು, ಮೊದಲಾದ ಭಾಷೆಗಳ ಮೇಲೆ ಹಿಡಿತ ಸಾಧಿಸಿದ್ದರು. ಬಣ್ಣದ ಲೋಕದಲ್ಲಿ ಕುಂಟ ಮಂಗೇಶನ ಪಾತ್ರದಲ್ಲಿ ಬಳಸುವ ಆ ಶಬ್ಧಗಳು ಚಂದುವನ್ನ ಆಕರ್ಷಣೆಗೆ ಒಳಪಡಿಸುತ್ತವೆ. ಕಾಲನ್ನು ಕಳೆದುಕೊಂಡ ಕುಂಟ ಮಂಗೇಶ ತನ್ನ ಕಾಲು ಯುದ್ಧದಲ್ಲಿ ಕಳೆದುಹೋಯಿತು ಮತ್ತೊಂದು ಸಾರಿ ಮುಂಬೈನಲ್ಲಿ ಕತ್ತರಿಸಿ ಹೋಯಿತು ಎಂದು ಹೇಳುತ್ತಾನೆ. ಚಂದು ಮುಂಬೈಗೆ ಹೋಗ್ತಾನೆ ಎಂದು ಕೇಳಿದ ಕುಂಟ ಮಂಗೇಶ "ಯೇ ಹೈ ಬಾಂಬೆ ಮೇರಿ ಜಾನ್" ಎಂದು ಹಾಡಿ ಪಟ್ಟಣದ ವರ್ಣನೆಗೆ ತೊಡಗಿ "ನನ್ನ ಸಾವಿರಾರು ಹೆಂಡತಿಯರು ಇದ್ದಾರೆ ಅಲ್ಲಿ" ಎಂದು ನೆಗೆದಾಡಿದ. ಮುಂಬೈನಂತಹ ಮಹಾನಗರಗಳಲ್ಲಿ ಹೆಚ್ಚಾಗಿ

ಹಿಂದಿಯ ಭಾಷೆಯ ಬಳಕೆಯನ್ನು ಕಾಣುತ್ತೇವೆ. ಖೋಲಿ, ಸ್ಮಗ್ಲಿಂಗ್ ಗ್ಯಾಂಗ್, ಮುಂತಾದ ಪದ ಪ್ರಯೋಗಗಳಿವೆ.

'ಚೌತಿ ಚಂದ್ರ' ಕಥೆಯಲ್ಲಿ "ಲೇಡೀಸ್ ಪ್ರಾಬ್ಲಂ, ಲೇಡೀಸ್ ಪ್ರಾಬ್ಲಂ" "ಪಾಂಡು ಮಹಾರಾಜ್‌ಕಿ ಜೈ" ಹಿಂದಿ, ಇಂಗ್ಲೀಷ್ ಭಾಷೆಗಳ ಹಿಡಿತವನ್ನ ತೋರಿಸುತ್ತದೆ ಬಜಾರ್, ಚಾಳಿ, ಪ್ಯಾದೆ, ಪೋರ, ಚಾಯ್, ಗಟಾರ ಮುಂತಾದ ಪದಪ್ರಯೋಗಗಳನ್ನ ಅವರ ಬಣ್ಣದ ಕಾಲು ಕಥೆಯಲ್ಲಿ ಕಾಣುತ್ತೇವೆ. ಮುಂಬೈಯಲ್ಲಿ ಹಲವಾರು ವರ್ಷಗಳ ಕಾಲ ಜೀವನ ನಡೆಸಿದ ಕಾಯ್ಕಿಣಿಯವರು ಭಾಷೆಯ ಮೇಲೆ ತಮ್ಮ ಸ್ವಾದೀನತೆಯನ್ನು ಸಾಧಿಸಿದ್ದಾರೆ. 'ದಿಗಂಬರ' ಕಥೆಯಲ್ಲಿ "I can even cook well you sternerly gain weight after having my Punjabi food" ಎಂಬ ಪದ ಪ್ರಯೋಗಗಳನ್ನು ನೋಡಿದಾಗ ನವ್ಯ ಕಥೆಗಾರರಲ್ಲಿರುವ ಭಾಷೆಯ ಬಳಕೆಯ ಚಾಣಾಕ್ಷತೆ ಎದ್ದು ಕಾಣುತ್ತದೆ. 'ಸ್ವಪ್ನ ದೋಷ' ಕಥೆಯ ಲೀಲಾಧರ ಹೆಲ್ತ್ ಸೆಂಟರ್‌ನಲ್ಲಿದ್ದುಕೊಂಡು ಇಂಗ್ಲೀಷ್ ಭಾಷೆಯನ್ನು ಕಲಿಯುವುದನ್ನ ಕಾಣುತ್ತೇವೆ. "you shut up I know English, you shut up who mutare you tell me ಮುಂತಾದ ಪದಗಳನ್ನ ಕಾಣುತ್ತೇವೆ. ಇಂಗ್ಲೀಷ್ ಕಲಿಕೆಯನ್ನ ಸೂಚಿಸುತ್ತದೆ.

ಒಟ್ಟಾರೆ ಜಯಂತ ಕಾಯ್ಕಿಣಿಯವ ಕಥೆಗಳಲ್ಲಿ ಕುವೆಂಪು, ಲಂಕೇಶ್, ತೇಜಸ್ವಿ, ಕೃಷ್ಣಾ ಶಾಸ್ತ್ರಿ, ಕೆ.ಸದಾಶಿವ, ತರಾಸು ಮೊದಲಾದವರ ನಿರೂಪಣಾ ಶೈಲಿಗಿಂತ ಭಿನ್ನವಾಗಿರುವುದನ್ನ ಕಾಣುತ್ತೇವೆ. ಮುಂಬೈ ಜೀವನ ಅಷ್ಟೇ ಅಲ್ಲದೆ ಉತ್ತರ ಕನ್ನಡದ ಗೋಕರ್ಣದ ಹಲವಾರು ಸನ್ನಿವೇಶಗಳಿರುವುದು ಕಂಡು ಬರುತ್ತದೆ.

*****

ಅಧ್ಯಾಯ–೬

ಅಡಿ ಟಿಪ್ಪಣಿ

೧. ಆಧುನಿಕ ಕನ್ನಡ ಕಥಾ ಸಂಗ್ರಹ: ಸಂಪಾದಕರು
ಬಸವರಾಜ ಕಲ್ಗುಡಿ
ಪ್ರಕಟಣೆ–ಪ್ರಸಾರಾಂಗ ಮತ್ತು ಮುದ್ರಣಾಲಯ
ಬೆಂಗಳೂರು ವಿಶ್ವವಿದ್ಯಾನಿಲಯ
ಪ್ರಕಟಣೆ ವರ್ಷ – ೨೦೦೭
ಪುಟ ಸಂಖ್ಯೆ – ೪೫

೨. ಅದೇ ಪುಸ್ತಕ : ಪುಟ ಸಂಖ್ಯೆ – ೨೯೫

೩. ಅದೇ ಪುಸ್ತಕ : ಪುಟ ಸಂಖ್ಯೆ – ೨೯೩

೪. ಅದೇ ಪುಸ್ತಕ : ಪುಟ ಸಂಖ್ಯೆ – ೩೦೫

೫. ಕನ್ನಡ ಸಣ್ಣಕಥೆಗಳು : ಸಂಪಾದನೆ – ಜಿ.ಹೆಚ್. ನಾಯಕ
ಪ್ರಕಟಣೆ – ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ದೆಹಲಿ
ಪ್ರಕಟಣೆ ವರ್ಷ – ೨೦೧೫
ಪುಟ ಸಂಖ್ಯೆ – ೨೪

೬. ಅದೇ ಪುಸ್ತಕ : ಪುಟ ಸಂಖ್ಯೆ – ೨೭೦

೭. ಅದೇ ಪುಸ್ತಕ : ಪುಟ ಸಂಖ್ಯೆ – ೯೪

೮. ಅದೇ ಪುಸ್ತಕ : ಪುಟ ಸಂಖ್ಯೆ – ೯೬

೯. ಬಣ್ಣದ ಕಾಲು – ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ – ೨೦೧೪
ಪುಟ ಸಂಖ್ಯೆ – ೧೪

೧೦. ಅದೇ ಪುಸ್ತಕ : ಪುಟ ಸಂಖ್ಯೆ – ೨೭

೧೧. ಅದೇ ಪುಸ್ತಕ : ಪುಟ ಸಂಖ್ಯೆ – ೭೯

*****

ಅಧ್ಯಾಯ –೭

ಸಮಾರೋಪ

ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ನಗರ ಪ್ರಜ್ಞೆ ಎಂಬುದು ಮುಂದುವರೆಯುತ್ತಿರುವ ನಗರಗಳಲ್ಲಿ ಆಗುತ್ತಿರುವ ಬದಲಾವಣೆಗಳು ಹೊಂದಿಕೆಯಾಗುವಂತೆ ಇರುವ ಸೌಲಭ್ಯಗಳನ್ನ ಕುರಿತು ತಿಳಿಯಬಹುದಾಗಿದೆ. ೨೩ ವರ್ಷಗಳ ಕಾಲ ಮುಂಬೈನಲ್ಲಿ ಜೀವನ ಸಾಗಿಸಿದಂತ ಕಾಯ್ಕಿಣಿಯವರು ಅಲ್ಲಿಯ ಜನ ಜೀವನ, ಸೌಲಭ್ಯಗಳು, ಯಾವ ರೀತಿಯಾಗಿ ಸಾಮಾನ್ಯನೂ ಜೀವನವನ್ನು ಸಾಗಿಸಬಹುದು ಹಾಗೂ ಯಾವ ರೀತಿಯ ಕಷ್ಟ, ನೋವುಗಳನ್ನು ಅನುಭವಿಸಬೇಕೆಂಬುದು ತಿಳಿದುಬರುತ್ತದೆ. ನಗರ ಪ್ರದೇಶಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಬಂಡವಾಳಶಾಹಿಗಳ ಹಿಡಿತ, ತಂತ್ರಜ್ಞಾನ, ವಿಜ್ಞಾನ, ಜಾತಿವಾದ, ಕೋಮುವಾದ, ಹಲವಾರು ಸಮಸ್ಯೆಗಳಿದ್ದರೂ ಮುಂದುವರೆಯುತ್ತಿರುವ ಬೇರೆ ದೇಶಗಳಂತೆ ನಮ್ಮ ದೇಶಗಳ ನಗರಗಳೂ ಮುಂದುವರೆಯಬೇಕು. ಯುದ್ಧ, ಮಿಲಿಟರಿ, ರಕ್ಷಣೆ, ಮುಂದುವರೆದ ತಂತ್ರಜ್ಞಾನದಿಂದ ಅಭಿವೃದ್ಧಿ ಸಾಧಿಸಲು ಸಾಧ್ಯ. ಏನೇ ಸಮಸ್ಯೆಗಳಿದ್ದೂ ಪರಿಹರಿಸಿಕೊಳ್ಳಬೇಕೆಂದು ತಿಳುದುಬರುತ್ತದೆ.

ಸ್ವತ: ಸ್ವಂತ ದುಡಿಮೆಯಿಂದ ಜೀವನ ಸಾಗಿಸಬೇಕೆಂಬ ಹಂಬಲವುಳ್ಳವರು, ಉತ್ತಮ ಬದುಕನ್ನ ಕಟ್ಟಿಕೊಳ್ಳಲು ನಗರ ಪ್ರದೇಶಕ್ಕೆ ಬಂದವರು, ಮಾನವೀಯ ಮೌಲ್ಯಗಳನ್ನ ಹೊಂದಿದವರು, ಮೊದಲಾದವರನ್ನ ಕಾಣುತ್ತೇವೆ. ನಗರ ಪ್ರದೇಶ ಎಂದ ತಕ್ಷಣ ನಮ್ಮ ಕಣ್ಣಿಗೆ ಬೇಕಾದದ್ದು ಸಿಗುವ ಹಾಗೂ ಅನುಭವಿಸಬಹುದು ಎಂದು ತಿಳಿದಿದ್ದೇವೆ. ಅಲ್ಲಿಯೂ ಸಮಸ್ಯೆಗಳಿವೆ ಎಂಬುದು ನಮ್ಮ ಗಮನಕ್ಕೆ ಬರುವುದು ಮುಖ್ಯವಾಗುತದೆ. ಸುಖ, ದು:ಖ, ದಬ್ಬಾಳಿಕೆ, ದೌರ್ಜನ್ಯ ಮೊದಲಾದವುಗಳಿಂದ ಜೀವನವನ್ನ ಅರ್ಥೈಸಬಹುದಾಗಿದೆ.

ಒಟ್ಟಾರೆಯಾಗಿ ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ನಗರ ಜೀವನ ಎಂಬುದು ನಮ್ಮ ಬದುಕಿನ ಪ್ರಜ್ಞೆಯನ್ನ ಹಾಗೂ ಜೀವನವನ್ನು ಅರ್ಥೈಸಿಕೊಳ್ಳುವಿಕೆಯಲ್ಲಿ ತಿಳಿಸುವಂತಹುದಾಗಿದೆ.

ಅನುಬಂಧ

ಕಥಾ ಸಂಕಲನಗಳು

೧. ಅಮೃತಬಳ್ಳಿಯ ಕಷಾಯ– ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ – ೧೯೯೬

೨. ಚಾರ್ ಮಿನಾರ್ – ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ –

೩. ತೂಫಾನ್ ಮೇಲ್ – ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ – ೨೦೧೬

೪. ತೆರೆದಷ್ಟೇ ಬಾಗಿಲು – ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ – ೧೯೮೨

೫. ದಗಡು ಪರಬನ ಅಶ್ವಮೇಧ– ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ – ೧೯೮೯

೬. ಬಣ್ಣದ ಕಾಲು – ಜಯಂತ ಕಾಯ್ಕಿಣಿ,
ಪ್ರಕಟಣೆ – ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
ಪ್ರಕಟಣೆ ವರ್ಷ – ೨೦೧೫

ಪರಾಮರ್ಶನ ಗ್ರಂಥಗಳು

ಕ್ರಮ ಸಂಖ್ಯೆ	ಗ್ರಂಥ	ವಿವರ
೧.	ಅತ್ಯುತ್ತಮ ಸಣ್ಣ ಕಥೆಗಳು	ಸಂಪಾದಕರು– ಕೆ. ನರಸಿಂಹಮೂರ್ತಿ ಪ್ರಕಟಣೆ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,
೨.	ಆಧುನಿಕ ಕನ್ನಡ ಕಥಾಸಂಗ್ರಹ	ಸಂಪಾದಕರು – ಡಾ॥ ಬಸವರಾಜ ಕಲ್ಗುಡಿ ಪ್ರಕಟಣೆ : ಪ್ರಸಾರಾಂಗ ಮತ್ತು ಮುದ್ರಣಾಲಯ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಣಾ ವರ್ಷ : ೨೦೦೭
೩.	ಕಲ್ಲುಕರಗುವ ಸಮಯ	– ಪಿ.ಲಂಕೇಶ್ ಲಂಕೇಶ್ ಪ್ರಕಾಶನ, ಬೆಂಗಳೂರು ಪ್ರಕಟಣಾ ವರ್ಷ – ೨೦೧೨
೪	ಕಥೆಯಾದಳು ಹುಡುಗಿ	– ಯಶವಂತ ಚಿತ್ತಾಲ ಪ್ರಕಟಣೆ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಕಟಣಾ ವರ್ಷ – ೨೦೧೫
೫	ಕನ್ನಡ ಸಣ್ಣ ಕಥೆಗಳು	ಸಂಪಾದಕರು – ಜಿ.ಹೆಚ್. ನಾಯಕ ಪ್ರಕಟಣೆ : ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ದೆಹಲಿ ಪ್ರಕಟಣಾ ವರ್ಷ – ೨೦೧೫
೬	ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ	ಸಂಪಾದಕರು – ಚಿ.ಸಿ. ಲಿಂಗಣ್ಣ ಪ್ರಕಟಣೆ : ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ ಪ್ರಕಟಣಾ ವರ್ಷ – ೨೦೧೨
೭	ದ್ವಿತೀಯ ಪಿ.ಯು.ಸಿ. ಕನ್ನಡ ಭಾಷಾ ಪಠ್ಯಪುಸ್ತಕ	ಪ್ರಕಾಶಕರು – ಪದವಿಪೂರ್ವ ಶಿಕ್ಷಣ ಇಲಾಖೆ ೨೦೧೫–೨೦೧೬
೮	ಸುವರ್ಣ ಸಂಪದ ಬಿ.ಕಾಂ ೩ ಮತ್ತು ೪ನೇ ಸೆಮೆಸ್ಟರ್	ನಿರ್ದೇಶಕರು ಪ್ರಕಟಣೆ : ಪ್ರಸಾರಾಂಗ ಮತ್ತು ಮುದ್ರಣಾಲಯ ಬೆಂಗಳೂರು ವಿಶ್ವವಿದ್ಯಾನಿಲಯ
೯	ಸಾಹಿತ್ಯ ಸಂಚಲನ ಪ್ರಥಮ ಪಿ.ಯು.ಸಿ	ಪ್ರಕಾಶಕರು – ಪದವಿಪೂರ್ವ ಶಿಕ್ಷಣ ಇಲಾಖೆ ೨೦೧೫–೨೦೧೬
೧೦	ಹೊಸಗನ್ನಡ ಸಾಹಿತ್ಯ ಚರಿತ್ರೆ	ಸಂಪಾದಕರು – ಎಸ್.ಎಲ್. ಶೇಷಗಿರಿರಾವ್ ಪ್ರಕಾಶಕರು – ಅಂಕಿತ ಪ್ರಕಾಶನ, ಬೆಂಗಳೂರು